ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ
೭೮



ಅರಸೀಕೆರೆಯ ಶಿವನ ದೇವಾಲಯದಲ್ಲಿರುವ ಹಳೆಯ ಶಾಸನದ

ಸಂಚಯ ಗ್ಯಾಲರಿ



೧೦ನೇ ಶತಮಾನದ
ಬುದ್ಧನ ಕಂಚಿನ ವಿಗ್ರಹ
ಕದ್ರಿ, ದಕ್ಷಿಣ ಕನ್ನಡ ಜಿಲ್ಲೆ

ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೧೮ ■ ಸಂಚಿಕೆ : ೧(೭೮)

ಜನವರಿ – ಫೆಬ್ರವರಿ ೨೦೦೯

ಸಂಪಾದಕ :

ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪

email:
prahlad118@yahoo.com

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನುಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗೆಟ್ತೆ ಮಾಸದೇ

– **ಪಂಪ**
(ಆದಿಪುರಾಣ ಆ.೧೪: ಪ.೧೩೦)

ಚಂದಾವಿವರ

ಬಿಡಿ ಪ್ರತಿ: **ರೂ. ೪೦/-**

ವಾರ್ಷಿಕ ಚಂದಾ :
ರೂ. ೧೫೦/-

ಎರಡು ವರ್ಷಕ್ಕೆ :
ರೂ. ೩೦೦/-

ಐದು ವರ್ಷಕ್ಕೆ :
ರೂ. ೬೫೦/-

ಮುಖಪುಟ: ಹಲ್ಮಿಡಿ, ಮತ್ತು ಕಪ್ಪೆ ಅರಭಟನ ಶಾಸನಗಳು

ಈ ಸಂಚಿಕೆಯಲ್ಲಿ...

ಜಾರುವ ಕಾಲದಲ್ಲಿ ನನ್ನ ಊರಿನ ಚಿತ್ರಗಳು

ಕೆ.ಎಲ್. ಚಂದ್ರಶೇಖರ ಐಜೂರ್ ೫

ಸಾಹಿತ್ಯ ಸ್ಪರ್ಧೆ ೨೦೦೮ರ ಬಹುಮಾನಿತ ಕವಿತೆಗಳು ೧೩

- ಆರೋಲಿ ರಮೇಶ್ ● ಆರತಿ ಪಟ್ರಮೆ
- ಗೀತಾ ಜಿ. ಹೆಗಡೆ ● ಗಣೇಶ ಹೊಸ್ಮನೆ,
- ದೀಪಾ ಹಿರೇಗುತ್ತಿ ● ಬಾಲಸುಬ್ರಹ್ಮಣ್ಯ ಕೆ.ವಿ.
- ವಿಠಲ ದಳವಾಯಿ ● ವೀರಣ್ಣ ಮಡಿವಾಳರ

ಡಾ. ಕೆ.ವಿ.ನಾರಾಯಣ ಅವರೊಂದಿಗೆ ೨೯

ಶಾಸ್ತ್ರೀಯ ಭಾಷೆ ಕುರಿತು ಸಂದರ್ಶನ

ಡಿ.ವಿ.ಪ್ರಹ್ಲಾದ್

ಶಾಸ್ತ್ರೀಯ ಭಾಷೆಗಳು ವಾಸ್ತವ ಪರಿಸ್ಥಿತಿ ಮತ್ತು ೪೦

ಮೂಲ ಸಮಸ್ಯೆ

ಮೂಲ: ಶೆಲ್ಡನ್ ಪೋಲಕ್ ಅನು: ಎನ್.ಎಸ್. ಸುಬ್ಬಣ್ಣ

ಪ್ರಶಸ್ತಿಯ ಬೆಳಕು ಮತ್ತು ಬೆಳಗಿನಲ್ಲಿ ಶ್ರೀನಿವಾಸ ವೈದ್ಯ ೪೩

ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಸಂಗಜ್ಜ ನನಗೂ ಅಜ್ಜ ಛಾಯಾ ಭಗವತಿ ೪೯

ಮರೆಯಾದ ಮಾರ್ಗದರ್ಶಿ ಡಿ.ಆರ್. ಚಂದ್ರಮಾಗಡಿ ೫೫

ಬಹುವಚನ ೬೧

ಎಚ್.ಎಸ್.ವಿ. 'ಉತ್ತರಾಯಣ... ಮತ್ತು' ಕುರಿತು

ಎಸ್. ಮಂಜುನಾಥ್, ಆನಂದ ಝುಂಜರವಾಡ

ತಕರಾರು – ಕೆಲವು ಪ್ರತಿಕ್ರಿಯೆಗಳು ೬೯

ಎನ್. ಸುರೇಶ ನಾಗಲಮಡಿಕೆ

ಪುಸ್ತಕ ಪರಿಚಯ ೭೫

ಆರ್. ಸುಧೀಂದ್ರ ಕುಮಾರ್, ಎಸ್. ಹೇಮಾ

ಪ್ರತಿಕ್ರಿಯೆ ೮೧



ಹೊಳೆದದ್ದು ತಾರೆ ಉಳಿದದ್ದು ಆಕಾಶ !

ಪ್ರಿಯ ಓದುಗರೇ,

ಈ ಜನವರಿಯ ಛಳಿ ಮನಸ್ಸನ್ನು ಇನ್ನಷ್ಟು ಅಂತರ್ಮುಖಿಯಾಗಿಸುತ್ತದೆ. ಜಾಗತಿಕ, ಆರ್ಥಿಕ ಏರುಪೇರು ನಮ್ಮಗಳ ಸರಳ ಬದುಕಿನ ಅನೇಕ ಸಂಗತಿಗಳನ್ನು ತಟ್ಟಬಲ್ಲಷ್ಟು ಬಲವಾಗಿರುವುದು ಒಂದು ವಿಸ್ಮಯ ಮತ್ತು ವಿಷಾದ. ಕಳೆದ ವರ್ಷದ ಹಿಂಸೆ, ಭಯೋತ್ಪಾದನೆ, ಧಾರ್ಮಿಕ ಅಸಹಿಷ್ಣುತೆ ಇವುಗಳ ಭೀಕರ ಪರಿಣಾಮಗಳು ಮತ್ತೆ ಮತ್ತೆ ನೆನಪಿಗೆ ದಾಳಿ ಇಡುತ್ತಿವೆ. ಹಳೆಯದನ್ನ ಮರೆಯಿಸುವ, ನೋವುಗಳನ್ನು ಮಾಯಿಸುವ ಕಾಲದ ಬಗ್ಗೆ ಮನುಕುಲಕ್ಕೆ ಅಪಾರವಾದ ನಂಬಿಕೆ. ಪ್ರತಿ ಹೊಸ ವರ್ಷವೂ ನಂನಮ್ಮ ಬದುಕಿಗೆ ನೆಮ್ಮದಿಯನ್ನು, ಇನ್ನಷ್ಟು ಒಳಿತನ್ನು ತರಬಲ್ಲದು ಎಂಬ ನಂಬಿಕೆಯೇ ಬದುಕಿನ ಬಿಸುಪನ್ನು ಕಾಪಿಟ್ಟ ಸಂಗತಿ.

ಕನ್ನಡಕ್ಕೆ ಅಭಿಜಾತ ಭಾಷೆಯೆಂಬ ಸರ್ಕಾರಿ ಮನ್ನಣೆ ಸಿಕ್ಕಾಗ ನಾಡಿನ ತುಂಬಾ ಸಂಭ್ರಮವಿತ್ತು. ಶಾಸ್ತ್ರೀಯ ಭಾಷೆ ಎಂದರೇನು? ಅದರಿಂದ ಆಗುವ ಪ್ರಯೋಜನಗಳೇನು? ಅದನ್ನು ಯಾವ ಭಾಷೆಗೆ, ಯಾಕೆ ಕೊಡಲಾಗುತ್ತದೆ ಎಂಬ ಬಗ್ಗೆ ಅಂಥ ತಿಳುವಳಿಕೆ ಮಾಧ್ಯಮಗಳಲ್ಲಾಗಲಿ, ಅದನ್ನು ಸಾಧಿಸಬೇಕೆಂದು ಹೋರಾಡಿದವರಿಗಾಗಲಿ ಇರಲಿಲ್ಲ. ತಮಿಳುನಾಡಿಗೆ ಸಿಕ್ಕಿದ್ದು ನಮ್ಮ ಭಾಷೆಗೂ ಸಿಗಬೇಕೆಂಬ ಕುರುಡು ಹಟ ಅದರ ಹಿಂದಿತ್ತು. ಈ ಅಬ್ಬರದಲ್ಲಿ ಇಂಥ ಮನ್ನಣೆ ಕೊಟ್ಟುದರ ಹಿಂದಿನ ರಾಜಕೀಯ ಚಲನೆ-ಚಹರೆ ಹಾಗೂ ಅದರ ಗುಣಾತ್ಮಕ ಉಪಯುಕ್ತತೆ ಇಂಥವು ಮಸುಕಾಗಿಬಿಟ್ಟವು. ಇಂಥದ್ದೊಂದು ಮನ್ನಣೆಯನ್ನು ಅವಕಾಶವಾಗಿ ಭಾವಿಸಿ, ನಮ್ಮ ಯುವ ಪೀಳಿಗೆಗೆ ಕನ್ನಡದ ಭಾಷೆಯ ಬಗ್ಗೆ ಆಸಕ್ತಿ-ಅಧ್ಯಯನಗಳು ಸಾಧ್ಯವಾಗುವ ಹಾಗೆ ಯೋಜನೆಗಳನ್ನು ರೂಪಿಸಬೇಕಿದೆ. 'ಕನ್ನಡ ಕೊಡುವ ಭಾಷೆಯಾಗಬೇಕು..' ಅನ್ನುವ ಕೆ.ವಿ. ನಾರಾಯಣ ಅವರ ಮಾತಿನಲ್ಲಿ ಈ ಕುರಿತಾದ

ಮುಂದಾಲೋಚನೆ ಇದೆ. ಕಳೆದ ಮೂರು ಸಾವಿರ ವರ್ಷಗಳ ಅವಧಿಯಲ್ಲಿ ನಡೆದಿರುವ ನಮ್ಮ ಭಾಷೆಯ ವಿಕಾಸದ ಪ್ರಕ್ರಿಯೆಯಲ್ಲಿ ಎಲ್ಲ ಒಳ-ಹೊರಗಿನ ಘರ್ಷಣೆಗಳ ನಡುವೆ ಒಂದು ಜೀವಂತ ಭಾಷೆಯಾಗಿ ಉಳಿದುಬಂದಿರುವ ನಮ್ಮ ನುಡಿ ಆಧುನಿಕ ಅಮೆರಿಕನ್ ಏಕಸಂಸ್ಕೃತಿ ದಾಳಿಯಿಂದ ಅದರ ಸವಾಲುಗಳನ್ನು ಜೀರ್ಣಿಸಿಕೊಳ್ಳಲು ಸಮಯಾವಕಾಶ ಸಾಧ್ಯವಾಗಬೇಕಿದೆ. ಒಂದು ಸಮುದಾಯವಾಗಿ ನಾವು ನಮ್ಮ ಕಾಲದ ಜವಾಬ್ದಾರಿಗಳನ್ನು ಎಚ್ಚರದಿಂದ, ಬದ್ಧತೆಯಿಂದ ನಿರ್ವಹಿಸಬೇಕಾಗಿದೆ.

ಭೀಮಸೇನ ಜೋಷಿಯವರಿಗೆ ಸಂದ 'ಭಾರತ ರತ್ನ' ಗೌರವ ಕನ್ನಡಿಗರಲ್ಲೂ ಹೆಮ್ಮೆ ಮೂಡಿಸಿದೆ. ಜೋಷಿಯವರು ನಮ್ಮ ನಾಡಿನ ಗದುಗಿನಲ್ಲಿ ಹುಟ್ಟಿ ಬೆಳೆದು ಸಾಧನೆಯ ದಾರಿ ಸವೆಸಿದವರು. ಅವರು ನೆಲೆ ನಿಂತದ್ದು ಮಹಾರಾಷ್ಟ್ರದಲ್ಲೇ. ಆ ಮಟ್ಟಿಗೆ ಅವರು ಅಲ್ಲಿಗೂ ಸಲ್ಲುವವರೇ, ಅವರ ಭಾಷಿಕ ಪ್ರೀತಿಗಳಿಗಿಂತ ಸಂಗೀತದ ಬದ್ಧತೆ ದೊಡ್ಡದು. ಸಂಗೀತದಂಥ ಕಲೆಗೆ ನುಡಿಯ ಗಡಿಗಳಿಲ್ಲವಲ್ಲ!

ಮತ್ತೊಂದು ಸಾಹಿತ್ಯ ಸಮ್ಮೇಳನ ಸಜ್ಜುಗೊಳ್ಳುತ್ತಿದೆ. ಅದು ದೊಡ್ಡದಾದಷ್ಟು ಅದನ್ನು ನಡೆಸುವವರ ಹೆಮ್ಮೆ ದೊಡ್ಡದಾದೀತು. ಆದರೆ ಅದರಲ್ಲಿ ನಾಡು ನುಡಿಯ ವಿಷಯ ಸಾಹಿತ್ಯಕ ಚರ್ಚೆಗಳಿಗಿಂತ ಇತರ ವಿಷಯಗಳೇ ದೊಡ್ಡದಾಗಿ ವಿಜೃಂಭಿಸುತ್ತದೆ. ಲಕ್ಷಗಟ್ಟಲೆ ಜನದೊಂಬಿಯಲ್ಲಿ ಸಾಹಿತ್ಯ ಚರ್ಚಿಸಲಾಗದು. ಎಲ್ಲ ಅಬ್ಬರಗಳೂ ಕಳೆದ ಹೊತ್ತಿನಲ್ಲಿ ಸಣ್ಣ ಸಣ್ಣ ಸಮ್ಮಿಲನಗಳಲ್ಲಿ ಸಂವಾದ ಸಾಧ್ಯವಾದೀತು. ಅಂಥ ಕಡೆಗಳಲ್ಲಿ ಒಪ್ಪಿಗೆ ನಿರಾಕರಣೆ ಎರಡೂ ಸಾಧ್ಯ. ಕನ್ನಡದ ಪ್ರೀತಿಗೆ ತೋರಿಕೆಯ ಅಬ್ಬರದ ರಾಜಕಾರಣ ಲೇಪಗೊಂಡಷ್ಟೂ ಅದು ಕೃತಕವಾಗುತ್ತದೆ. ನಿಜದ ನೆಲೆಯಿಂದ ದೂರ ಸರಿಯುತ್ತದೆ. ನಮ್ಮ ಇತಿಹಾಸದ ಭಿತ್ತಿಯಲ್ಲಿ ಈ ರೀತಿಯ ಆಚರಣೆ ಇಟ್ಟು ನೋಡಿದಾಗ ಅವು ತಮ್ಮ ಮೌನದಲ್ಲಿ ನಮ್ಮ ದೊಂಬರಾಟ ಕಂಡು ನಗುತ್ತಿರುವಂತೆ ಭಾಸವಾಗುತ್ತದೆ.

ಎಂಟು ವರ್ಷಗಳ ನಂತರ ನಮ್ಮ ಪತ್ರಿಕೆ ಮತ್ತೊಮ್ಮೆ ದ್ವೈಮಾಸಿಕವಾಗಿದೆ. ಇನ್ನಷ್ಟು ಅಂಕಣಗಳು, ಹೊಸ ರೀತಿಯ ಬರಹಗಳು ಎರಡು ತಿಂಗಳಿಗೊಂದರಂತೆ ನಮ್ಮ ಓದುಗರ ಕೈ ಸೇರಲಿದೆ.

ಮತ್ತೆ ಮುಂದಿನ ಸಂಚಿಕೆಗೆ.

ನಿಮ್ಮ
ಸಂಪಾದಕ

ಲೇಖನ ಸ್ಪರ್ಧೆ ೨೦೦೮
ಬಹುಮಾನಿತ ಲೇಖನ

ಜಾರುವ ಕಾಲದಲ್ಲಿ ನನ್ನ ಊರಿನ ಚಿತ್ರಗಳು

ಕೆ.ಎಲ್. ಚಂದ್ರಶೇಖರ ಐಜೂರ್

ಚಿತ್ರ – ೧

ಪ್ರತಿ ಮುಂಜಾನೆ ನಸುಕಿನಲ್ಲಿ ನಿದ್ರೆಯಿಂದ ಬೇಗ ಎಚ್ಚರಗೊಳ್ಳುವ ಆ ಹುಡುಗ ಗೊಣಗುತ್ತಲೇ ತನ್ನ ಅಮ್ಮಿಜಾನ್ ತಂದು ಕೊಡುವ ಟೀ ಕುಡಿದು, ಉನ್ನಿಕೃಷ್ಣನ್ ಹೋಟೆಲ್‌ನಲ್ಲಿ ಎಂಥದ್ದೋ ಒಂದು ಹೊಟ್ಟೆಗೆ ತಿಂದು, ತನ್ನ ಹೆಗಲ ಮೇಲೆ ದೊಡ್ಡ ತಟ್ಟೆಯೊಳಗೆ ಮಿಠಾಯಿ ತುಂಬಿಕೊಂಡು, ತನ್ನ ಪ್ರೀತಿಯ ಹುಡುಗಿಯ ಮನೆ ಇರುವ ವಠಾರದ ಕಡೆ ಕಣ್ಣು ಹಾಯಿಸಿ, ಯಾರನ್ನೋ ಕಂಡವನಂತೆ ಮೀಸೆಯಡಿ ನಕ್ಕು, ಆ ಮೊಹಲ್ಲಾದ ಬೀದಿ ದಾಟಿ ಇನ್ನೊಂದು ಮೊಹಲ್ಲಾದ ತುದಿಯಲ್ಲಿರುವ ಹಜರತ್ ಖ್ವಾಜಾ ಗರೀಬ್ ನವಾಜರ ಮಸೀದಿಯೊಳಗೆ ಹಠಾತ್ ನುಗ್ಗಿ ಎಂದಿನಂತೆ ತನ್ನ ಅಲ್ಲಾಹುವಿಗೆ ಎದೆಯಾಳದ ನಮಾಜು ಸಲ್ಲಿಸುವ ಅವನ ಕಣ್ಣ ತುಂಬಾ ಆ ದಿನ ವ್ಯಾಪಾರವಾಗಬೇಕಾದ ಮಿಠಾಯಿ ಗರಿಗೆದರಿದೆ.

ಅವನ ನಿಷ್ಕಲ್ಮಶ ಪ್ರೀತಿಯನ್ನು ಅರ್ಥಮಾಡಿಕೊಳ್ಳಲು ಇನ್ನೂ ಹೆಣಗುತ್ತಿರುವ ಆ ಹುಡುಗಿ ಅವನು ಮಿಠಾಯಿ ಮಾರುವ ಜಾಗವನ್ನು ಹಾದುಹೋಗಿ ಕಾಲೇಜು ಸೇರುವಾಗ

ಆ ಹುಡುಗನ ನೆತ್ತಿಯ ಮೇಲೆ ಸುಡುಬಿಸಿಲಿನ ಸೂರ್ಯ ಧಗಧಗಿಸುತ್ತಿರುತ್ತಾನೆ. ಬಸ್ಸಿನೊಳಗೆ ಕೂತ ಪ್ರಯಾಣಿಕರಿಗೆ ಈ ಹುಡುಗನ ಧಾವಂತಗಳು ಅರ್ಥವಾಗುವುದಿಲ್ಲ. ಕಿಟಕಿಯ ಸರಳುಗಳಲ್ಲಿ ಮಿಠಾಯಿ ಮಾರುವ ಹುಡುಗನ ಕೈಗಳಿಗೆ ಎಷ್ಟೋ ಬಾರಿ ದುಡ್ಡು ಸಿಕ್ಕಿಲ್ಲ. ಅವನ ಉತ್ಸಾಹದ ಓಟವನ್ನು ಬಸ್ಸಿನ ವೇಗ ಸದಾ ಕೊಲ್ಲುತ್ತದೆ. ಮಳೆ, ಬಿಸಿಲಿಗೆ ಮಿಠಾಯಿ ಕೆಡದಂತೆ ನಡೆಸುವ ಇವನ ಪುಟ್ಟ ಸಾಹಸಗಳು ಉನ್ನಿಕೃಷ್ಣನ್ ಹೋಟೆಲಿನಲ್ಲಿ ಅಗ್ಗದ ರೇಟಿನ ಟೀ ಕುಡಿಯುವ ಎಲ್ಲರಿಗೂ ಗೊತ್ತು.

ಕಾಲೇಜಿನಿಂದ ಮರಳಿ ಬರುವ ಹುಡುಗಿಯರ ಗುಂಪಲ್ಲಿ ತನ್ನ ಹುಡುಗಿಯು ಇರುವುದನ್ನು ದೂರದಲ್ಲೇ ಗುರುತಿಸುವ ಇವನು, ಆ ಹುಡುಗಿಯರನ್ನು ರೇಗಿಸಲೆಂದೇ ಒಂದೆಡೆ ಸೇರಿರುವ ಪಡ್ಡೆಗಳ ಗುಂಪಲ್ಲಿ ಮಾತ್ರ ಕಾಣಸಿಗುವುದಿಲ್ಲ. ಈ ಹೊತ್ತಲ್ಲಿ ಅವನ ಆತಂಕದ ನಡೆಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸುವ ಆ ಹುಡುಗನ ಪುರಾತನ ದೋಸ್ತುಗಳ ಎದೆ ತುಂಬಾ ಬರೀ ಮಹಮ್ಮದ್ ರಫಿಯ ದರ್ದ್ ಭರೇ ಹಾಡುಗಳು...

ಚಿತ್ರ – ೨

ಈಚೆಗೆ ದೇವನಹಳ್ಳಿ ಕಡೆಯ ಜನ ವಿಚಿತ್ರ ಸಂಭ್ರಮದಲ್ಲಿದ್ದಾರೆ. ನಿಮ್ಮ ಊರು ಯಾವ ಕಡೆ ಬರುತ್ತದೆಂದು ಕೇಳಿದರೆ ಅವರು ಹೊಸದಾಗಿ ತಲೆ ಎತ್ತಿರುವ ಬೆಂಗಳೂರು ವಿಮಾನ ನಿಲ್ದಾಣದ ಕಡೆ ಕೈ ತೋರಿ 'ನಮ್ಮ ಹಳ್ಳಿ ವಿಮಾನ ನಿಲ್ದಾಣಕ್ಕೆ ಇಷ್ಟು ಸನಿಹದಲ್ಲಿದೆ, ವಿಮಾನ ನಿಲ್ದಾಣದಿಂದ ನಮ್ಮ ಕುಗ್ರಾಮ ಮಾರು ದೂರದಲ್ಲಿದೆ, ಏರ್‌ಪೋರ್ಟಿನ ಕೂಗಳತೆಗೆ ನಮ್ಮ ಮನೆ ಸಿಗುತ್ತದೆ' ಎಂದು ಖುಷಿಯಲ್ಲಿ ಹೇಳಿಕೊಳ್ಳುತ್ತಾರೆ. ತಮ್ಮ ಬಡ ಹಳ್ಳಿಗಳ, ತಮ್ಮ ಮನೆಯೊಳಗಿನ ನಿಜವಾದ ಸಂಕಟಗಳನ್ನು ಮರೆಮಾಚಿ ದೇವನಹಳ್ಳಿಯ ಜನ ತಮ್ಮ ಊರಿಗೆ ವಿಮಾನ ನಿಲ್ದಾಣ ಬಂದದ್ದೇ ಸೌಭಾಗ್ಯ ಎನ್ನುವಂತೆ ವರ್ತಿಸಲು ಶುರುಮಾಡಿದ್ದಾರೆ. ಅವರ ಸುಖದ ಸ್ವರ್ಗಕ್ಕೆ ಮೂರು ಗೇಣು ಕಮ್ಮಿಯಷ್ಟೇ. ಥೇಟು ದೇವನಹಳ್ಳಿ ಜನರಂತೆ ನನ್ನೂರು ರಾಮನಗರದ ಜನ ಕೂಡ ಎಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಇನ್ನು ನಮ್ಮ ಮನೆಗಳ ಬಡತನವೆಲ್ಲ ತೊಡೆದು ಹೋಗಲಿದೆ ಎಂಬ ಹೇಳಿಕೊಳ್ಳಲಾಗದ ಸುಖದ ನಿರೀಕ್ಷೆಗಳಲ್ಲೇ ದಿನ ಕಳೆದರು.

ಎಚ್.ಡಿ.ಕುಮಾರಸ್ವಾಮಿಯವರ ಆಡಳಿತಾವಧಿಯಲ್ಲಿ ರಾಮನಗರದ ಮಣ್ಣಿಗೆ ಚಿನ್ನದ ಬೆಲೆ ಬಂದು ಅದು ಬ್ರೇಕ್ ತುಂಡಾದ ಲಾರಿಯಂತೆ ಎತ್ತೆತ್ತಲೋ ನುಗ್ಗಿ, ಭೂಮಿಯನ್ನು ಕೇಕ್‌ನಂತೆ ಕತ್ತರಿಸಿ ಮಾರುವವರ ಮನೆಯೊಳಗಿನ ತಿಜೋರಿ ತುಂಬಿ, ತುಂಡು ನೆಲದ ಒಡೆಯರು ತಮ್ಮ ಚೂರುಪಾರು ಜಮೀನನ್ನು ಒಟ್ಟು ಮಾಡಿ ಬರೀ ಮಣ್ಣು ತಿಂದು ಬದುಕುವ ಬಡ್ಡಿಮಕ್ಕಳ ಪುಡಿಗಾಸಿಗೆ ಮಾರಿ, ಬಂದ ಹಣವನ್ನು ತಮ್ಮ ಹಳೆಯ ಖಯಾಲಿಯಾದ ಹೆಂಡದಂಗಡಿಗೆ ಸುರಿದು, ಎಲ್ಲವನ್ನೂ ಕಳೆದುಕೊಂಡು ಕಡೆಗೆ ಯಾರ್‍ಯಾರನ್ನೋ ಶಪಿಸುತ್ತಾ, ತಮ್ಮ ಸಾವಿಗೆ ದೇವರು ಇಲ್ಲದಿರುವುದನ್ನು ಕಂಡು ಇನ್ನಷ್ಟು ರೋಧಿಸುತ್ತಾ ಈ ಬದುಕೆಂಬ ಬಯಲ ಆಲಯದಲ್ಲಿ ನಾಳೆಗಳಿಗಾಗಿ, ನಾಳೆ ಬರುವ ನೆಮ್ಮದಿಗಾಗಿಯೋ, ಸಾವಿಗಾಗಿಯೋ ತಮ್ಮ ಜೀವಗಳ ಅಂಗೈಯಲ್ಲಿ ಹಿಡಿದು ಎಲ್ಲವನ್ನೂ ಕಳೆದುಕೊಂಡ ಬೋಡುಮರದಂತೆ ಚಿಂತಾಜನಕ ಸ್ಥಿತಿ ತಲುಪಿದ್ದಾರೆ. ಕಡೆಗೆ ಇಲ್ಲೀಗ ಕುಮಾರಸ್ವಾಮಿಯವರ ದರ್ಬಾರ್ ಕಮ್ಮಿಯಾಗಿ ಚಿನ್ನದ ಬಣ್ಣ ಮೆತ್ತಿಕೊಂಡಿದ್ದ ಮಣ್ಣೆಂಬ ಮಣ್ಣು ತನ್ನ ಸೊಕ್ಕು ಕಳೆದುಕೊಂಡು ಗೆದ್ದಲಿನೊಂದಿಗೆ ಹೊಸ ಸಂಬಂಧವೇರ್ಪಡಿಸಿಕೊಂಡಿದೆ. ಸದ್ಯಕ್ಕೆ ನನ್ನೂರಿನಲ್ಲಿ ದುಡ್ಡಿನ ಮಳೆ ಸುರಿಯುವುದು ನಿಂತಿದೆ. ಇಲ್ಲಿನ ಮಣ್ಣು ತನ್ನದಲ್ಲದ ತಪ್ಪಿಗಾಗಿ ಆಗೀಗ ದರ್ಪದ ಪೊಲೀಸರ ಮುಂದೆ, ಹೊಸ ತೀರ್ಪು ಹೇಳಲು ಹೊರಟಿರುವ ನ್ಯಾಯಾಧೀಶರ ಮುಂದೆ ತಲೆತಗ್ಗಿಸಿ ನಿಂತುಕೊಳ್ಳುವಂತಾಗಿದೆ.

ಚಿತ್ರ – ೩

ಸೂರ್ಯನು ಹುಟ್ಟುವ ಮುನ್ನವೇ ಬಸ್ ನಿಲ್ದಾಣ ತಲುಪುವ ಆ ಹುಡುಗಿಯರು ಸರ್ಕಾರಿ ಬಸ್ಸಿನಲ್ಲಿ ಹೊರಟರೆ ಐದು ರೂಪಾಯಿ ಹೆಚ್ಚು ಕೊಡಬೇಕಾಗುತ್ತದೆಂದು ಖಾಸಗಿ ಬಸ್‌ಗಳಿಗಾಗಿ ಗಂಟೆಗಟ್ಟಲೆ ಕಾದು, ಕಡೆಗೆ ಯಾವುದೋ ರಶ್ಶಿರುವ ಬಸ್ಸಿನೊಳಕ್ಕೆ ಹೇಗೋ ಜಾಗ ಮಾಡಿಕೊಂಡು ತೂರಿಕೊಳ್ಳುತ್ತಾರೆ. ಎಂಟಾಣೆಯೋ, ರುಪಾಯಿಯೋ ಕಡಿಮೆಯಾಗಿದ್ದಕ್ಕೆ ಕಂಡಕ್ಟರ್ ಈ ಹುಡುಗಿಯರೊಂದಿಗೆ ಕಿಲೋಮೀಟರ್‌ಗಟ್ಟಲೇ ಜಗಳವಾಡುತ್ತಾ ಬರುತ್ತಾನೆ. ತಾವು ಇಳಿಯುವ ಸ್ಥಳ ಬಂದ ಕೂಡಲೇ ಆ ಹುಡುಗಿಯರು ಜಾತ್ರೆಗೆ ಹೊರಟ ದಂಡಿನಂತೆ ರಸ್ತೆಯುದ್ದಕ್ಕೂ ತುಂಬಿಹೋಗಿ ಕಡೆಗೆ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಯೊಂದರೊಳಗೆ ನಡೆದುಹೋಗುತ್ತಾರೆ.

ಮನೆಯ ಬಡತನ ಈ ಹುಡುಗಿಯರನ್ನು ಬೆಂಗಳೂರಿನ ಗಾರ್ಮೆಂಟ್ಸ್ ಜಗತ್ತನ್ನು ಮುಟ್ಟುವಂತೆ ಮಾಡಿದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪಾಸಾದ ಹುಡುಗಿಯರು ಕೂಡ ತಮ್ಮ ಕನಸುಗಳನ್ನು ತಮ್ಮೊಳಗೆ ಕೊಂದುಕೊಂಡು ಯಾವತ್ತೂ ನೋಡದ ಬೆಂಗಳೂರು ಎಂಬ ಮಾಯಾಂಗನೆಯನ್ನು ತಬ್ಬಿಕೊಳ್ಳುತ್ತಿದ್ದಾರೆ. ಆ ಹುಡುಗಿಯರ ಕೈಗೆ ಸಿಗುವ ಸಣ್ಣ ಮೊತ್ತದ ಸಂಬಳ ಕಂಡು ನಗಾಡುವ ಬೆಂಗಳೂರು ತನ್ನ ನೀಚ ಕಣ್ಣುಗಳಿಂದ ಅವರನ್ನು ದುರುಗುಟ್ಟಿಕೊಂಡು ನೋಡುತ್ತದೆ. ಈ ಹುಡುಗಿಯರು ತರುವ ಸಂಬಳಕ್ಕಾಗಿ ಬದುಕಿರುವ ಅವರ ಅಪ್ಪಂದಿರು, ಆ ಹುಡುಗಿಯರು ಕೊಡುವ ದುಡ್ಡಿನಲ್ಲಿ ನೂರೋ, ಇನ್ನೂರೋ ಕಡಿಮೆಯಾದರೆ ಅವತ್ತೆಲ್ಲ ಮನೆಯನ್ನು ನರಕ ಮಾಡುತ್ತಾರೆ. ಅಳಿದುಳಿದ ಪುಡಿಗಾಸನ್ನೆಲ್ಲ ಸೇರಿಸಿ ಈ ಹುಡುಗಿಯರು ಸಂಕ್ರಾಂತಿಗೋ, ಉಗಾದಿಗೋ ಬಟ್ಟೆ ಕೊಳ್ಳುವ ಕನಸು ಕಾಣುತ್ತಾರೆ. ತಿಂಗಳಿಗೊಮ್ಮೆ ಕಡ್ಲೇಕಾಯಿ ಗೋಡೌನ್‌ನಂತಿರುವ ಶಾನ್ ಚಿತ್ರಮಂದಿರದಲ್ಲೋ, ಶ್ರೀರಾಮ ಟಾಕೀಸಿನಲ್ಲೋ ಮೂರನೇ ದರ್ಜೆಯ ಕನ್ನಡ ಸಿನಿಮಾ ನೋಡಿಕೊಂಡು ಬಿಕ್ಕುತ್ತಲೋ, ಅಳುತ್ತಲೋ ಮನೆ ಸೇರುತ್ತಾರೆ. ಈ ಹುಡುಗಿಯರ ತಾಯಂದಿರು ತಾವು ದಿನನಿತ್ಯ ನೋಡುವ ಟಿ.ವಿ. ಧಾರಾವಾಹಿಗಳ ಬಿಳಿ ಹುಡುಗಿಯರ ಸಂಕಟಗಳ ಮುಂದೆ ಕಣ್ಣೀರಾಗುತ್ತಾ, ತಮ್ಮ ಮಕ್ಕಳ ಅಸಲಿ ನೋವುಗಳು ಗೌಣವಾಗುತ್ತ, ಇನ್ನೂ ಹುಟ್ಟದಿರುವ ತಮ್ಮ ಮೊಮ್ಮಕ್ಕಳಿಗೆ ಕಾದಂಬರಿ, ಕಾವ್ಯಾಂಜಲಿ, ಅಭಿ ಎನ್ನುವ ಹೆಸರುಗಳಿಟ್ಟರೆ ಎಷ್ಟು ಚೆಂದ ಎನ್ನುವ ಲೆಕ್ಕಾಚಾರಗಳಲ್ಲಿ ಮುಳುಗಿಹೋಗಿದ್ದಾರೆ.

ಚಿತ್ರ – ೪

ನನ್ನೊಂದಿಗೆ ಬಾಲ್ಯದಲ್ಲಿ ಓದಿದ ಗೆಳೆಯರು, ಎಸ್.ಎಸ್.ಎಲ್.ಸಿ., ಪಿ.ಯು.ಸಿ. ದಾಟಲಾಗದೆ, ಓದು ಸುಸ್ತಾದ ಇನ್ನೂ ಅನೇಕರು ಈಗ ಜಾತಿ, ಭಾಷೆ, ಧರ್ಮಗಳ ಬಿಲಗಳಲ್ಲಿ ಅವಿತುಕೊಳ್ಳಲು ಶುರುಮಾಡಿದ್ದಾರೆ. ತಾವು ಹುಟ್ಟಿರುವುದೇ ಈ ದೇಶದ ಧರ್ಮ, ಭಾಷೆ, ಜಾತಿಯ ರಕ್ಷಣೆಗಾಗಿ ಎಂಬ ಧಿಮಾಕಿನ ಪೋಜಿನಲ್ಲಿ ಈಗ ಇವರೆಲ್ಲ ಹಾದಿ ಬೀದಿಯ ಪುಡಿ ನಾಯಕರಾಗಿ ಕಂಗೊಳಿಸುತ್ತಿದ್ದಾರೆ. ನನ್ನೊಂದಿಗೆ ಬಾಲ್ಯದ ಪ್ರಾಥಮಿಕ ಶಾಲೆಯಲ್ಲಿ ಅಮಾಯಕರಂತೆ ಕಂಡವರು ಈಗ ಮೂರನೇ ದರ್ಜೆಯ ಕನ್ನಡ ಸಿನಿಮಾಗಳ ನಾಯಕ ನಟರನ್ನು ಅನುಕರಿಸುತ್ತಾ, ಅವರ ಹೆಸರಿನ ಅಭಿಮಾನಿ ಸಂಘಗಳನ್ನು ಕಟ್ಟಿಕೊಂಡು ಸಿಕ್ಕಾಪಟ್ಟೆ ಬಿಜಿಯಾಗಿದ್ದಾರೆ. ಚಾಮುಂಡಿ, ಕರಗ, ಗಣೇಶನ ಹಬ್ಬ, ಕನ್ನಡ ರಾಜ್ಯೋತ್ಸವಗಳಲ್ಲಂತೂ ಈ ಹುಡುಗರ ಕೈತುಂಬಾ ಭರ್ತಿ ಕೆಲಸ.

ಓದು ಅರ್ಧಕ್ಕೆ ನಿಲ್ಲಿಸಿದ ನನ್ನೂರಿನ ಅನೇಕ ಹುಡುಗರು ಪುಂಡ ಗುಂಪುಗಳಾಗಿ, ರಿಯಲ್ ಎಸ್ಟೇಟ್

ದಂಧೇಕೋರರ, ದುಡ್ಡಿರುವ ದೌಲತ್ತಿನ ಮಾಲೀಕರ ತೋಳ್ಬಲಗಳಾಗಿ ಬಳಕೆಯಾಗುತ್ತಿರುವುದು ವರ್ತಮಾನದ ಚಿತ್ರ. ಈಗ ನನ್ನೂರಿನ ಉದ್ದಗಲಕ್ಕೂ ವಿನೈಲ್ ಮತ್ತು ಫ್ಲೆಕ್ಸ್ ಬೋರ್ಡುಗಳ ಕಂತ್ರಿ ಸಂಸ್ಕೃತಿಯೊಂದು ರೋಗವಾಗಿ ತಗುಲಿಕೊಂಡಿದೆ. ಈಗಷ್ಟೇ ಮುಖದಲ್ಲಿ ಮೀಸೆ ಕಾಣುತ್ತಿರುವ ಹುಡುಗರು ಯಾವನೋ ಎಸೆಯುವ ಪುಡಿಗಾಸಿಗೆ ಅವನನ್ನೇ ಒಂದು ಬೀದಿಯ ಮಹಾನಾಯಕನನ್ನಾಗಿಸಿ ರಸ್ತೆ ಬದಿಯ ಬೋರ್ಡಿನ ತುಂಬಾ ರಾರಾಜಿಸುವ ದಿವ್ಯ ಹಂಬಲದಲ್ಲಿದ್ದಾರೆ. ಕಾಳಸಂತೆಯ ಕಳ್ಳರನ್ನು, ರಿಯಲ್ ಎಸ್ಟೇಟ್ ದುಡ್ಡುಬಾಕರನ್ನು, ಹಡಬಿಟ್ಟಿ ದುಡ್ಡಿನ ನಿಸ್ಸೀಮರನ್ನು ಏಕಕಾಲಕ್ಕೆ ಈ ನೆಲದ ದೊಡ್ಡ ನಾಯಕರ ಅಕ್ಕಪಕ್ಕ ನಿಲ್ಲಿಸಿ ಪುಳಕಿತರಾಗುತ್ತಿರುವ ಪಡ್ಡೆ ಹುಡುಗರ ಚಿತ್ರಗಳು ನನ್ನೂರಿನ ಪ್ರತಿ ಬೀದಿಯಲ್ಲೂ ಕಣ್ಣಿಗೆ ಬೀಳುತ್ತದೆ.

ಬಾಲ್ಯದಲ್ಲಿ ನಮಗೆ ಕಣ್ಣಲ್ಲೇ ಗದರಿ ಬುದ್ಧಿ ಹೇಳಿ ಮನೆಗೆ ಕಳಿಸುತ್ತಿದ್ದ ಮೇಷ್ಟರುಗಳು ಈಗ ಎಲ್ಲೋ ಕಳೆದುಹೋಗಿದ್ದಾರೆ.

ಚಿತ್ರ – ೫

ಖಾಸಗಿ ಶಾಲೆಗಳ ನಾಜೂಕು ಮಾತಿಗೆ, ವಿಚಿತ್ರ ಇಂಗ್ಲಿಷಿಗೆ ಮತ್ತಷ್ಟೇ ವಿಚಿತ್ರವಾದ ಯೂನಿಫಾರ್ಮಿನ ಎದುರು ಪೈಪೋಟಿ ನೀಡಲಾಗದೆ ತರಗೆಲೆಯಂತೆ ಉದುರಿಹೋದದ್ದು ನನ್ನೂರಿನ ಸರ್ಕಾರಿ ಶಾಲೆಗಳು. ಹತ್ತಾರು ಹಳ್ಳಿಗಳಿಂದ ಮತ್ತಷ್ಟೇ ಮೈಲಿ ದೂರದಿಂದ, ನಾನು ಓದುತ್ತಿದ್ದ ಸರ್ಕಾರಿ ಶಾಲೆಗೆ ನಡೆದುಬರುತ್ತಿದ್ದ ನನ್ನ ಗೆಳೆಯರು ನೆನಪಿಗೆ ಬಂದರು. ಅವರು ಬರುವಾಗ ಇದ್ದ ಉತ್ಸಾಹ ಶಾಲೆ ಬಿಟ್ಟು ಹೊರಡುವಾಗಲೂ ಕಮ್ಮಿಯಾಗುತ್ತಿರಲಿಲ್ಲ. ಈಗ ಮಕ್ಕಳನ್ನು ಕಾನ್ವೆಂಟಿಗೆ ಕರೆದೊಯ್ಯಲು ಶಾಲಾ ವ್ಯಾನ್‌ಗಳು ಮಕ್ಕಳ ಮನೆಯ ಮುಂದೆ ಬಂದು ನಿಲ್ಲುತ್ತವೆ. ಆ ಮಕ್ಕಳನ್ನು ಖೈದಿಗಳಂತೆ ತುಂಬಿಕೊಂಡು ಹೋಗುವ ಡ್ರೈವರ್, ಆಧುನಿಕ ಶಿಕ್ಷಣ ನೀಡುತ್ತೇವೆಂಬ ಸೋಗಿನಲ್ಲಿ ಆ ಪುಟಾಣಿಗಳ ಹೆತ್ತವರನ್ನು ಹಾಡಹಗಲೇ ಸುಲಿಯುವ ಆ ಕಾನ್ವೆಂಟ್ ಮಂದಿ ಎಲ್ಲರೂ ಸರ್ಕಾರಿ ಶಾಲೆಯ ಗೋರಿಗಳ ಮೇಲೆ ತಮ್ಮ ಅಸ್ತಿತ್ವ ಸ್ಥಾಪಿಸುತ್ತಿದ್ದಾರೆ ಎನಿಸುತ್ತದೆ. ಹಲ್ಲು ಕಚ್ಚಿ ಪಾಠ ಮಾಡಲೇಬೇಕೆಂಬ ಉತ್ಸಾಹದ ಮೇಷ್ಟರುಗಳು ಸರ್ಕಾರಿ ಶಾಲೆಯಲ್ಲಿ ಕಮ್ಮಿಯಾಗಿ ರಜೆಗಳನ್ನು ಸವಿಯುತ್ತಲೋ ಆಕಳಿಸುತ್ತಲೋ ವೃತ್ತಿ ಸವೆಸುತ್ತಿರುವ ನನ್ನೂರಿನ ಸರ್ಕಾರಿ ಶಾಲೆಯ ಮೇಷ್ಟರುಗಳು ಯಾವತ್ತೋ ತೀರಿಹೋಗಿದ್ದಾರೆ.

ಇವತ್ತು ನಾನು ಓದಿದ ಸರ್ಕಾರಿ ಶಾಲೆಯು ಗುರುತು ಸಿಗದಷ್ಟು ವಿರೂಪವಾಗಿದೆ. ಪುಂಡ ಪೋಕರಿಗಳಿಗಂತೂ ನನ್ನ ಶಾಲೆಯ ಮೈದಾನ ಕುಡಿದು ತಿಂದು ತೇಗುವ ಗೆಸ್ಟ್ ಹೌಸಿನಂತಾಗಿದೆ. ಈ ಶಾಲೆಯಲ್ಲಿ ಓದಿದ ನೆನಪು ಬಹುಶಃ ತನ್ನ ಸ್ನೇಹಿತರು ಮರೆತುಹೋಗಿರಬಹುದು. ದಿನಾ ಶಾಲೆಯ ಎದುರು ನಡೆದುಹೋಗುವಾಗ, ನಾನು ಓದಿದ ಶಾಲೆ ನನ್ನ ಪೂರ್ವಿಕರು ಬಿಟ್ಟುಹೋಗಿರುವ ಯಾವುದೋ ಪುರಾತನ ವಸ್ತುವಿನಂತೆ ಕಾಣುತ್ತದೆ. ಅದಕ್ಕೆ ಜೀವ ತುಂಬುವ ಮಾತುಗಳನ್ನು ನಾನು ಹೇಳಲಾರೆ. ಹೇಗಿದ್ದರೂ ಸಾಯುತ್ತಿರುವ ನನ್ನ ಶಾಲೆಗೆ ಒಳ್ಳೆಯ ಸಾವಾದರೂ ಬರಲಿ ಎಂದು ನನ್ನೊಳಗೆ ನಾನೇ ಕುಸಿದು ಕೇಳಿಕೊಳ್ಳುತ್ತೇನೆ.

ಚಿತ್ರ – ೬

ಹಸಿರು ರೇಷನ್ ಕಾರ್ಡ್‌ಗಾಗಿ ತಾವು ಮಾಡುವ ದಿನಗೂಲಿ ಕೆಲಸ ಬಿಟ್ಟು ವಾರಗಟ್ಟಲೇ ತಾಲ್ಲೂಕು ಆಫೀಸಿನ ತಹಶೀಲ್ದಾರ್ ಕಛೇರಿ ಮುಂದೆ ಅಲೆಯುವ ಜನ, ಹಸಿರು ಕಾರ್ಡ್ ಸಿಕ್ಕರೆ ಮಾತ್ರ ನಾವು ಅನ್ನವನ್ನು ನೋಡಲು ಮತ್ತು ಬದುಕಲು ಸಾಧ್ಯ ಎಂದುಕೊಂಡಿರುವ ಜನ, ಇನ್ನೂರು ರೂಪಾಯಿ ವಿಧವಾ

ವೇತನಕ್ಕೋ, ವೃದ್ಧಾಪ್ಯ ವೇತನಕ್ಕೋ ಅಂಚೆಪೇದೆಯನ್ನು ನಿರೀಕ್ಷೆಯ ಭಾರದಲ್ಲಿ ಬೆತ್ತಲೆ ರಸ್ತೆಯಲ್ಲಿ ಹಸಿದ ಹಕ್ಕಿಗಳಂತೆ ಕಾಯುವ ಜನ, ಇಪ್ಪತ್ತು ರೂಪಾಯಿ ಮುರಿದುಕೊಂಡೇ ಉಳಿದ ಹಣ ಕೊಡುವ ಕಿಲಾಡಿ ಅಂಚೆಪೇದೆ... ಇವೆಲ್ಲ ನನ್ನೂರಿನ ನಿತ್ಯ ಹಸಿರಿನ ಚಿತ್ರಗಳು. ಕಡು ಬಡವರ ಪಾಲಿನ ಹಸಿರು ರೇಷನ್ ಕಾರ್ಡ್‌ಗಳನ್ನು ಪುಡಿ ರಾಜಕಾರಣಿಗಳ ಚಮಚಾಗಳಿಗೆ ಮಾರಿಕೊಳ್ಳುವ ಸರ್ಕಾರಿ ಜನ, ಕಮಿಷನ್ ಕೊಡದಿದ್ದರೆ ವಿಧವೆಯರನ್ನು, ಇಳಿವಯಸ್ಸಿನ ಹೆಂಗಸರನ್ನು ಅಂಚೆ ಇಲಾಖೆಗೂ, ಟ್ರೆಜರಿಗೂ ಅಲೆದಾಡಿಸುವ ಸರ್ಕಾರಿ ಜನ ಕೂಡ ನನ್ನೂರಿನ ನಿತ್ಯ ಹಸಿರಿನ ಚಿತ್ರಗಳೇ.

ಚಿತ್ರ – ೭

ನನ್ನೂರಿನ ಚಿತ್ರ ಈಗ ಸಂಪೂರ್ಣ ಬದಲಾಗಿದೆ. ಹಳೆಯ ಸಾಲ ತೀರಿಸಲು ಹೊಸ ಸಾಲ ಮಾಡಿ ಬಡ್ಡಿ ಹಣ ಸುಲಿಯುವ ರಾಕ್ಷಸರಿಂದ ಬದುಕು ನರಕವಾಗಿಸಿಕೊಳ್ಳುತ್ತಿದ್ದ ಜನ ಈಗ ಎಚ್ಚೆತ್ತುಕೊಂಡಿದ್ದಾರೆ. ನನ್ನೂರಿನಲ್ಲಿ ರೈತರು ತೀರಾ ಕಮ್ಮಿ. ರೈತರ ಸಾಲ ಮಾತ್ರ ತೀರಿಸಲು ಉತ್ಸಾಹ ತೋರುವ ಈ ಸರ್ಕಾರಗಳ ಮಲತಾಯಿ ಧೋರಣೆಯಿಂದ ವ್ಯಗ್ರರಾಗಿರುವ ನನ್ನೂರಿನ ಕೂಲಿ ಕಾರ್ಮಿಕರು ತಾವು ಮಾಡಿದ ಎಲ್ಲ ಬಗೆಯ ಸಾಲಗಳನ್ನು ಒಂದೇ ಏಟಿಗೆ ತಾವೇ ತೀರಿಸಬೇಕೆಂದು ಹಟದಿಂದ ತಮ್ಮ ದೇಹದ ಕಿಡ್ನಿಯನ್ನೇ ಮಾರಿಕೊಳ್ಳಲು ಸಿದ್ಧರಾದರು. ಕಿಡ್ನಿ ಕೊಟ್ಟವರನ್ನು ಮತ್ತು ಕಿಡ್ನಿ ಕಸಿದುಕೊಂಡವರನ್ನು ಶಿಕ್ಷಿಸುವ ಯಾವುದೇ ಕಾನೂನುಗಳ ಬಗ್ಗೆ ನನ್ನೂರಿನ ಪೊಲೀಸರಿಗೆ ಮತ್ತು ವಕೀಲರಿಗೆ ಹೆಚ್ಚಿನ ಮಾಹಿತಿ ಇಲ್ಲವಂತೆ. ಹೀಗಾಗಿ ಈ ದಂಧೆಗೆ ನನ್ನೂರಿನಲ್ಲಿ ಕಡು ಬಡವರ ಮಧ್ಯೆ ಹೆಚ್ಚಿನ ಬೇಡಿಕೆ ಇದೆ.

ಚಿತ್ರ – ೮

ಓದು ಸುಸ್ತಾದ ನನ್ನ ಕೆಲವು ಗೆಳೆಯರು ಅಡ್ಡದಾರಿ ಹಿಡಿದಂತೆ, ಇನ್ನೂ ಅನೇಕರು ಬೆಂಗಳೂರಿನ ಪಾಲಾಗಿ ಎಲ್ಲೆಲ್ಲಿಯೋ ಕಳೆದುಹೋದರು. ಅವರ್‍ಯಾರು ಮರಳಿ ನನ್ನೂರು ತಲುಪಿದ ಸುದ್ದಿ ಇನ್ನೂ ಬಂದಿಲ್ಲ, ಅವರನ್ನು ಬೆಂಗಳೂರು ನುಂಗಿಹಾಕಿತೋ ಅಥವಾ ಬದುಕು ನುಂಗಿಹಾಕಿತೋ ಗೊತ್ತಿಲ್ಲ, ನನ್ನೂರು ಮಾತ್ರ ಅವರನ್ನು ಇನ್ನೂ ನೆನಪಿಟ್ಟುಕೊಂಡಿದೆ. ಅವರನ್ನು ತಡವಿ ಸಂತೈಸಲು ಕಾಲವೆಂಬ ಹಣ್ಣಣ್ಣು ಮುದುಕಿ ಅವರನ್ನು ಹುಡುಕಿ ಅಲೆಯುತ್ತಿರಬಹುದೇ?

ಚಿತ್ರ – ೯

ದಶಕ ಹಿಂದೆ ತನ್ನ ಪುಟ್ಟಕ್ಯಾಮೆರಾದೊಂದಿಗೆ ದೂರದ ಕೇರಳದಿಂದ ಬೂಬಿ ಫಿ ಮ್ಯಾಥ್ಯೂಸ್ ಎಂಬ ಹುಡುಗ ಕಪ್ಪು ಬಿಳುಪು ಚಿತ್ರ ತೆಗೆಯುತ್ತಲೇ ಬಣ್ಣದ ಚಿತ್ರಗಳಿಗೆ ಜಿಗಿದು ತನ್ನ ಸಣ್ಣ ಸೈಜಿನ ಸ್ಟುಡಿಯೋವನ್ನು ಸ್ವಲ್ಪ ದೊಡ್ಡದು ಮಾಡಿಕೊಂಡ. ಕೇರಳದಲ್ಲಿದ್ದ ತನ್ನ ತಾಯಿ ಮತ್ತು ತಂಗಿಗೆ ಮನಿ ಆರ್ಡರ್ ಕಳಿಸುವಾಗ ಗೆಳೆಯರಿಗೆಲ್ಲ ತಪ್ಪದೇ ಟೀ ಕುಡಿಸುತ್ತಿದ್ದ, ನಡುರಾತ್ರಿ ನಡೆಯುತ್ತಿದ್ದ ವಿಶ್ವಕಪ್ ಫುಟ್‌ಬಾಲ್ ಶುರುವಾಗಿ ಮುಗಿಯುವವರೆಗೂ ಅವನ ಸ್ಟುಡಿಯೋ ನಮ್ಮ ತಾತ್ಕಾಲಿಕ ಗೂಡಾಗಿರುತ್ತಿತ್ತು. ಕ್ರಮೇಣ ನನ್ನೂರಿಗೂ ಪ್ರವೇಶಿಸಿದ ಜಾಗತೀಕರಣ, ಕಂಪ್ಯೂಟರ್, ಡಿಜಿಟಲ್ ಕ್ಯಾಮೆರಾಗಳು ನನ್ನ ಗೆಳೆಯ ಬೂಬಿಯ ಪುಟ್ಟ ಸ್ಟುಡಿಯೋವನ್ನು ಚಿಂದಿ ಮಾಡಿದವು. ಬೂಬಿಯ ಹಳೆಯ ಕ್ಯಾಮೆರಾಕ್ಕೆ ಮುಖ ಕೊಡಲು ಜನ ಹಿಂಜರಿಯುತ್ತಿದ್ದರು. ಒಂದೆರಡು ತಿಂಗಳು ಕೇರಳದಲ್ಲಿದ್ದ ತನ್ನ ತಾಯಿ ತಂಗಿಯರಿಗೆ ದುಡ್ಡು ಕಳಿಸಲು ಸಾಧ್ಯವಾಗುತ್ತಿಲ್ಲವೆಂದು ಪತ್ರ ಬರೆದು ಸುಮ್ಮನಾದ.

ಕಡೆಗೊಂದು ದಿನ ಬೂಬಿ ಹಠಾತ್ ಏನೋ ನಿರ್ಧರಿಸಿಕೊಂಡವನಂತೆ ತನ್ನ ಹೆಗಲ ಮೇಲಿನ ಕ್ಯಾಮೆರಾ ಬಿಸಾಡಿ ಕುವೈತ್‌ಗೆ ಹೊರಟು ನಿಂತ. ಕುವೈತ್‌ಗೂ ಮತ್ತು ನನ್ನೂರಿನ ನಡುವೆ ಎಷ್ಟು ಅಂತರ ಎಂಬುದು ತಕ್ಷಣಕ್ಕೆ ಹೊಳೆಯಲಿಲ್ಲ. ಬಹುಶಃ ಈಗ ಬೂಬಿ ಫಿ ಮ್ಯಾಥ್ಯೂಸ್ ಎಂಬ ಗೆಳೆಯ, ಕುವೈತ್ ಎಂಬ ಅವನು ಮಾತ್ರ ಮುಟ್ಟಿರುವ ದೇಶದಲ್ಲಿ ದೊಡ್ಡ ಸೈಜಿನ ಸ್ಟುಡಿಯೋದಲ್ಲಿ ಕೆಲಸ ಸಿಕ್ಕಿರಬಹುದಾ? ನಿಜಕ್ಕೂ ಗೊತ್ತಿಲ್ಲ.

ಚಿತ್ರ – ೧೦

ಈ ಘನವೆತ್ತ ನಾಡಿಗೆ ಮೂವರು ಮುಖ್ಯಮಂತ್ರಿಗಳನ್ನು ಕೊಟ್ಟೆವೆಂದು ಬೀಗುತ್ತಿರುವ ನನ್ನೂರಿನ ಜನ ದಲಿತರನ್ನು ಬೇಟೆಯಾಡುವುದರಲ್ಲಿ ಮಾತ್ರ ಸದಾ ಮುಂದು. ದಲಿತರನ್ನು ವಂಚಿಸುವುದನ್ನೇ ಹವ್ಯಾಸ ಹಾಗೂ ಉದ್ಯೋಗ ಮಾಡಿಕೊಂಡಿರುವ ನನ್ನೂರಿನ ಬಲಿಷ್ಠ ರೈತಾಪಿ ಕೋಮಿನ ಜನಕ್ಕೆ ತಿಳಿ ಹೇಳುವ ನಾಯಕರು ಮಾತ್ರ ಇನ್ನೂ ಹುಟ್ಟಿಕೊಂಡಿಲ್ಲ. ಅವರನ್ನು ರಕ್ಷಿಸಿ ಸರಿದಾರಿಗೆ ತರುವ ಪೊಲೀಸ್ ಠಾಣೆಗಳು, ಕೋರ್ಟ್‌ಗಳು ನನ್ನೂರಿನ ಯಾವ ಮೂಲೆಯಲ್ಲೂ ಜಾರಿಯಲ್ಲಿಲ್ಲ. ಇವತ್ತು ದೊಡ್ಡ ಊರಿನಲ್ಲಿ ಹೆಚ್ಚು ಓದಿಕೊಂಡು, ಒಳ್ಳೆಯ ಬಟ್ಟೆ ಧರಿಸಿ, ತನ್ನ ಶ್ರಮದಿಂದ ದುಡಿದು ಹೊಟ್ಟೆ ತುಂಬ ಉಂಡು ನಿಂತಿರುವ ದಲಿತನ ನಗು ಬಲಿಷ್ಠ ಕೋಮಿನ ಜನರ ಒಡಲಲ್ಲಿ ವಿನಾಕಾರಣದ ಬೆಂಕಿಯುಂಡೆಗಳು ಉತ್ಪತ್ತಿಯಾಗುವಂತೆ ಮಾಡುತ್ತಿದೆ. ಮೇಲ್ಜಾತಿ ಜನರು ನಡೆಸುವ ಎಲ್ಲ ದೌರ್ಜನ್ಯದ ನಡುವೆಯೂ ಇವತ್ತು ನನ್ನೂರಿನ ದಲಿತರು ತಮ್ಮ ಬದುಕುವ ಅನಿವಾರ್ಯ ಆಟವನ್ನು ಮಾತ್ರ ನಿಲ್ಲಿಸಿಲ್ಲ.

ಚಿತ್ರ – ೧೧

ನಾವು ನಿತ್ಯ ಬಳಸುವ ಅಗತ್ಯದ ವಸ್ತುಗಳು ಆಕಾಶದ ತುದಿ ಮುಟ್ಟುತ್ತಿರುವಂತೆ ನನ್ನೂರಿನ ಮತದಾರ ಕೂಡ ತನ್ನ ರೇಟನ್ನು ದುಪ್ಪಟ್ಟು ಮಾಡಿಕೊಂಡು ಕೂತಿದ್ದಾನೆ. ಹಿಂದಿನ ಚುನಾವಣೆಗಳಂತೆ ಬರೀ ಬಿರಿಯಾನಿ ಪೊಟ್ಟಣಕ್ಕೆ ತೃಪ್ತನಾಗುವವನಲ್ಲ ಇಲ್ಲಿನ ಮತದಾರ. ತನ್ನ ಮತದ ಮೌಲ್ಯದ ಬಗ್ಗೆ ಹೆಚ್ಚು ಗೌರವ ಇಟ್ಟುಕೊಂಡಿರುವ ಮತದಾರ ಅದಕ್ಕೆ ತಾನೇ ಒಂದು ಮೌಲ್ಯವನ್ನು ನಿಗದಿ ಪಡಿಸಿದ್ದಾನೆ. ಒಂದೊಮ್ಮೆ ತನ್ನ ಮತ ಮೌಲ್ಯದ ಲೆಕ್ಕಾಚಾರ ಹೆಚ್ಚು ಆಸ್ಥೆ ವಹಿಸುತ್ತಾನೆ. ಇಷ್ಟರ ನಡುವೆಯೂ ಆಗೀಗ ನನ್ನೂರಿನ ಮತದಾರ ಜಾತಿ, ಧರ್ಮಗಳನ್ನು ಗಟಾರಕ್ಕೆಸೆದು ಹೆಚ್ಚು ದುಡ್ಡು ಕೊಟ್ಟವನ ಪಾದಕ್ಕೆ ತನ್ನ ಮತವನ್ನು ಅರ್ಪಿಸುವ ಗಿಲೀಟುತನವನ್ನು ಕಲಿತುಕೊಂಡಿದ್ದಾನೆ. ಕಳೆದ ಚುನಾವಣೆಯಲ್ಲಿ ಅದನ್ನು ಯಶಸ್ವಿಯಾಗಿ ನಿಭಾಯಿಸಿಯೂ ಇದ್ದಾನೆ.

ಚಿತ್ರ – ೧೨

ನಾವು ಚಿಕ್ಕವರಿದ್ದಾಗ ದಿನಪೂರ್ತಿ ಕ್ರಿಕೆಟ್ ಆಡುತ್ತಿದ್ದ ಮೈದಾನ ಕಳೆದುಹೋಗಿ ಅಲ್ಲೀಗ ಮೂರು ಅಂತಸ್ತಿನ ಮನೆಗಳು ತಲೆಯೆತ್ತಿವೆ. ಅಗ್ರಹಾರದ ಬೀದಿಯ ದೇವಸ್ಥಾನಗಳು 'ಪ್ರಗತಿ' ಸಾಧಿಸಿದಷ್ಟೇ ವೇಗದಲ್ಲಿ ಹಿಂದುಳಿದವರ ಕೇರಿಯ ದೇವರುಗಳು ಬಲಿತುಕೊಂಡಿದ್ದಾರೆ. ನಾನು ಓದಿದ ಶಾಲೆಯ ಎದುರು ಖಾಲಿ ಬಿದ್ದಿದ್ದ ಜಾಗವನ್ನು ಮಸೀದಿ ಕಟ್ಟಲಿಕ್ಕೋ ದೇವಸ್ಥಾನ ಕಟ್ಟಲಿಕ್ಕೋ ಕೊಡಬೇಕೆಂದು ಎರಡು ಕೋಮಿನ ಜನ ಒಬ್ಬರ ಮೇಲೊಬ್ಬರು ಕೆಂಡ ಕಾರುತ್ತಾ ನಗರಸಭೆ ಆಯುಕ್ತರ ಕಚೇರಿ ಅಲೆಯುತ್ತಾ ದಿನ ಸವೆಸುತ್ತಿದ್ದಾರೆ. ಇಲ್ಲಿನ ಸೈಟುಗಳ ಬೆಲೆ ಏರಿದಷ್ಟೇ ತೀವ್ರಗತಿಯಲ್ಲಿ ವಕೀಲರು, ವೈದ್ಯರು ತಮ್ಮ

ದಂಧೆಯ ಶುಲ್ಕವನ್ನು ಹೆಚ್ಚಿಸಿಕೊಂಡಿದ್ದಾರೆ. ಕಳೆದ ವರ್ಷ ಚಿಕೂನ್ ಗುನ್ಯಾ ರೋಗ ನನ್ನೂರಿಗೆ ದಾಳಿ ಇಟ್ಟಾಗ ಹಿಂದೆಂದೂ ಕಾಣದ ದುಡ್ಡನ್ನು ಇಲ್ಲಿನ ವೈದ್ಯರು, ಮೆಡಿಕಲ್ ಸ್ಟೋರ್ ಇಟ್ಟುಕೊಂಡವರು ಕಂಡರು. ದಲಿತರನ್ನು ಬಡವರನ್ನು ವಂಚಿಸುವ ಹೊಸ ಬಗೆಯ ಕಲೆಗಳನ್ನು ಇಲ್ಲಿನ ತಾಲ್ಲೂಕು ಕಚೇರಿಯ ಗುಮಾಸ್ತರು, ತರಕಾರಿ ಮಾರುಕಟ್ಟೆಯ ಏಜೆಂಟರು ಕಲಿತುಕೊಂಡಿದ್ದಾರೆ. ಇನ್ನು ದೇವಸ್ಥಾನಗಳ ಅರ್ಚಕರು ಖುದ್ದು ದೇವರ ಸಾನಿಧ್ಯಕ್ಕೆ ಕರೆದೊಯ್ಯುವ ವಿಶೇಷ ಪೂಜೆಗಳನ್ನು ಆಗಾಗ ಹೆಚ್ಚು ದುಡ್ಡು ಕೊಡುವ ಭಕ್ತಾದಿಗಳ ಮನೆಯಲ್ಲಿ ನೆರವೇರಿಸುತ್ತಾರೆ. ಒಂದೊಂದು ಬಗೆಯ ಪೂಜೆಗೂ ಒಂದೊಂದು ರೇಟಿರುವ ನವೀಕೃತ ಬೋರ್ಡ್‌ಗಳು ಈಗ ನನ್ನೂರಿನ ಪ್ರತಿ ದೇವಸ್ಥಾನದ ಹೆಬ್ಬಾಗಿಲಿನಲ್ಲಿ ನೇತಾಡುತ್ತಿವೆ.

ಚಿತ್ರ – ೧೩

ಮೂವತ್ತು ರೂಪಾಯಿ ಕೊಟ್ಟರೆ ಹೊಸ ಖಾಲಿ ಕೆಸೆಟ್ಟಿನ ತುಂಬಾ ಮಹ್ಮದ್ ರಫಿ , ಮುಖೇಶ್, ಕಿಶೋರ್ ಕುಮಾರರ ದುಃಖಭರಿತ ಹಾಡುಗಳನ್ನು ರೆಕಾರ್ಡ್ ಮಾಡಿಕೊಡುತ್ತಿದ್ದ ಮೆಹಬೂಬ್ ನಗರ ಮತ್ತು ಎಂ.ಜಿ.ರಸ್ತೆಯ ಕೆಸೆಟ್ ಅಂಗಡಿಗಳು ಈಗ ತಮ್ಮ ಚಹರೆಯನ್ನು ಸಂಪೂರ್ಣ ಬದಲಿಸಿಕೊಂಡಿವೆ. ಅಲ್ಲೀಗ ಕೆಸೆಟ್‌ಗಳನ್ನು ರೆಕಾರ್ಡ್ ಮಾಡಿಕೊಡುವುದಿಲ್ಲ ಬದಲಿಗೆ ಅದೇ ದುಡ್ಡಿಗೆ ನೂರು, ನೂರೈವತ್ತು ಹಾಡುಗಳಿರುವ ರಫಿ, ಮುಖೇಶ್, ಕಿಶೋರ್‌ಕುಮಾರರ ಎಂ.ಪಿ.೩ ಸಿ.ಡಿ.ಗಳನ್ನು ಕೊಡುತ್ತಾರೆ. ಟೇಪ್ ಕೆಸೆಟ್ಟಿನಲ್ಲಿ ಕೇಳುತ್ತಿದ್ದ ದುಃಖಭರಿತ ಹಾಡುಗಳ ಮಾಧುರ್ಯ ಭರ್ತಿ ಸಿ.ಡಿ.ಗಳಲ್ಲಿ ಕೇಳುವ ಹೊತ್ತಿಗೆ ಪೇಲವ ಅನ್ನಿಸಲು ಶುರುವಾಗುತ್ತದೆ.

ಬರೀ ಸಿಡಿಗಳನ್ನು ಮಾರಿ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅರಿತುಕೊಂಡಿರುವ ಅಂಗಡಿ ಮಾಲೀಕರು ತಮ್ಮ ಅಂಗಡಿಯೊಳಕ್ಕೆ ಪೆಪ್ಸಿ ಕೋಲಾ, ಥಮ್ಸಪ್‌ಗಳನ್ನು ಬಿಟ್ಟುಕೊಂಡಿದ್ದಾರೆ. ಮಹಮ್ಮದ್ ರಫಿಯ ರೊಮ್ಯಾಂಟಿಕ್ ಹಾಡುಗಳನ್ನು ದೊಡ್ಡ ದನಿಯಲ್ಲಿ ಹಾಡುತ್ತಾ ಯಾರಬ್ ನಗರ ಮತ್ತು ಬಿಸ್ಮಿಲ್ಲಾನಗರದಗಳ ತುಂಬಾ ಓಡಾಡುತ್ತಿದ್ದ ಆ ಹುಡುಗರು ಮಾತ್ರ ಕಾಲವೆಂಬ ದೊಡ್ಡ ಬಜಾರಿನ ದೋಣಿಯೊಳಗೆ ಕೂತು ಎಲ್ಲೆಲ್ಲಿಯೋ ಚದುರಿಹೋಗಿದ್ದಾರೆ.

ಚಿತ್ರ – ೧೪

ದಲಿತ ಸಂಘಟನೆ, ರೈತ ಸಂಘ, ಸ್ತ್ರೀಶಕ್ತಿಗಳು ನನ್ನೂರಿನ ಕೆಲವು ಹಳ್ಳಿಗಳಲ್ಲಿ ಪ್ರಖರವಾಗಿದ್ದರೂ ಅವನ್ನೆಲ್ಲ ನುಂಗಿ ಹಾಕಬಲ್ಲ ದೈತ್ಯ ತಾಕತ್ತನ್ನು ನನ್ನೂರಿನ ಎಲ್ಲ ಬಗೆಯ ರಾಜಕೀಯ ಪಕ್ಷಗಳು ಪಡೆದುಕೊಂಡಿವೆ. ಸರ್ಕಾರ ನೀಡುವ ಸಹಾಯಧನಕ್ಕಾಗಿ, ಸಬ್ಸಿಡಿಗಳಿಗಾಗಿ ಸಹಕಾರಿ ಬ್ಯಾಂಕುಗಳ ಮುಂದೆ, ಸಮಾಜ ಕಲ್ಯಾಣ ಇಲಾಖೆಗಳ ಎದುರು ತಬರನಂತೆ ಕಾಯುವುದರಲ್ಲಿ ಮಾತ್ರ ನನ್ನೂರಿನ ಜನ ನಿಜಕ್ಕೂ ಕಲ್ಲೆದೆಯವರು. ಎಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪನವರು ಸರ್ಕಾರಿ ಶಾಲೆಯಲ್ಲಿ ಕಲಿಯುವ ಹೆಣ್ಣು ಮಕ್ಕಳಿಗೆಂದೇ ಕೊಡಿಸಿದ ಸೈಕಲ್‌ಗಳನ್ನು ಅವರ ಅಪ್ಪಂದಿರು ಪೇಟೆ ಸುತ್ತಲು ಬಳಸಿಕೊಂಡರೆ, ಇನ್ನೂ ಕೆಲವರ ಸೈಕಲ್‌ನ ಬಿಡಿ ಭಾಗಗಳು ವರ್ಷ ತುಂಬುವುದಕ್ಕೂ ಮುನ್ನವೇ ರಸ್ತೆಯುದ್ದಕ್ಕೂ ಎಲ್ಲೆಲ್ಲೋ ಉದುರಿಹೋಗಿವೆ. ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಸಿಗಬೇಕಾದ ಸೀಮೆಎಣ್ಣೆ ಬ್ಯಾರೆಲ್‌ಗಳು ಕಾಳಸಂತೆಯಲ್ಲಿ ಮಾತ್ರ ಸಿಗುವಂತಹ ವ್ಯವಸ್ಥೆ ನನ್ನೂರಿನಲ್ಲಿದೆ. ಸಾಹಿತ್ಯದ ಗಂಧವೇ ಇಲ್ಲದ, ತಮ್ಮ ಬದುಕಿನಲ್ಲಿ ಸಾಹಿತ್ಯದ ಯಾವ ಪಾಠವನ್ನೂ ಓದಿರದ ದಡ್ಡ ಶಿಖಾಮಣಿಗಳು ಇಲ್ಲಿ ಸಾಹಿತ್ಯ ಪರಿಷತ್ತುಗಳನ್ನು ಕಟ್ಟಿಕೊಂಡು ಅದರ ಅಧಿನಾಯಕರಂತೆ ಮೆರೆಯುತ್ತಿದ್ದಾರೆ. ಇವರು

ಸಂಘಟಿಸುವ ಸಾಹಿತ್ಯ ಸೆಮಿನಾರುಗಳಲ್ಲಿ ಸ್ಥಳೀಯ ರಾಜಕಾರಣದ ಪುಡಾರಿಗಳು ಕಾವ್ಯವಾಚನ ಮಾಡುತ್ತಾರೆ. ಈಚೆಗೆ ಇಂಥವರ ಕೈಗೆ ಬಂಜಗೆರೆ ಜಯಪ್ರಕಾಶರ ಕೃತಿಯೊಂದು ಸಿಕ್ಕಿ ಹಾಡಹಗಲೇ ಅತ್ಯಾಚಾರಕ್ಕೀಡಾಯಿತು. ಇನ್ನು ನನ್ನೂರಿನ ಪುಡಿ ಕವಿಗಳೆಲ್ಲ ತಮ್ಮ ಅಮೂಲ್ಯ ಸಾಹಿತ್ಯದ ಕೃತಿಗಳನ್ನು ಇವೇ ಇಂಥ ನಿರಕ್ಷರಿ ಪಂಡಿತರುಗಳಿಂದ ಮುನ್ನುಡಿ ಬೆನ್ನುಡಿ ಬರೆಸಿಕೊಂಡು ಪುಸ್ತಕ ಪ್ರಕಟಣೆಗೆ ದುಡ್ಡು ಚೆಲ್ಲಿ ನೆರವಾದ ಸ್ಥಳೀಯ ಕ್ರಿಮಿನಲ್‌ಗಳ ಪಾದಕ್ಕರ್ಪಿಸಿ ಧನ್ಯರಾಗುತ್ತಿದ್ದಾರೆ.

ಚಿತ್ರ – ೧೫

ನನ್ನೂರು ರಾಮನಗರ ಬೆಟ್ಟ ಸಾಲುಗಳ ಊರು. ಇಲ್ಲಿನ ಒಂದೊಂದು ಬೆಟ್ಟಕ್ಕೂ ಚಾರಿತ್ರಿಕ ಹಿನ್ನೆಲೆಯಿದೆ. 'ಶೋಲೇ' ಯಂತಹ ಬಾಲಿವುಡ್‌ನ ಸಾರ್ವಕಾಲಿಕ ಶ್ರೇಷ್ಠ ಚಿತ್ರವೊಂದು ಸಂಪೂರ್ಣವಾಗಿ ಚಿತ್ರೀಕರಣಗೊಂಡದ್ದು ನನ್ನೂರಿನ ರಾಮದೇವರ ಬೆಟ್ಟದ ತಪ್ಪಲಲ್ಲಿ. ಈಗ ಇಂಥ ಐತಿಹಾಸಿಕ ಮಹತ್ವವನ್ನು ಹೊಂದಿರುವ ಬೆಟ್ಟಗಳ ಬಗ್ಗೆ ಅಂಥಾ ಅರಿವಿಲ್ಲದ ಖ್ವಾರಿ ಧಣಿಗಳು ಹೆಬ್ಬಂಡೆಗಳ ಒಡಲು ಸೀಳಿ ನಗದು ಮಾಡಿಕೊಳ್ಳುವ ತರಾತುರಿಯಲ್ಲಿದ್ದಾರೆ. ಅಂತೆಯೇ ನನ್ನೂರಿನ ಹೃದಯ ಭಾಗದಲ್ಲಿ ಹರಿದು ಕಾವೇರಿ ನದಿ ಸೇರುವ ಅರ್ಕಾವತಿ ನದಿಯ ಕರುಳಿಗೆ ಕಾರ್ಖಾನೆ ಖೂಳರು ವಿಷ ತುಂಬಿ ಮಲಿನಗೊಳಿಸಿದ್ದಾರೆ. ಎಂಭತ್ತರ ದಶಕದಲ್ಲಿ ಸೇತುವೆ ಮಟ್ಟ ತುಂಬಿ ಹರಿಯುತ್ತಿದ್ದ ಅರ್ಕಾವತಿ ಈಗ ದೊಡ್ಡ ಮೋರಿ ಎಂಬ ಕುಖ್ಯಾತಿಯೊಂದಿಗೆ ಅದೇ ಕಾವೇರಿಯತ್ತ ಬಿಕ್ಕುತ್ತಾ ತೆವಳುತ್ತಿದ್ದಾಳೆ.

ಚಿತ್ರ – ೧೬

ಒಮ್ಮೆ www.wikimapia.com ನ ಕದ ಬಡಿದರೆ ಸಾಕು ನನ್ನೂರು ಯಾವುದೇ ವೈಯ್ಯಾರವಿಲ್ಲದೆ ತೆರೆದುಕೊಳ್ಳುತ್ತದೆ. ತನ್ನ ವಯಸ್ಸನ್ನು ಮರೆಮಾಚಲು ಬ್ಯೂಟಿಪಾರ್ಲರ್ ಹೊಕ್ಕು ಬಂದ ಮುದಿ ಹೆಂಗಸಿನಂತೆ ಯಾವತ್ತು ನನ್ನೂರು ಕಾಣುವುದಿಲ್ಲ, ನನ್ನೂರು ನನ್ನ ಅವ್ವನ ಸುಕ್ಕುಗಟ್ಟಿದ ಮುಖದಂತೆ, ಪೊದೆಯೊಂದರಲ್ಲಿ ಹಾವು ಕಂಡ ಹುಡುಗನೊಬ್ಬ ಹೆದರಿ ಓಡಿ ಮತ್ತೆ ಮತ್ತೆ ಆ ಪೊದೆಯತ್ತಲೇ ಬಂದು ಇಣುಕುವ ವಿಸ್ಮಯದಂತೆ ಕಾಣುತ್ತದೆ. ನಾನು ಓದಿದ ಸರ್ಕಾರಿ ಶಾಲೆ, ನಡೆದಾಡಿದ ರಸ್ತೆಗಳು, ಅರ್ಕಾವತಿ ನದಿ, ಗಡಿಯಂತೆ ಸುತ್ತುವರಿದಿರುವ ಬೆಟ್ಟಸಾಲು, ಗುಲಗಂಜಿ ಗಾತ್ರದ ನನ್ನ ಮನೆ, ಗುರುತೇ ಸಿಗದ ಆ ಹುಡುಗಿಯ ಮನೆ, ಮಿಠಾಯಿ ಮಾರುವ ಹುಡುಗರ ದಂಡು, ಮೆಹಬೂಬ್ ನಗರದಲ್ಲಿ ಮಹಮ್ಮದ್ ರಫಿ, ಮುಖೇಶ್, ಕಿಶೋರ್ ಕುಮಾರರು ಅವಿತುಕೊಂಡಿರುವ ಜಾಗ ಈ ಎಲ್ಲವನ್ನೂ ತೋರಿಸುವ ಅಂತರ್ಜಾಲದ ಮಾಯಾವಿ, ಜೀವತುಂಬಿಕೊಂಡು ನನ್ನೂರಿನ ಒಂದೇ ಒಂದು ಚಿತ್ರವನ್ನು ಮಾತ್ರ ಕೊಡಲಾರ.

★

ಇವೆಲ್ಲವೂ ನಾನು ಕಂಡಿರುವ, ನಾನಷ್ಟೇ ಹೇಳಬಹುದಾದ ನನ್ನೂರಿನ ಚಿತ್ರಗಳು. ನನ್ನೂರಿನ ಚಿತ್ರಗಳನ್ನು ಒಂದೇ ಪಟ್ಟಿಗೆ ತೋರಿಸಲು ಸಾಧ್ಯವಾಗುವುದಿಲ್ಲ, ನನ್ನ ಬೊಗಸೆಗೆ ಸಿಕ್ಕ ಬಿಡಿಬಿಡಿ ಚಿತ್ರಗಳನ್ನು ಮಾತ್ರ ಹೆಕ್ಕಿ ಹೀಗೆ ಇಲ್ಲಿ ನಿಮ್ಮೆದುರು ಹರವಿಕೊಂಡಿದ್ದೇನೆ.

S/o ಕೆ.ಲಿಂಗಪ್ಪ, ಮನೆ ನಂ. ೦೯. ಎಂಐಜಿ, ಕೆಎಚ್‌ಬಿ
ಬಡಾವಣೆ, ಐಜೂರು, ನೀರಿನ ಟ್ಯಾಂಕ್ ರಸ್ತೆ
ರಾಮನಗರ ತಾಲ್ಲೂಕು, ಜಿಲ್ಲೆ - ೫೭೧ ೫೧೧
ಸಂಪರ್ಕ : ೯೮೮೦೯ ೧೪೫೭೮

ಸಾಹಿತ್ಯ ಸ್ಪರ್ಧೆ 2008
ಬಹುಮಾನಿತ ಕವನಗಳು

ಸ್ಮಶಾನಗಳು ಮುಚ್ಚುತ್ತಿವೆ ಮನುಷ್ಯರಿದ್ದರೆ ಕಳುಹಿಸಿ!

ಆರೋಲಿ ರಮೇಶ

೧. ದೀಪಗಳು ಮಲಗುವ ಹೊತ್ತು
ಬಹಳ ಹಿಂದಿನ ಮಾತೇನಲ್ಲ
ಕೋಟೆಗೋಡೆಯ ಕೆಳಗೆ
ಅವಿತ ಕತ್ತಲಿನಲಿ
ಹುಟ್ಟು ಹಬ್ಬಕೆ ಹುಣ್ಣಿಮೆ ನೋಡೆಂದವರು
ಸಂಜೆಯೊಂದಿಗೆ ಸಂಚು ಹೂಡಿದ್ದು
ಅರಿಯದೆ ಅಮಾಯಕ ಗಾರೆ ಕೆಲಸದ ಹುಡುಗರು
ಸುರಿದ ನಲ್ಲೆಯರ ನೆನಪಿನಾ ಮಳೆಗೆ
ನಕ್ಷತ್ರ ಹೂತಿಟ್ಟು ಆಲಿಕಲ್ಲು ಆಯುತ್ತಿದ್ದರು!

೨. ಬಿರಿದ ಎದೆಗಳ ಮೇಲಾಣೆ
ನೀವು ರಾಮಕೋಟಿಯ ಬರೆವಾಗ
'ರಾತ್ರಿಗಳು ಇಷ್ಟು ಸುದೀರ್ಘ ಏಕೆಂದು'
ಇಲ್ಲಿ ದೈವ ಪಟದೆದುರು
ಧರಣಿ ಹೂಡಿದ್ದರು ಮುದಿ ಸೂಳೆಯರು!
ಭಾಷಣದ ಚಪ್ಪಾಳೆಗೆ
ಕೇಳಿಸಿರಲಿಕ್ಕಿಲ್ಲ ಹೆಣಬಿದ್ದ ಸದ್ದು
ಹಾದ ಬುಲೆಟ್ಟಿನ ವೇಗ
ಪೇದೆಯೆದೆಗೆ ಮತ್ತೊಂದು ನಕ್ಷತ್ರ ತಂದಿದ್ದು!

೩. ಹಾಗೆ ಉಸಿರಾಟದಲ್ಲೇಕೋ ಸಂದೇಹವೀಗ
ಹುಡುಗನಿಗೂ ಅನುಮಾನ
ತೋಪಿನಲಿ ತೂರಿಬಿಟ್ಟ ಮುತ್ತು
ಆಕೆ ತನಗೆ ತಲುಪಿಲ್ಲ ಎಂದಾಗ!

೪. ದೇವರ ಮೇಲಾಣೆ ಆತನಿಗೂ
ನೆಮ್ಮದಿಯಿಲ್ಲ ಈಗ!

ಹಲ್ಲಿ ಆಕಳಿಸುವ ಗಳಿಗೆ
ಬೆಟ್ಟ ಕೆಳಗಿಟ್ಟ ಹನುಮನಿಗೆ ಗುಮಾನಿ
ಹೆಬ್ಬೆರಳ ಬೇಡಿದ್ದು ಅನುಮಾನಿಸಿದ
ಬೇಡರ ಹುಡುಗ ಕಟಕಟೆ ಹತ್ತುತ್ತಿರಲು!
ಕಾಲು ಸೋತ ಶಿಲಾಬಾಲಿಕೆ
ಜಾಹೀರಾತು ನೋಡುತ್ತಿದ್ದಾಳೆ ಕೂತು
ಶ್ರಮಿಸುವ ಪಾದಗಳಿಗಾಗಿ
ಶ್ರಮಿಸುವ ಚಪ್ಪಲಿ!

೫. ಇಂದು ಸಂಜೆ ಸಮಾಧಿಯ ಮೇಲೆ
ಸೌಗಂಧಿಯ ಹೆರಿಗೆ
ಸಹಿಸಲಾಗುತ್ತಿಲ್ಲ ಪಾಪ ಮೊದಲ ನೋವು
ಅಮಾಯಕ ಹಕ್ಕಿ ಮರಿಗೆ!
ದಯವಿಟ್ಟು, ಶವಗಳು ಸಿಂಗರಿಸಿವೆ
ಸ್ಮಶಾನಗಳು ಮುಚ್ಚುವ ಮುನ್ನ
ಮನುಷ್ಯರಿದ್ದರೆ ಕಳುಹಿಸಿ!

ಜನತಾ ಕಾಲೋನಿ, ಅಸ್ಕಿಹಾಳ ನಗರ
ತಾ॥ ಜಿ॥ ರಾಯಚೂರು - ೫೮೪ ೧೦೨

ಹೊಸಿಲುಗಳು

ಆರತಿ ಪಟ್ರಮೆ

ಹೊಸಿಲ ಮೇಲೆ ನಿಂತು
ಯೋಚಿಸುತ್ತಿದ್ದೇನೆ –
ಒಳಗಲ್ಲದ ಹೊರಗಲ್ಲದ
ಇಲ್ಲೇ
ಹಿರಣ್ಯಕಶಿಪು ಮಡಿದದ್ದು
ಒಳಹೊರಗಿನ ಗೊಂದಲ
ಅವನಿಗಿತ್ತೋ ಗೊತ್ತಿಲ್ಲ
ಸತ್ತದ್ದು ಸ್ಪಷ್ಟ.

ಪರ್ಣಕುಟಿಯಲ್ಲಿ
ಸೀತೆಗೇನೂ
ಹೊಸ್ತಿಲುಗಳಿರಲಿಲ್ಲ–
ದಾಟುವುದಕ್ಕೆ
ಲಕ್ಷ್ಮಣರೇಖೆಯ
ಸಂಕೇತ ಅಷ್ಟೇ.
ಯಾಕೋ ದಾಟಿಬಿಟ್ಟಳು
ಕೊನೆಗೆ
ಅಗ್ನಿಪರೀಕ್ಷೆಗೊಳಗಾಗುವುದಕ್ಕೆ

ಅಸ್ಪಷ್ಟತೆ
ನನ್ನನ್ನು ತಡೆಹಿಡಿದಿದೆ
ಹೆಜ್ಜೆಯೆತ್ತಿಡದಂತೆ!
ಒಂದು ಹೆಜ್ಜೆಯ
ಹೊರಗಿಟ್ಟಲ್ಲದೆ
ಹೊಸಿಲ ಮೇಲೆಯೇ
ತಿರುಗಿ
ಒಳಮುಖವಾಗುವುದು ಹೇಗೆ?
ಮುಮ್ಮುಖವಾಗಿಯೇ
ಹಿಂದೆ ನಡೆದೇನೆಂದರೆ
ಸಾವ ಘಳಿಗೆಯ
ಸುಯೋಧನನಾಗುವ ಭೀತಿ

ಹೊಸ್ತಿಲಲ್ಲಿ ನಿಂತು
ಕನಸ ಮಾರಹೊರಟವಳೀಗ
ಕನಸು ಕಟ್ಟುತ್ತಿದ್ದೇನೆ

ಒಳಗೂ ಹೊರಗೂ
ಬೆಳಗುವುದು
ಹೊಸಿಲ ಮೇಲಿನ ದೀಪವಷ್ಟೇ?

ನಂ, ೭-೩೧/೪, ಸನ್‌ಶೈನ್ ಕಾಂಪೌಂಡ್
ಆಲಗುಡ್ಡ, ಕೋಡಿಕಲ್, ಅಶೋಕನಗರ ಪೋಸ್ಟ್
ಮಂಗಳೂರು - ೫೭೫ ೦೦೬, ಮೊಬೈಲ್ : ೯೪೪೯೭೪೮೪೦

ಆಕಾಶಕ್ಕೆ ಆಯ್ಕೆ...

ಗೀತಾ ಜಿ. ಹೆಗಡೆ

ಆಕಾಶಕ್ಕೆ ಆಯ್ಕೆಯಿಲ್ಲ!
ದಿನ ಬೆಳಗು ಹುಟ್ಟುವ
ಸೂರ್ಯ
ದಿನ ರಾತ್ರಿಯ ಹುಟ್ಟುವ
ಚಂದ್ರ

ಹಗಲು ನಿರಾಮಯ
ಯೋಜನೆಗಳಿಲ್ಲದ ಸಮಯ
ಶತಕೋಟಿ ಗಾವುದ ಮೈ
ಚೆಲ್ಲಿದರೂ ತೀರ –
ದ ಕ್ಷಿತಿಜ.

ಗಿರಕಿ ಹೊಡೆಯುವ ತರ–
ಗೆಲೆ ಎರೆಹುಳಕೆ
ಋತುಗಾನದುಬ್ಬರಕೆ
ರುಜುವಾಗುವ ಲಯಕೆ
ಮಣ್ಣ
ಗೊಬ್ಬರವಾಗಿಸುವ ಬಯಕೆ

ಮೋಡ ಕಟ್ಟಿದ ರಭಸ
ಆಕಾಶದಲ್ಲಿ
ಸುರಿದ ಕುಂಭದ್ರೋಣ
ಕೆಳಹರಿದು
ಪೊರೆವ ನೆಲ.

ಆಕಾಶಕ್ಕೆ ಆಯ್ಕೆಯಿಲ್ಲ!

ಲಕ್ಷ ಹಕ್ಕಿಗಳು ರೆಕ್ಕೆ
ಬೀಸಿ ಬೀಸಿ ಬೀಸಿ
ಹಾರುತ್ತವೆ ಹೊಡಮರಳಿ
ಗೂಡು ಕಟ್ಟುವುದೆಲ್ಲಿ
ಆಕಾಶದಲ್ಲಿ?

ಮಿಟುಕಿಸಲು ಕಣ್ಣ
ರೆಪ್ಪೆಯಿಲ್ಲದ ನಿರಂತರ
ಅವಲೋಕನದವಲೋಕನದವಲೋ....

ನಿಶಾಕಾವ್ಯಕೆ ಮದ–
ವೇರಿಸಲು ಸುರೆ
ಸೊರೆಹಾಕಿದ ತಾರೆ

ಅವುಚಿಕೊಳ್ಳುವ ಕನಸು
ಮತ್ತೆ – ಮತ್ತೆ
ಮಗುಚಿಕೊಳ್ಳುವ ಬೆಳಕು
....

ಆಕಾಶಕ್ಕೆ ಆಯ್ಕೆ ಬೇಡ!

D/o ಶ್ರೀ ಜಿ.ಎನ್. ಹೆಗಡೆ, ‘ಸ್ವಸ್ತಿ’, ಗಣಪತಿ ಗಲ್ಲಿ
ಸಿದ್ದಾಪುರ (ಉ.ಕ) - ೫೮೧ ೩೫೫



ವಿದಾಯ

ಗಣೇಶ ಹೊಸ್ಮನೆ

ಎರಡು ಗಳಿಗೆಯ ಮಾತು
ಮೂರು ಗಳಿಗೆಯ ಮೌನ
ಹಾಡಿ ಮುಗಿಸಿದ ಹಾದಿಯಂಚಿನ
ಹೊಲದ ಮುದುಕ
ಬೀಡಿ ಹಚ್ಚಿದ್ದಾನೆ,
ಇನ್ನೇನು ಚೆಲ್ಲಲಿದ್ದ ನಿಟ್ಟುಸಿರು
ಕವಿದ ಹೊಗೆಯೊಳಗೆ ಸುಟ್ಟು
ಬೂದಿಯಾಗಿದೆ.

ಬೆರಳಾಡಿಸಿ ಹಣೆಯ ನೆರಿಗೆಗಳ ಮೇಲೆ
ಸಂತೈಸಿ ಕೆನ್ನೆಯ ಸುಕ್ಕುಗಳ
ಕೊಡವಿ ಬೂದಿ ಎಳೆದು ಬೀಡಿ
ಕೊಡವಿ ಬೂದಿ ಎಳೆದು ಬೀಡಿ
ಮುದುಕ ರಸ್ತೆ ದಿಟ್ಟಿಸುತ್ತಾನೆ,
ಚಲಿಸುವ ಲಾರಿ ಬಸ್ಸು ಕಾರುಗಳಡಿ
ಅವನ ದೃಷ್ಟಿ ಅಪ್ಪಚ್ಚಿಯಾಗಿದೆ.

ಗುಡಿಸಲಿನ ಮೂಲೆಯೊಳಗೆಲ್ಲೋ
ಅವನು ಬೇಯಿಸಿಟ್ಟ ಗಂಜಿ
ಅವನನ್ನು ಕಾಯುತ್ತಿದೆ
ಅವನ ಅನ್ನದಲಿ ಪಾಲು ಪಡೆವ ನಾಯಿ
ರಸ್ತೆಯನು ಬಯ್ಯುತ್ತಿದೆ
ನಗರ ಸೇರಿದ ಮಗನ ಬಾಲ್ಯದ
ಅಂಗಿಗಳನು ಗೆದ್ದಲು ತಿನ್ನುತ್ತಿದೆ.

ಎಳೆದು ಬೀಡಿ ರಸ್ತೆ ನೋಡಿ
ಎಳೆದು ಬೀಡಿ ರಸ್ತೆ ನೋಡಿ
ಮುದುಕನ ನಿಟ್ಟುಸಿರು ಸುಟ್ಟು
ಬೂದಿಯಾಗಿದೆ, ನಗರದ ಕಡೆ ಧಾವಂತದಲಿ
ಹೊರಟ ವಾಹನಗಳ ಕೆಳಗೆ
ಅವನ ದೃಷ್ಟಿ ಅಪ್ಪಚ್ಚಿಯಾಗಿದೆ

ರಸ್ತೆ ಯಾವತ್ತೋ ಅವನಿಗೆ
ವಿದಾಯ ಹೇಳಿದೆ, ಅವನ
ನಿಶ್ಚಲತೆಗೆ ಹೆದರಿ ಓಡುತ್ತಲೇ ಇದೆ!

ಜಾನ್ಮನೆ - ೫೮೧ ೩೧೫, ಶಿರಸಿ (ಉ.ಕ)
ದೂರವಾಣಿ : ೦೮೩೮೪ - ೨೬೩೭೩೪

ಆಹ್ವಾನ

ದೀಪಾ ಹಿರೇಗುತ್ತಿ

ಏನೂ ಉಳಿದಿಲ್ಲ ಎಂದು
ಉಂಡ ಎಲೆಯಂತೆ ನನ್ನ
ಬಿಸುಡಿ ಹೋದವರೇ
ಕೊಟ್ಟು ಕೋಡಂಗಿಯಾದ
ವಿಷಾದ ಉಳಿದಿದೆ ಇನ್ನೂ
ಬನ್ನಿ ಕಿತ್ತುಕೊಳ್ಳುವಿರಾದರೆ

ಮಳೆಬಾರದೇ ಹೋದುದಕ್ಕೆ
ನೀರುಣಿಸಿ ಬತ್ತಿದ ಬಾವಿಗೆ
ಉಗಿದವರೇ
ಖಾಲಿತನದ ಸಂಕಟ
ಮಡುಗಟ್ಟಿದೆ
ಬನ್ನಿ ಕುಡಿಯುವಿರಾದರೆ

ಉಣ್ಣುತ್ತಲೇ ಎಣಿಸಿದ ಜಂತಿಯನು
ಅಪರಿಚಿತ ರಾತ್ರಿಯಲ್ಲೊಮ್ಮೆ
ಮುರಿದು ಒಳಹೊಕ್ಕವರೇ

ಅಂದು ಕಣ್ಣಲ್ಲಿದ್ದ ದಿಗ್ಭ್ರಮೆಯ ನೆರಳು
ಹೆಡೆಯಾಡಿಸುತ್ತಲೇ ಇದೆ
ಬನ್ನಿ ವಿರಮಿಸುವಿರಾದರೆ

ಪೂಜೆಗೆಂದು ಕಾದಿಟ್ಟ ಹೂವನು
ಕಿತ್ತು ಕಾಲಡಿ ನಲುಗಿಸಿದವರೇ
ಆತಂಕಿತ ನೋವಿನ ಮುಗುಳು –
ನಗುತಿದೆ ಅರಳುವ ಖುಷಿಯಲಿ
ಬನ್ನಿ ಕೊಯ್ಯುವಿರಾದರೆ

ಮೆತ್ತಗೆ ಬಂದು ಮಾತಾಡುತ್ತ
ಚಿಲ್ಲನೆ ನೆತ್ತರು ಚಿಮ್ಮುವಂತೆ
ಕುತ್ತಿಗೆ ಕುಯ್ದವರೇ
‘ಹತಃ ಕುಂಜರ’ ಎಂಬ
ಕೇಳದೇ ಹೋದ ಪದಗಳು
ನಾಡಿಯಲಿ ಮೆಲ್ಲನೆ ಮಿಡಿಯುತಿದೆ
ಬನ್ನಿ ಮುಂಗೈನಾಳವ ಸಿಗಿಯುವಿರಾದರೆ

ನನ್ನ ಕಣ್ಣೀರಿಗಾಗಿ ಕಾಯುತ್ತ
ಅಣಕದ ಬಟ್ಟಲು
ಹಿಡಿದು ನಿಂತವರೇ
ಕಂಬನಿಯ ಹೊರನೂಕಿ ಬಿಡುಗಡೆ
ಹೊಂದುವ ಜುಜುಬಿ ನೋವಲ್ಲ
ನಿಗಿನಿಗಿ ಕೆಂಡದ
ಮುಗಿಯದ ಕೊಂಡವದು
ಬನ್ನಿ ಹಾಯುವಿರಾದರೆ...

W/o ಸುಧೀರ್‌ಕುಮಾರ್ ಮುರೊಳ್ಳಿ
‘ದೀಪೋತ್ಸವ’, ತಿಲಕ್‌ರಸ್ತೆ
ಕೊಪ್ಪ – ೫೭೭ ೧೨೬, ಚಿಕ್ಕಮಗಳೂರು ಜಿಲ್ಲೆ



ಬೀಚು

ಕೆ.ವಿ. ಬಾಲಸುಬ್ರಹ್ಮಣ್ಯ

ಮತ್ಸ್ಯಗಂಧಿಯ ಚೌಕಾಶಿಗೆ ಮನಸೋತು
ಕಾಸೂಕೊಟ್ಟು ಮೀನೂ ಬಿಟ್ಟು

ನಡೆದ ನಿವೃತ್ತಿಯ ಕಾಡುವ ದಿಗಂತ
ಬೆಂಬತ್ತಿದ ವಾಸನೆ!

ತೇವದುಸುಕು ತುಳಿದಲ್ಲೆಲ್ಲ
ಬೆರಳ ಸಂದಿಯಲ್ಲಿ ಜಿನುಗುವ ಜೀವಪಸೆ
ಎಷ್ಟೊಂದು ಹೆಜ್ಜೆ ಗುರುತುಗಳು!
ಆಕಾರ ಕಳೆದ ಹುಲಿಪಂಜದೊಳಗೆ
ಕುದುರೆ ಗೊರಸಿನಚ್ಚು
ಏಡಿಮರಿಯ ಕಣ್ಣುಮುಚ್ಚಾಲೆ
ಸರಿವ ಅಲೆಯ ಮರೆವಲೀಲೆ

ಆ ಮೋಡ, ಈ ಮರಳು
ಬೆಸೆವ
ಜೋಳ ಬೇಯುವ ಬೆವರ ಬಂಡಿ
ಎಳೆವ ಕಬ್ಬಿಣದ ರಟ್ಟೆ
ಬೆಳ್ಳಿಗೂದಲ ದಣಿವಿನೇದುಸಿರು ತುಂಬಿ
ಕುಣಿದಾಡಿದ ಬಣ್ಣಬಣ್ಣದ ಬಲೂನು
ಕೈಜಾರಿ ಮತ್ತೆ ಮೋಡಕ್ಕೆ

ಸಂಜೆಯೋಕುಳಿಯಲ್ಲಿ
ಬೆರಳಹೆಣಿಕೆಯ ಚಾಪೆ
ಕನಸು ನನಸಿನ ಹಾಸು ಹೊಕ್ಕು

೨

ಬಲಿತಂತೆ ಸಡಗರದ ಬಣ್ಣದ ಭಿತ್ತಿ
ಮೂಲೆಯಲ್ಲೆಲ್ಲೋ ಸುಳಿವ
ಕತ್ತಲ ತಳಮಳ
ಗಾಳಿಗೆ ಹಾರಿ ಅಂಗಾತ ಬಿದ್ದ ಛತ್ರಿ

ಒಂಟಿ ಹಾದಿಯಲಿ
ನಿಟ್ಟುಸಿರ ಊರುಗೋಲು
ಹಾದಿಯುದ್ದಕ್ಕೂ

ಒಡೆದ ಕಪ್ಪೆಗೂಡುಗಳ ತುಂಬ
ಓಲಾಡುವ ಬೆಳ್ಳಿನೊರೆ

ಅಲ್ಲೊಂದು ಇಲ್ಲೊಂದು
ತಾರೆ ಮಿನುಗು

ಸುಳಿದ ಗಾಳಿಗೆ
ಕಮಟು ಎಣ್ಣೆಯ ಕಾಗದ ಕವರುಗಳ ಜೂಟಾಟ!

ಇತ್ತ

ತೀರದ ಮರಳೊಂದಿಗೆ
ಮೊರೆವ ಯೌವನದ ತುಂಬಿದ ಕಡಲು
ಏಕಾಂತ ಸಂವಾದ.

■
೧೨೫೫, ದುರ್ಗಾ, ೩ನೇ ಮೇನ್
ಬಿಇಎಂಎಲ್ ಬಡಾವಣೆ ೩ನೇ ಘಟ್ಟ
ರಾಜರಾಜೇಶ್ವರಿ ನಗರ, ಬೆಂಗಳೂರು - ೫೬೦ ೦೯೮
ಮೊಬೈಲ್ : ೯೮೮೬೯ ೯೯೩೪೪

ಸ್ಥಿತ್ಯಂತರ

ವಿಠ್ಠಲ ದಳವಾಯಿ

ಬೆಳೆಕೊಯ್ಲು ಮಾಡಿ
ಕಣದಲ್ಲಿ ತೆನೆ ಒಟ್ಟಿ
ಹದಿನಾರೆತ್ತಿನ ಹಂತಿ ಕಟ್ಟಿ
ಎದೆಯ ಪದಗಳನ್ನು ಏರುದನಿಯಲ್ಲಿ
ಹಾಡಾಗಿಸಿದ ಸುಗ್ಗಿಯ ಸುಖ
ಅರ್ಥತಾಸಿನ ರಾಶಿಯಂತ್ರಗಳಡಿ
ಸಿಕ್ಕು ಅಪ್ಪಚ್ಚಿಯಾಗಿದೆ...!

ಬೀಸುಕಲ್ಲಿನಲ್ಲಿ ಜೋಳ ಬೀಸಿ
ಬುಟ್ಟಿ ತುಂಬ ರೊಟ್ಟಿ ಮಾಡಿ
ಜಗಜಟ್ಟಿಯಂತೆ ಬೀಗುತ್ತಿದ್ದ ಗರತಿಯರು
ಗಿರಣಿಯ ತಿರುಗಣಿಗೆ
ಕಾಳುಸುರುವಿ ನಿಟ್ಟುಸಿರಾಗಿದ್ದಾರೆ...!

ಅದೆಷ್ಟೇ ದೂರವಿರಲಿ
ಪಟ್ಟುಬಿಡದೇ ನಡೆನಡೆದು
ಗಮ್ಯ ತಲುಪಿದ ಗಟ್ಟಿಗರ
ಕಾಲುಗಳೀಗ ಸೋತಿವೆ...
ಬೈಕಿನ ಮೇಲೆ ಕುಳಿತ ನನ್ನ ಬೆನ್ನು
ಆರೇ ಮೈಲಿಗೆ ನರಳುತ್ತದೆ...!

ಫರ್ಲಾಂಗು ದೂರದ ಬಾವಿಯಿಂದ
ಬಂಡಿಗೊಡ ಹೊತ್ತು
ಹತ್ತು ಹಂಡೆ ತುಂಬಿಸಿದವರು,
ಅಂಗಳ ನಳದ ಪ್ಲಾಸ್ಟಿಕ್
ಬಿಂದಿಗೆ ಎತ್ತಲಾಗದಷ್ಟು
ಸೋಮಾರಿಯಾಗಿದ್ದಾರೆ...!

ನೂರು ಕೋಳಿಗಳ ಸಾಕಿ
ಅವುಗಳೆತ್ತರದ ಕೂಗಿಗೆ
ಬೆಳಗು ಮೂರಕ್ಕೆ ಎದ್ದು
ಮನೆಗೆಲಸಕ್ಕೆ ತೊಡಗಿದ್ದ ಅವ್ವ
ನನ್ನ ನೋಕಿಯಾ ಮೊಬೈಲಿನ
'ಕೊಕ್ಕೊಕೊ' ಸದ್ದಿಗೆ ಬೆರಗಾಗುತ್ತಾಳೆ...!

ಬೆಳೆಸಲಾರದ ಅಂಗ
ಕಳಚಿಕೊಳ್ಳುತ್ತೆ ಎಂದ
ಡಾರ್ವಿನ್!

ಶಿಕ್ಷಕರು,
ಮುಗಳಿಹಾಳ ಅಂಚೆ, ಸವದತ್ತಿ ತಾಲ್ಲೂಕು
ಬೆಳಗಾವಿ ಜಿಲ್ಲೆ - ೫೯೧ ೧೨೯
ಮೊಬೈಲ್ : ೯೮೮೦೩ ೦೦೪೮೫

ಬವಣೆತರು

ವೀರಣ್ಣ ಮಡಿವಾಳರ

೧

ಕಾರಣವಿರದೆ
ಹೆಣ ಉರುಳಿಸುವ ಹೆದ್ದಾರಿಯಲಿ
ಸಾವನು ನಾಲಗೆಯ ತುದಿಯಲ್ಲಿಟ್ಟುಕೊಂಡು
ನಡೆಯಬೇಕಿರುವ
ವಿಪರ್ಯಾಸ ನಮ್ಮದು
ನೀಲಿ ನರಗಳಲ್ಲಿ ಗೆರೆ ಕೊರೆದ
ಬರಗಾಲದ ಎರೆಹೊಲದ ಒಡಲು ಬಿರಿದ ಚಿತ್ರ
ನಿಮಗೆ ದುಗುಡ ಮೂಡಿಸುವುದಿಲ್ಲ ಬಿಡಿ

೨

ಕಾಯಕನಿರತರಿಗೆ
ಹಸಿದ ಹೊಟ್ಟೆಯೇ ಭಾರವಾಗಿ ನೆರಳನ್ನರಸುತ್ತಿರುವಾಗ
ಮಹಡಿಗಳಲಿ ರಸದೂಟವ ಬೆಕ್ಕುನಾಯಿಗಳುಣ್ಣುತ್ತವೆ
ನಾವಿಲ್ಲಿ ಪಾಳು ಗುಡಿಸಲು
ನೆರೆ ಬಂದು ನೆಲಕ್ಕುರುಳಿದ ಮನೆಗಳಲಿ
ರೊಟ್ಟಿಯ ಚೂರನ್ನು
ಇಲಿ ಹೆಗ್ಗಣಗಳೊಂದಿಗೆ ಹಂಚಿ ತಿನ್ನುತ್ತೇವೆ

ಬಿಕರಿಗಿರುವ ಬವಣೆತರು ಬದುಕನ್ನು
ಹರಾಜಿನಲಿ ಕೊಳ್ಳುವ ಪರಿ
ವಿಪರೀತವಾಗಿದೆ ಕಾಳ ಸಂತೆಯಲ್ಲಿ

ಸೀಗೆ ಹುಣ್ಣಿಮೆ ದಿನ
ಎಣ್ಣೆಬುಟ್ಟಿಯ ತುಂಬ ಎಳ್ಳುಹೋಳಿಗೆ
ವರುಷದ ಹರುಷವ ಹಂಚಿ ತಿಂದದ್ದು
ಈಗ ನೆನಪು ಮಾತ್ರ
ಹೊಲದ ಬೆಳದಿಂಗಳ

ತುಕ್ಕು ಹಿಡಿದ ದುಗ್ಗಾಣಿಗೆ ಮಾರಿಕೊಂಡಿದ್ದೇವೆ
ಎಣ್ಣೆ ಬುಟ್ಟಿಯು ಹಗಲು ಹೊತ್ತೇ ಕಳೆದುಹೋಗಿದೆ

೨

ಗರಿಗೆದರಿದ ನವಿಲು ಬೆದರಿವೆ
ಮತ್ತೆ ಬೆಳಕು ಮೂಡಿದಾಗ
ಸಿಡಿಲು ಬಡಿದ ಮರದ ಬುಡದಲಿ
ಸುಟ್ಟ ವಾಸನೆಯಿದೆ
ಕರಕಲಾದ ಎಲುಬು ಅರೆಬೆಂದ ತೊಗಲು
ಮೆಲ್ಲನೆ ಉಸುರಿತು
ಈ ಸಂತೆಯ ಗೌಜಲಿನಲ್ಲಿ ಬವಣೆತರ ಕೂಗು
ಸ್ಪಷ್ಟವಾಗಿ ಕೇಳಿತು
ಸಮತೆಯ ಒಡಲಲಿ ನನ್ನ ಕುಡಿಗಳು ಬೆಳೆಯಲಿ

ನವಿಲು ನಲಿವ ನೆಲದಲೀಗ ಸ್ಮಶಾನ ಮೌನ
ಮನವ ಅಂಗಳವಾಗಿಸಿಕೊಂಡು ಕಾತರಿಸಿದ್ದೇನೆ
ಕುಣಿವ ಕಾಲುಗಳಿಗಾಗಿ
ಬೀಗುವ ಕಣ್ಣುಗಳಿಗಾಗಿ

೩

ಕಾಲಕಾಲದಿಂದ
ಸೂರಿಲ್ಲದವರಿಂದು ಅಸಂಖ್ಯರಾಗಿರುವಾಗ
ಮರದ ಗರ್ಭದಲುಳಿದಿದ್ದ ಜೀವಂತ ಮರಿಗಳನ್ನೆತ್ತಿಕೊಂಡು
ಆಸರೆಯ ಅರಸಿ ಅಲೆಯುತ್ತಿದ್ದೇನೆ
ನೆಲಗರ್ಭದಲಿ ಹೊಸ ಬೀಜವ ಹೂತು ಕಾವಲಿದ್ದೇನೆ.
ಈ ಉಲ್ಕಾಪಾತದಲಿ ನಕ್ಷತ್ರಗಳುದುರಿ
'ಮರು'ಭೂಮಿಯಲಿ ಬೀಜವಾಗಿರುವಾಗ
ಮಳೆ ಬರುವುದು ಖಾತರಿಯಾಗಿದೆ

ಅದೋ ಹನಿಯುದುರುತಿದೆ...

ಸಹಶಿಕ್ಷಕರು, ಸ.ಹಿ.ಪ್ರಾಥಶಾಲೆ, ಮೆಳ್ಳಾಗಟ್ಟಿ ಪ್ಲಾಟ್
ಪೊ: ಕುಣಿಮೆಳ್ಳಿಹಳ್ಳಿ (ಬಂಕಾಪುರ)
ತಾ: ಸವಣೂರು, ಜಿ: ಹಾವೇರಿ
ಮೊಬೈಲ್: ೯೯೦೩೫೮೦೯೭



ನಮ್ಮದು ಕೊಡುವ ಭಾಷೆಯಾಗಬೇಕು

ಡಾ. ಕೆ.ವಿ. ನಾರಾಯಣ ನಮ್ಮ ಭಾಷಾಶಾಸ್ತ್ರಜ್ಞರಲ್ಲಿ ಮುಖ್ಯರು. ಸಾಹಿತ್ಯ ವಿಮರ್ಶೆಯ ದಾರಿಯಿಂದ ಹೊರಳಿ ಈಚಿನ ಹಲವಾರು ವರ್ಷಗಳಿಂದ ಭಾಷಾಶಾಸ್ತ್ರದ ಅಧ್ಯಯನದಲ್ಲಿ ತೊಡಗಿಕೊಂಡಿದ್ದಾರೆ. ಮೈಸೂರಿನ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆಯಲ್ಲಿ ಸೀನಿಯರ್ ಫೆಲೋ ಆಗಿರುವ ಇವರು ಕನ್ನಡದ ಸಾಹಿತ್ಯ ಸಂಶೋಧನೆ ಹಾಗೂ ವಿಮರ್ಶೆಯ ಬಗೆಗೆ ಸಹಜವೆನ್ನಿಸುವ ಆಳದ ಅರಿವು, ನಮ್ಮ ಭಾಷೆಯ ಮುಂದಿನ ದಾರಿಗಳ ಬಗ್ಗೆ ಖಚಿತವಾದ ನಿಲುವು ಹೊಂದಿದ್ದಾರೆ. ಕೆ.ವಿ.ನಾ ಜೊತೆಗಿನ ಮಾತುಕತೆ ಒಂದು ಅಪರೂಪದ ಅನುಭವ, ನಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನ ದೊರಕಿದ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನ ಇದು...



ಪ್ರ: ನಮಸ್ಕಾರ, ಮೊದಲಿಗೆ ಶಾಸ್ತ್ರೀಯ ಭಾಷೆ ಎಂದರೆ ಏನು ಅನ್ನುವುದನ್ನು ವಿವರಿಸಿ.

ಉತ್ತರ: ಸಾಮಾನ್ಯವಾಗಿ ನಾವು Classical language ಅನ್ನೋದಕ್ಕೆ ಶಾಸ್ತ್ರೀಯ ಭಾಷೆ ಅನ್ನುವ ಪದ ಬಳಸುತ್ತಿದ್ದೇವೆ. ಅದು ಸರಿಯಾದ ಪದ ಅಲ್ಲ, ಶಾಸ್ತ್ರೀಯ ಅನ್ನುವುದು ನಿಯಮಬದ್ಧವಾದದ್ದು ಅನ್ನುವ ಅರ್ಥ ಕೊಡುತ್ತದೆ. ಎಲ್ಲ ಭಾಷೆಗಳೂ ನಿಯಮಬದ್ಧವೇ, ಜಗತ್ತಿನ ಅತ್ಯಂತ ಕಡಿಮೆ ಜನ ಮಾತನಾಡುವ ಭಾಷೆಯೂ ನಿಯಮಬದ್ಧವೇ. ಈ Classical language ಅನ್ನೋದು ನಮ್ಮ ಭಾಷಾಶಾಸ್ತ್ರಜ್ಞರು ಒಂದಿನ್ನೂರು ವರ್ಷಗಳಿಂದ ಬಳಸುತ್ತಾ ಇದ್ದಾರೆ. ಯಾವುದು ಇವತ್ತು ಜನಬಳಕೆಯ ಭಾಷೆ ಆಗಿಲ್ಲವೋ ಆದರೆ ಒಂದು ಕಾಲಕ್ಕೆ ಜನಬಳಕೆಯಲ್ಲಿದ್ದು ಅಪಾರವಾದ ಜ್ಞಾನ ಸಂಗ್ರಹ ಆ ಭಾಷೆಯಲ್ಲಿ ಇದ್ದು ಅಂಥದನ್ನ Classical language ಅಂತ ಕರೆದರು. ಲ್ಯಾಟಿನ್, ಓಲ್ಡ್ ಗ್ರೀಕ್, ಹೈ ಅರಾಬಿಕ್(ಖುರಾನ್ ರಚನೆಯಾದ ಅರಾಬಿಕ್) ಹಾಗೆಯೇ ಸಂಸ್ಕೃತ, ಇಂಥವು Classical languages. ಇವುಗಳ ಅಧ್ಯಯನ ಬಹಳ ಮುಖ್ಯ. ಯಾಕೆ ಅಂದರೆ, ಅವುಗಳ ರಚನೆಯ ದೃಷ್ಟಿಯಿಂದ ಅಲ್ಲ, ಅವು ಜಗತ್ತಿನ ಉಳಿದ ಭಾಷೆಗಳ ಹಾಗೇ ರಚನೆಗಳನ್ನು ಹೊಂದಿವೆ. ಆದರೆ ಅವುಗಳ ಬರವಣಿಗೆಯ ರೂಪದಲ್ಲಿ ಆಳವಾದ ಜ್ಞಾನ ಸಂಪತ್ತಿದೆ, ಮಾನವ ಜನಾಂಗಕ್ಕೆ ಆ ಜ್ಞಾನ ಸಂಪತ್ತನ್ನು ದಾಖಲಿಸುವ ದೃಷ್ಟಿಯಿಂದ ಇವುಗಳನ್ನು ಉಳಿದ ಭಾಷೆಗಳಲ್ಲಿ ವಿವರಿಸುವ ಪಂಡಿತರು ಬೇಕು ಅನ್ನುವ ಕಾರಣದಿಂದ ಈ ಪರಿಕಲ್ಪನೆ ಬೆಳೆಯಿತು. ಆ ಭಾಷೆಗಳ ಅಧ್ಯಯನಕ್ಕೆ ಒತ್ತು ನೀಡಲಾಯಿತು. ಸ್ವಾತಂತ್ರ್ಯಾನಂತರದಲ್ಲೂ ಈ Classical languages ನ ಪಂಡಿತರುಗಳನ್ನು ಪ್ರೋತ್ಸಾಹಿಸುತ್ತ ಬಂದಿದ್ದೇವೆ. ಅರೇಬಿಕ್, ಪಾರ್ಸಿ, ಪರ್ಶಿಯನ್, ಸಂಸ್ಕೃತ ಮೊದಲಾದ ಭಾಷೆಗಳ ಅಧ್ಯಯನ ಮಾಡುವವರನ್ನು Classical Scholars ಅಂತ ಅವರಿಗೆ ಪ್ರಶಸ್ತಿ ಸನ್ಮಾನಗಳನ್ನು ಮಾಡುತ್ತಾ ಬಂದಿದ್ದೇವೆ.

ಒಂದು ತಿಳುವಳಿಕೆ ಅಂದರೆ ಆ ಭಾಷೆಗಳನ್ನು ಆಡುವ 'ಮೊದಲ ಭಾಷಿಕರು' ಇವತ್ತು ಇಲ್ಲ ಅಂತ. ಈ ಭಾಷೆಗಳನ್ನು ಕಲಿತು ಆಡುವವರಿರಬಹುದು. ಆದರೆ ಅದು ಅವರ ಮೊದಲ ಭಾಷೆಯಾಗಿಲ್ಲ. ಸಂಸ್ಕೃತದ ಪರವಾಗಿ ವಾದಿಸುವ ಕೆಲವರ ಪ್ರಕಾರ ಸಂಸ್ಕೃತ ಮಾತನಾಡಬಲ್ಲವರು ಎಷ್ಟೋ ಸಾವಿರ ಸಂಖ್ಯೆಯಲ್ಲಿದ್ದಾರೆ ಅಂತ, ಅದು ೨೦೦೧ರ ಸೆನ್ಸೆಸ್‌ನಲ್ಲೂ ಇದೆ. ಆ ರೀತಿ ಮಾತನಾಡುವವರ ಮೊದಲ ಭಾಷೆ ಸಂಸ್ಕೃತವಾಗಿಲ್ಲ, ಅದನ್ನ ಎರಡನೇ ಭಾಷೆಯಾಗಿ ಅವರು ಕಲಿತವರು.

ಈಚೆಗೆ ೨೧ನೇ ಶತಮಾನದ ತಿರುವಿನಲ್ಲಿ ತಮಿಳು ಭಾಷಿಕರು ತಮ್ಮ ಭಾಷೆಗೆ ಈ Classical language ನ ಸ್ಥಾನ ಬೇಕೆಂದು ಕೇಳಿದರು. ಅವರು ಕೇಳಿದ್ದಕ್ಕೆ ಕಾರಣವೂ ಇಲ್ಲದೇ ಇಲ್ಲ. ಅದಕ್ಕೆ ಎರಡು ಕಾರಣಗಳಿದ್ದವು. ಒಂದು, ತಮಿಳು ಅತ್ಯಂತ ಪ್ರಾಚೀನವಾದ ಭಾಷೆ ಅನ್ನುವುದು; ಎರಡನೆಯದು, ಇಂಡಾಲಜಿ(ಭಾರತೀಯಶಾಸ್ತ್ರ) ರೂಪುಗೊಂಡಾಗ ಅದು ಸಂಸ್ಕೃತ ಕೇಂದ್ರಿತ ಆಗಿತ್ತು. ಭಾರತಕ್ಕೆ ಸಂಬಂಧಿಸಿದ ಎಲ್ಲ ತಿಳುವಳಿಕೆಗಳಿಗೂ ಸಂಸ್ಕೃತದ ಮೂಲಕವೇ ದೊರಕುತ್ತದೆ. ಆದ್ದರಿಂದ, ಎಲ್ಲ Indologist ಗಳೂ ಸಂಸ್ಕೃತ ಕಲಿತವರೇ ಆಗಿರುತ್ತಿದ್ದರು. ತಮಿಳಿನವರ ತಿಳುವಳಿಕೆ; ಭಾರತದ ಬಗ್ಗೆ ತಿಳಿಯಲು ತಮಿಳು ಕೂಡಾ ಒಂದು ಪ್ರಾಚೀನ ಭಾಷೆ ಸಂಸ್ಕೃತ ಒಂದೇ ಅಲ್ಲ ಅಂತ. ಸಂಸ್ಕೃತ ಕೇಂದ್ರಿತವಾಗಿರುವುದನ್ನು ಒಡೆಯುವುದು ಅವರ ಆಸಕ್ತಿಯಾಗಿತ್ತು. ಅದು ಅವರ ರಾಜಕಾರಣದ ಒಂದು ಭಾಗ. ಪ್ರತಿಯೊಂದಕ್ಕೂ ಅವರು ಆ ರೀತಿ ಮಾಡಿದ್ದಾರೆ, ಮೊದಲಿನಿಂದ ಅವರು ಉತ್ತರವನ್ನು ವಿರೋಧಿಸುತ್ತಾ ಬಂದವರವರು. ಈಗ ಪುರಾಣಗಳಿರಬಹುದು, ರಾಮಾಯಣ, ಮಹಾಭಾರತ ಇರಬಹುದು Political hagemony ಇಂದ ಇರಬಹುದು. ಪ್ರತಿಯೊಂದರಲ್ಲೂ ತಮಿಳಿನವರು ಆ ಥರವೇ ಮಾಡಿದ್ದಾರೆ, ಇದನ್ನು ಕೂಡಾ ಅದರ ಭಾಗವಾಗೇ ನೋಡಬೇಕಿದೆ.

ಪ್ರ: ತಮಿಳಿನಂಥ ಜೀವಂತವಿರುವ ಭಾಷೆಗೆ Classical language ಸ್ಥಾನ ಕೊಡುವ ಸಂದರ್ಭದಲ್ಲಿ ಅದರ ಅರ್ಥವ್ಯಾಖ್ಯೆ ಏನಿತ್ತು? ಅದು ಬದಲಾಗಬೇಕಾಯ್ತಲ್ಲವೆ?

ಉತ್ತರ: ಆಗಲೇಬೇಕಾಯ್ತು, ನಾಲ್ಕು ವರ್ಷಗಳ ಹಿಂದೆ ಈ ಚರ್ಚೆ ಪ್ರಾರಂಭಗೊಂಡು ತಮಿಳಿಗೆ ಈ ಮನ್ನಣೆ ಕೊಟ್ಟ ಮೇಲೆ ಕನ್ನಡಕ್ಕೂ ಆ ಸ್ಥಾನಮಾನ ಬೇಕು ಅಂದಾಗ, ಕನ್ನಡ ವಿಶ್ವವಿದ್ಯಾಲಯದಿಂದ ಒಂದು Doccument ಸಿದ್ಧಪಡಿಸಿದಾಗ, ನಾವು ಅದನ್ನು Living Classical language ಅಂತ ಕರೆದೆವು, ಆ ದಾಖಲೆಯ ತಲೆಬರಹ ಹಾಗೇ ಇದೆ– Kannada living Classical language ಅಂತ. ಅದಕ್ಕೆ ಭಾಷಾಶಾಸ್ತ್ರದಲ್ಲಿ ಇನ್ನೊಂದು ಪರಿಕಲ್ಪನೆ ಇದೆ. Heritage language ಅಂತ, ಅಥವಾ ಪಾರಂಪರಿಕ ಭಾಷೆಗಳು ಅಂತ. ಹಲವಾರು ಶತಮಾನಗಳಿಂದ ಜನ ಬಳಕೆಯಲ್ಲಿದ್ದು ಬರವಣಿಗೆ, ಅಪಾರ ಜ್ಞಾನಸಂಪತ್ತು ಇದ್ದು ಈಗಲೂ ಜನ ಬಳಸುತ್ತಿರುವ ಭಾಷೆಗಳನ್ನು Classical language ಗೆ ಪರ್ಯಾಯವಾಗಿ Heritage language ಅಂತ ಕರೆಯಲಾಯ್ತು. ಉದಾಹರಣೆಗೆ ಚೈನೀಸ್, ಹಿಬ್ರೂ, ಜಪಾನಿಸ್, ಈ ಅರ್ಥದಲ್ಲಿ ಭಾರತದ ಭಾಷೆಗಳನ್ನು Heritage language ಅಂತ ನೋಡಿದಾಗ ಕನ್ನಡ ಮತ್ತು ತಮಿಳು ಭಾಷೆಗಳನ್ನು ಈ ಗುಂಪಿಗೆ ಸೇರಿಸಬಹುದು.

ಯಾಕೆಂದರೆ ಕ್ರಿಸ್ತಶಕದ ಆರಂಭದಿಂದ ಹಿಡಿದು ಈಗ ನಾವು ಮೂರನೆಯ ಸಹಸ್ರಮಾನದಲ್ಲಿ ಇದ್ದೀವಿ. ಮೊದಲನೆಯ ಸಹಸ್ರಮಾನದಲ್ಲಿ ಜನ ಬಳಕೆಯಲ್ಲಿದ್ದು ಬರವಣಿಗೆ ಇದ್ದು, ಎರಡನೇ ಸಹಸ್ರಮಾನದಲ್ಲೂ ಬರಹ ಬಳಕೆಗಳಲ್ಲಿದ್ದು ಈಗ ಮೂರನೆಯ ಸಹಸ್ರಮಾನದಲ್ಲೂ ಜನಬಳಕೆ ಬರವಣಿಗೆಯುಳ್ಳ ಭಾಷೆ ಯಾವುದಾದರೂ ಇದ್ದರೆ ಭಾರತದಲ್ಲಿ ಅದು ತಮಿಳು ಮತ್ತು ಕನ್ನಡ ಮಾತ್ರ. ಜಗತ್ತಿನಲ್ಲಿ ಮೂರು ಸಾವಿರ ವರ್ಷಗಳ ಜನರ ಭಾಷೆಯಾಗಿದ್ದು, ಬರವಣಿಗೆಯನ್ನು ಹೊಂದಿರುವ, ಜೀವಂತವಾಗಿರುವ ಮೊದಲ ಹತ್ತು ಭಾಷೆಗಳನ್ನು ಗುರ್ತಿಸಿದರೆ ಅದರಲ್ಲೂ ಕನ್ನಡ ಮತ್ತು ತಮಿಳು ಬರುತ್ತವೆ. ಉಳಿದ ಭಾಷೆಗಳು ಪ್ರಾಚೀನ ಇರಬಹುದು. ಆದರೆ, ಅವು ಬದುಕಿಲ್ಲ, ಗ್ರೀಕ್ ಮತ್ತು ಲ್ಯಾಟಿನ್ ಮುಂತಾದ ಭಾಷೆಗಳು ಕನ್ನಡಕ್ಕಿಂತ ಪ್ರಾಚೀನ ಆದರೆ ಜೀವಂತವಾಗಿಲ್ಲ. ಇವು ಮಾತ್ರ ಕೊಂಡಿ ಕಳಚದೆ ನಿರಂತರವಾಗಿ ಬದುಕಿವೆ. ಆದ್ದರಿಂದ ಸಹಜವಾಗಿ ಇಂಥ ಭಾಷೆಗಳಿಗೆ ತಮಗೊಂದು Special Status ಬೇಕು ಅಂತ ಅನ್ನಿಸಿದ್ದರೆ ತಪ್ಪೇನೂ ಇಲ್ಲ.

ಇದಕ್ಕೆ ಇನ್ನೊಂದು ಕಾರಣವೂ ಇದೆ; ಭಾರತದ ರಾಜ್ಯಾಂಗ ನಿರ್ಮಾಣದ ಸಂದರ್ಭದಲ್ಲಿ, ರಾಜ್ಯಾಂಗದ ಎಂಟನೇ ಪರಿಚ್ಛೇದದಲ್ಲಿ ಹದಿನೈದು ಭಾಷೆಗಳನ್ನು ಸೇರಿಸಲಾಯ್ತು. ಅದಕ್ಕೆ ಕಾರಣಗಳೇನು ಅನ್ನೋದಕ್ಕೆ ತರ್ಕವೇನೂ ಇರಲಿಲ್ಲ. ಲಿಪಿ ಇದ್ದದ್ದೋ ಒಂದು ಪ್ರಾಂತದ ಭಾಷೆಯಾಗಿದ್ದೋ ಇಂಥದೇ ಅಂತ ಕಾರಣ ಕೊಡಲಾಗುವುದಿಲ್ಲ. ಉದಾಹರಣೆಗೆ ಸಿಂಧಿ, ಅದು ಯಾವ ಪ್ರಾಂತ್ಯದ ಭಾಷೆಯೂ ಆಗಿರಲಿಲ್ಲ, ಹಾಗೇ ಉರ್ದು ಯಾವ ಪ್ರಾಂತದ ಭಾಷೆಯಲ್ಲದೆ ಭಾರತದಾದ್ಯಂತ ಆಡಲ್ಪಡುತ್ತದೆ. ಇದು ತಪ್ಪು ಅಂತ ನಾನು ಹೇಳುತ್ತಿಲ್ಲ. ಮುಂದೆ ೨೦೦೪ರಲ್ಲಿ ಈ ಸಂಖ್ಯೆ ಹೆಚ್ಚು ಮಾಡಿ ಬೋಡೋ, ಸಂತಾಲಿ, ಮೈಥಿಲಿ, ಡೋಗ್ರಿ ಭಾಷೆಗಳನ್ನು ಈ ಪಟ್ಟಿಗೆ ಸೇರಿಸಿದರು. ೧೯೫೦ರಲ್ಲಿ ಮೈಥಿಲಿಯನ್ನು ಒಂದು ಭಾಷೆ ಅಂತಲೇ ಕರೀತಿರ್ಲಿಲ್ಲ, ಇನ್ಯಾವುದೋ ಭಾಷೆಯ ಒಂದು Dilect ಅಂತ ಕರೀತಿದ್ದರು. ಅದನ್ನು ಒಂದು ಭಾಷೆ ಅಂತ ಪರಿಗಣಿಸೋದಷ್ಟೇ ಅಲ್ಲದೆ, ೮ನೇ ಪರಿಚ್ಛೇದದಲ್ಲೂ ಸೇರಿಸಲಾಯ್ತು. ಹಾಗೆ ಸೇರಿಸಬಾರದು ಅಂತ ನಾನು ಹೇಳ್ತಿಲ್ಲ, ಲಿಪಿಯೇ ಇಲ್ಲದ ಪಂಡಾರಿ ಅಂತಹ ಭಾಷೆಗೆ ಮಾನ್ಯತೆ ನೀಡಲಾಯಿತು. ಸಂತಾಲೀ ಭಾಷೆಗೆ ಈಗ ಲಿಪಿಯನ್ನು ರೂಪಿಸುವ ಪ್ರಯತ್ನ ನಡೆದಿದೆ. ಇವು ಎಲ್ಲವೂ

ತಂತಮ್ಮ ಅಸ್ಮಿತೆ ಅಥವಾ Identigy ಗಳನ್ನು ಉಳಿಸಿಕೊಳ್ಳುವ ಪ್ರಯತ್ನಗಳು, ಹೋರಾಟಗಳು. ಅದಕ್ಕೆ ಕೇಂದ್ರದ ಸ್ಥಾನಮಾನ ಎಲ್ಲವೂ ಸರಿ, ಆದರೆ ಇಷ್ಟು ಪ್ರಾಚೀನವಾಗಿರುವ ಭಾಷೆಗಳಿಗೂ ಒಂದು ಉಮೇದು ಬರ್ತದೆ. ನಮ್ಮದೇನು Special status ಇಲ್ಲವೇ? ಈ ಎಲ್ಲ ಭಾಷೆಗಳೂ ಸಮಾನ ಆಗೋದಾದ್ರೆ equals ನಲ್ಲಿ ನಾವು more equals ಅನ್ನೋದು ಬರುತ್ತದೆ. ಅದು ಸರಿಯೋ, ತಪ್ಪೋ ಬೇರೆ. ಹಾಗೊಂದು ಭಾವನೆ ಮೂಡುವುದಕ್ಕೆ ಕಾರಣ ಹೇಳಿದೆ. ಶತಮಾನಗಳ ಕಾಲ ಜನ ಭಾಷೆಯಾಗಿರುವ ಈ ಭಾಷೆಗಳಿಗೆ ಒಂದು ವಿಶೇಷ ಸ್ಥಾನಮಾನಕ್ಕೆ ಕೇಳಿದವು. Language Politics ನಲ್ಲಿ ಇದೊಂದು ಕಾರಣ ಆಯ್ತು, ಪೈಪೋಟಿ ನಡೆಸಬೇಕಾಯ್ತು.

ಪ್ರ: ಹಾಗಿದ್ದರೆ ಕನ್ನಡದ ಪ್ರಾಚೀನತೆಯ ಪ್ರಶ್ನೆಯನ್ನು ಹೇಗೆ ವಿಸ್ತರಿಸ್ತೀರಿ.

ಉತ್ತರ: ಈ ಶತಮಾನದ ಆರಂಭದಲ್ಲಿ ನಡೆದ ಚರ್ಚೆಗಳು ಬೇರೆಯದೇ ಥರ ಇದೆ. ಗೋವಿಂದ ಪೈ ಮುಂತಾದ ವಿದ್ವಾಂಸರು ಮೂರು ಬಗೆಯ ಉಲ್ಲೇಖಗಳನ್ನು ಮುಂದಿಡುತ್ತಾರೆ. ೧. ಕರ್ನಾಟಕದ ಬಗೆಗಿನ ಉಲ್ಲೇಖಗಳು; ೨. ಕನ್ನಡದ ಬಗೆಗಿನ ಉಲ್ಲೇಖಗಳು; ೩. ಕನ್ನಡ ಮಾತಾಡುವ ಜನ ಸಮುದಾಯದ ಬಗೆಗಿನ ಉಲ್ಲೇಖಗಳು ಎಲ್ಲೆಲ್ಲಿದೆ ಅಂತ ಹುಡುಕಿದ್ದಾರೆ. ಆದರೆ ಆ ಜನಸಮುದಾಯ ಕರ್ನಾಟಕದಲ್ಲೇ ಇರಬೇಕು ಅಂತೇನಿಲ್ಲ, ಇನ್ನೆಲ್ಲೋ ಇರಬಹುದು. ಹಾಗೆಯೇ ಕನ್ನಡ ನಾಡು ಅಂತ ಯಾವುದನ್ನು ಕರೆಯುತ್ತಿದ್ದರು ಅದು ಒಂದು Identity, ಇದನ್ನೊಂದು ಭಾಷಿಕವಾದ Identity ಯಾಗಿ ಗುರುತು ಮಾಡ್ತಾ ಇದ್ದರು. ಅದಕ್ಕೆ ಆಕರಗಳನ್ನು ಅವರು ಕನ್ನಡದಲ್ಲೇ ಹುಡುಕದೆ ಬೇರೆ ಭಾಷೆಗಳಲ್ಲಿ ಹುಡುಕಿದರು. ಗ್ರೀಕ್ ಭಾಷೆಯಲ್ಲಿ, ಪ್ರಾಕೃತದಲ್ಲಿ ಹುಡುಕಿದರು. ಅವರಿಗೆ ಕನ್ನಡದ ಅಸ್ಮಿತೆಯ ಪ್ರಶ್ನೆ ಅವರ ಸಂಶೋಧನೆಯ ಗುರಿಯಾಗಿ ಇತ್ತು. ಆಗ, ಕನ್ನಡದ ಅಸ್ಮಿತೆಯನ್ನು, ತನ್ನತನವನ್ನು ಚಹರೆಗಳನ್ನು ಗುರುತಿಸೋ ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಸಂಶೋಧನೆ ಮಾಡಿದರು. ಅವರ ನಂತರ ನಾವು ಮಧ್ಯದಲ್ಲಿ ಅಂಥದ್ದನ್ನು ಬಿಟ್ಟುಕೊಟ್ಟೆವು. ಸಂಶೋಧನೆಗಳನ್ನು ಬಿಟ್ಟುಕೊಟ್ಟೆವು. ಎಷ್ಟರಮಟ್ಟಿಗೆ ಅಂದರೆ ಗ್ರೀಕ್ ನಾಟಕಗಳಲ್ಲಿ ಕನ್ನಡದ ಮಾತುಗಳ ಉಲ್ಲೇಖ ಇದೆ ಎಂಬ ಗೋವಿಂದ ಪೈ ಅವರ ಮಾತನ್ನು ನಾವು ನಿರಾಕರಿಸಿಬಿಟ್ಟೆವು. ಅಷ್ಟೇ ಅಲ್ಲ, ಇನ್ನೊಂದು ಸಲ ಆ ನಾಟಕವನ್ನು ನೋಡುವ ಪ್ರಯತ್ನ ಕೂಡ ಯಾವ ಕನ್ನಡದ ವಿದ್ವಾಂಸರೂ ಮಾಡಲಿಲ್ಲ. ನೀವು 'ಆಕ್ಸಿರಿಯ ಪಪೈರಸ್' ಅನ್ನು ಗೂಗಲ್ ಮಾಡಿದ್ರೆ ಎರಡು ಸಾವಿರಕ್ಕಿಂತ ಜಾಸ್ತಿ ಉಲ್ಲೇಖಗಳು ಇದೆ. ಅದರಲ್ಲಿ ಕನ್ನಡದ ಉಲ್ಲೇಖವಿರುವ ಭಾಗ ನಂಬರ್ ೪೧೩ ಇರಬಹುದು. ಅದರ ಬಗ್ಗೆಯೇ ಈಗ ೨೦೦೬-೦೭ರಲ್ಲಿ ವಿದ್ವತ್ ಲೇಖನಗಳು ಬಂದಿವೆ. ಯುರೋಪಿಯನ್ ಭಾಷಿಕರು ಮತ್ತೆ ಈಗ ಗೋವಿಂದ ಪೈ ಸಂಶೋಧನೆಗಳನ್ನು ಉಲ್ಲೇಖಿಸುತ್ತಿದ್ದಾರೆ. ಆದರೆ ಕನ್ನಡದ ವಿದ್ವಾಂಸರು ಮತ್ತೆ ಅದನ್ನು ನೋಡುವ ಪ್ರಯತ್ನವನ್ನು ಕೂಡ ಮಾಡಿಲ್ಲ.

ಅದಕ್ಕೆ ಕಾರಣಗಳು ಹಲವಾರಿವೆ. ನವೋದಯದ ನಂತರ ಬಂದ ಪ್ರಗತಿಶೀಲ ನವ್ಯ ಚಿಂತನೆಗಳಲ್ಲಿ ಇವತ್ತಿಗೆ ನಾವು ಪ್ರಾಮುಖ್ಯತೆ ಕೊಟ್ಟು ಚರಿತ್ರೆಯನ್ನು ಪುನರ್ ರಚಿಸಬೇಕು, ಒಂದು Identity ಬೇಕು ನಮಗೆ. ಪ್ರಾಚೀನತೆಯಲ್ಲಿ ಪಾವಿತ್ರ್ಯ ಇದೆ ಅನ್ನುವುದನ್ನು ನಾವು ಬಿಟ್ಟುಕೊಟ್ಟುಬಿಟ್ಟಿದ್ದರಿಂದ ನಷ್ಟವಾಗಿರುವುದು ನಮಗೆ. ಇನ್ನೊಂದು ಉದಾಹರಣೆ ಹೇಳುವೆ. ಶಾಸನಗಳಲ್ಲಿ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವನ್ನು ಅತ್ಯಂತ ಪ್ರಾಚೀನ ಎಂದು ಇವತ್ತು ಶಾಲಾ ಪಠ್ಯದಲ್ಲಿ ಹೇಳುತ್ತೇವೆ. ಅದಕ್ಕೂ ಹಿಂದೆ ಕ್ರಿ.ಶ. ೧೮೦ರಲ್ಲಿನ ನಂಜನಗೂಡಿನ ಒಂದು ಹಳೆಯ ಶಾಸನ ಇದೆ ಅಂತ ಗೋವಿಂದ ಪೈ ಹೇಳಿದ್ದನ್ನು ಮೈಸೂರು ವಿ.ವಿ.ಯ ವಿದ್ವಾಂಸರು ನಿರಾಕರಿಸಿದರು. ಅವರು ಯಾಕೆ ಹಾಗೆ ಹೇಳಿದರು, ಅದು ನಿಜವಾ ಅಂತ ಪರೀಕ್ಷಿಸಿಯೂ ಇಲ್ಲ.

ಈಚೆಗೆ ಅವು ಎರಡು ಕಾರಣಗಳಿಗಾಗಿ ಸಂಶೋಧನೆಗಳು ಪ್ರಾಮುಖ್ಯತೆ ಪಡೆಯಲಿವೆ. ಕನ್ನಡಕ್ಕೆ Classical language Status ಬೇಕು ಅಂದಾಗ ಅದರ ಪ್ರಾಚೀನತೆ ಪ್ರತಿಪಾದಿಸಲಿಕ್ಕೆ, ಎರಡನೆಯದು ಕನ್ನಡದ್ದು ಒಂದು ಅವಿಚ್ಛಿನ್ನವಾದ ಮುರಿಯದ ಪರಂಪರೆಯೊಂದು ಇದ್ದರೆ ಅದನ್ನು ಪುನರ್ ರಚಿಸಬೇಕಾಗಿದೆ. ಭಾಷೆಯಾಗಿ ಅದು ಹೇಗೆ ಆಕಾರ ಪಡೆಯುತ್ತ ಬಂತು, ಅದರ ಬೇರುಗಳೆಲ್ಲಿದೆ, ಅದರ ಕೊಂಬೆ ಟಿಸಿಲುಗಳು ಹೇಗೆ ಬದಲಾಗಿದೆ ಒಂದು Organic ಆದ ಜೀವಂತವಾದ ಭಾಷಿಕವಾದದ್ದಿರಬಹುದು ಅಥವಾ ಸಾಂಸ್ಕೃತಿಕವಾದದ್ದಿರಬಹುದು ಪ್ರಾಚೀನತೆಯ ಶೋಧವೊಂದು ಆರಂಭಗೊಳ್ಳಬೇಕಿದೆ.

ಈಗ ಸರ್ಕಾರಕ್ಕೆ ಮಂಡಿಸಿದ ನಿಲುವು ರಾಜಕೀಯವಾದದ್ದೇ ಆದರೂ ಈ ಹಿಂದಿರುವ ದಾಖಲೆಗಳನ್ನೇ ಮತ್ತೆ re-visit ಮಾಡಿ, present ಮಾಡಿದ್ದಾರೆ. ಇಲ್ಲೊಂದು ವಿಷಯ ಹೇಳಬೇಕು; ಈ ಸಂದರ್ಶನಕ್ಕೆ ಬಳಸಿಕೊಳ್ಳಿ ಅಥವಾ ಬಿಡಿ. ಸಿತ್ತಿನ್ ವಾಸಲ್ ಅಂತ ತಮಿಳುನಾಡಿನಲ್ಲೊಂದು ಜಾಗ ಇದೆ. ಅಲ್ಲಿ ಒಂದು ಪ್ರಾಚೀನ ತಮಿಳು ಶಾಸನ ಇದೆ. ಆರ್.ಆರ್. ಮಹಾದೇವನ್ ಎಂಬ ಅಂತಾರಾಷ್ಟ್ರೀಯ ಖ್ಯಾತಿಯ ತಮಿಳು ವಿದ್ವಾಂಸರು ಆ ಶಾಸನವನ್ನು ಓದಿದವರು. ಅವರು ಆ ಶಾಸನದಲ್ಲಿ ಕೆಲವು ಪದಗಳು ತಮಿಳಿನವಲ್ಲ, ಕನ್ನಡದವು ಅನ್ನುತ್ತಾರೆ. ಕ್ರಿಸ್ತಪೂರ್ವದ ಉಲ್ಲೇಖ ಇದು. ಉದಾಹರಣೆಗೆ – ಹೊಸ್ತಿಲ್, ಅನ್ನುವ ಪದ, ಗೌಂಡಿ ಅನ್ನುವುದು ತಮಿಳಿನವಲ್ಲ ಕನ್ನಡದ್ದು ಅಂದರು. ವಿಚಿತ್ರ ಅಂದರೆ ಕನ್ನಡ ವಿದ್ವಾಂಸರು ಅದನ್ನು ಒಪ್ಪುತ್ತಿಲ್ಲ. ಹಾಗೆ ಅದನ್ನು ನಿರಾಕರಿಸಬೇಕಿದ್ದವರು ತಮಿಳಿನವರು. ಮುಖ್ಯ ಸಿತ್ತಿನ್ ವಾಸಲ್ ದಾಖಲೆಗಳನ್ನು ನಮ್ಮ ಪ್ರಾಚೀನತೆಯ ಮಂಡನೆಗೆ ಸೇರಿಸಿಕೊಳ್ಳಬೇಕೋ ಬೇಡವೋ ಅನ್ನುವ ಗೊಂದಲ.

ಶಂಗಂ ಸಾಹಿತ್ಯದಲ್ಲಿ ಇರುವ ಎಷ್ಟೋ ಪದಗಳು ಇವತ್ತಿನ ತಮಿಳಿನಲ್ಲಿ ಇಲ್ಲ, ಆದರೆ ಕನ್ನಡದಲ್ಲಿದೆ. ಬಹಳ ಸರಳವಾದ ಉದಾಹರಣೆ ಹೇಳ್ತೀನಿ – 'ಇಳಿ' ಎನ್ನುವ ಪದ ತಮಿಳು ಶಂಗಂ ಸಾಹಿತ್ಯದಲ್ಲಿದೆ. ಆದರೆ ಇವತ್ತಿನ ತಮಿಳಿನಲ್ಲಿ 'ಎರಂಗು' ಎಂಬ ಪದ ಇದೆ. 'ಇಳಿ' ಅಂತಿಲ್ಲ, ಇದು ಕನ್ನಡದ ಪ್ರಾಚೀನತೆ ನಿರೂಪಿಸಲಿಕ್ಕೆ ಇರುವ ಕನ್ನಡದ ಹೊರಗಿನ ಆಕರ. ಕನ್ನಡ ಅನ್ನುವ ಭಾಷೆ ಹೇಗೆ ರೂಪುಗೊಂಡಿತು, ಹಾಗೆ ರೂಪುಗೊಳ್ಳುವ ಸಂದರ್ಭದಲ್ಲಿ ಒಂದು ಭಾಷೆಯಿಂದ ಮತ್ತೊಂದಕ್ಕೆ ಹೇಗೆ ಪದಗಳು ಪರಿಚಯವಾಯ್ತು, ಪ್ರಯಾಣ ಮಾಡಿದ್ದವು ಅನ್ನುವುದನ್ನು ನೋಡಲಿಕ್ಕೆ ನಾವು ಸಿದ್ಧರಿಲ್ಲ.

ಈ Classical language ಅನ್ನೋ ಪ್ರಾಧಾನ್ಯ ಸಿಕ್ಕಿರೋ ಸಂದರ್ಭದಲ್ಲಿ ಇನ್ನೂ ಮುಕ್ತ ಮನಸ್ಸಿನಿಂದ ನಮ್ಮ ದಾರಿಯನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕಿದೆ. ನಾನು ಹೇಳಿದ್ದೇ ಸರಿ, ಬೇರೆಯದನ್ನು ಒಪ್ಪಲಾರೆ ಅನ್ನುವುದು ಕನ್ನಡ ವಿದ್ವಾಂಸರಿಗೆ ತಗುಲಿರುವ ರೋಗ ಇದು. ಇಂಥ ಪ್ರಸಂಗದಲ್ಲಿ ಚಿಕ್ಕವರು ಮುನ್ನುಗ್ಗಿ ಆ ಕ್ಷೇತ್ರದಲ್ಲಿ ಕೆಲಸ ಮಾಡಲು ಹಿಂಜರಿಯುತ್ತಾರೆ.

ಪ್ರ: ಕನ್ನಡಕ್ಕೆ ಈ ಶಾಸ್ತ್ರೀಯ ಸ್ಥಾನ ದೊರಕುವ ಸಲುವಾಗಿ ಅನೇಕ ಲೇಖಕರು ಮತ್ತು ಕನ್ನಡಪರ ಸಂಘಟನೆಗಳು ಪ್ರತಿಭಟನೆ ಹೋರಾಟಗಳನ್ನು ನಡೆಸಿತು. ಕೊನೆಗೆ ರಾಜ್ಯದ ಮುಖ್ಯಮಂತ್ರಿ ದೆಹಲಿಯಲ್ಲಿ ಧರಣಿ ಹೂಡುವ ಮಾತೂ ಆಡಿದರು. ಇವುಗಳೆಲ್ಲಾ ಈ ಮನ್ನಣೆಗೆ ಪರಿಣಾಮ ಬೀರಿದ ಸಂಗತಿಗಳೇ?

ಉತ್ತರ: ಇಂಥದ್ದೊಂದು ಹೋರಾಟ ಅಗತ್ಯ ಇತ್ತೋ ಇಲ್ವೋ ಗೊತ್ತಿಲ್ಲ, ಕನ್ನಡ ಭಾಷೆ ಸಂಸ್ಕೃತಿಗಳಿಗೆ

ಸಂಬಂಧಿಸಿದ ಈ ಪ್ರಕ್ರಿಯೆಯಲ್ಲಿ ನಮಗೂ ಒಂದು ಜಾಗ ಇದೆ. ನಮ್ಮ ಮುಂದಾಳತ್ವದಲ್ಲಿ ಇದು ಸಾಧ್ಯವಾಗಬೇಕು ಅಂದುಕೊಂಡವರು ಕೆಲವರು, ನಿಜವಾಗಿಯೂ ಅದು ಪರಿಣಾಮ ಬೀರಿದೆ ಅನ್ನುವುದಕ್ಕೆ ನನಗೆ ಅನುಮಾನಗಳಿವೆ. ಶಾಸ್ತ್ರೀಯ ಭಾಷೆಯ ನಿರ್ಣಯಕ್ಕೂ ಮತ್ತು ಅದಕ್ಕೆ ಸಂಬಂಧಿಸಿದ ಹೋರಾಟಗಳಿಗೂ ನೇರವಾದ ಸಂಬಂಧ ಇದೆಯೆ ಅಂದರೆ, ನನ್ನ ಪ್ರಕಾರ ಇಲ್ಲ. Claimಗಳನ್ನು ಮಾಡಿಕೋಬಹುದು.

ತೆಲುಗು ಮತ್ತು ಕನ್ನಡ ಭಾಷೆಗಳನ್ನು ಒಟ್ಟು ಮಾಡಿ ಈ ಸ್ಥಾನ ಕೊಟ್ಟಿದ್ದು ಒಂದು ಬೇರೆಯದೇ ರಾಜಕಾರಣ. ತೆಲುಗು ಲಾಬಿ ಜೋರಾಗಿದೆ. ಮುಂದಿನ ಚುನಾವಣೆ ತೆಲುಗು Identityಯ ಮೇಲೆ ನಡೆಯೋದಾದ್ರಿಂದ, ಕರ್ನಾಟಕದ ರಾಜಕಾರಣದ ಹಾಗಿಲ್ಲ ಅದು. ೮೦ರ ದಶಕದ ರಾಜಕಾರಣಕ್ಕೆ ಹಿಂತಿರುಗಿದೆ. ತೆಲುಗು Identity ಪ್ರಶ್ನೆ ಬಂದಾಗ ಅಲ್ಲಿ ಮತ್ತೆ Fight start ಆಗತ್ತೆ. ಕಾಂಗ್ರೆಸ್‌ಗೆ ತೆಲುಗುದೇಶಂ ಮುಂತಾದ ಸ್ಥಳೀಯ ಪಾರ್ಟಿಗಳ ಸಮಕ್ಕೆ ನಿಂತು, ಪ್ರಾಂತೀಯ Issue ತೆಗೆದುಕೊಂಡು ಹೋರಾಡಲು ಈ Classical language Status ಕೊಡಿಸಿದ್ದೀವಿ ಅಂತ ಹೇಳಬಹುದು. ಅದು election ಮೇಲೆ ಪರಿಣಾಮ ಬೀರಬಹುದು ಅಂತ. ಅದು ಮುಖ್ಯ ಕಾರಣ. ಕನ್ನಡಿಗರಿಗೆ ಇದು ಹಿತಕರ ಅನ್ನಿಸದ ಸಂಗತಿ. ಇದು by default ಆಯ್ತು ಅಷ್ಟೆ. ಮತ್ತು ಅದನ್ನ ಈಗಲೇ ತುರ್ತಿನಲ್ಲಿ ಸರ್ಕಾರ ಮಾಡಬೇಕಿತ್ತು.

ಪ್ರ: ಈ Classical language ಸ್ಥಾನದಿಂದ ಕನ್ನಡಕ್ಕೆ ಆಗಬಹುದಾದ ಲಾಭ ಏನು?

ಉತ್ತರ: ಏನೂ ಇಲ್ಲ! technically ಏನೂ ಇಲ್ಲ. ಲಾಭ ಅಂದ್ರೆ ಭಾಷೆಗೆ ನೀವು ಅದನ್ನು ಹೇಗೆ ಬಳಸಿಕೊಳ್ತೀರಿ ಅನ್ನುವುದು ಮುಖ್ಯ. ಏನಾಯಿತು ಅಂದರೆ Classical language ಆಗಬೇಕು ಅಂತ ನಾವು ಯೋಚಿಸಿದ್ದೇವೆ ಹೊರತು, ಹಾಗಾದರೆ ಏನು ಮಾಡಬೇಕು ಅಂತ ಯಾರೂ ಯೋಚನೆ ಮಾಡಿರಲಿಲ್ಲ. ಅಳುತ್ತಾ ಇರುವ ಮಗುವಿಗೆ ತನಗೆ ಬೇಕಾದ್ದು ಸಿಕ್ಕಕೂಡಲೇ ಅದನ್ನ ಏನು ಮಾಡಬೇಕು ಅಂತ ಗೊತ್ತಾಗದ ಗಲಿಬಿಲಿಯ ಸ್ಥಿತಿ. ಈ ಉದಾಹರಣೆ ಚೆನ್ನಾಗಿಲ್ಲದೇ ಇರಬಹುದು. ನನಗೆ ಅನ್ನಿಸುವ ಮಟ್ಟಿಗೆ planning ಇಲ್ಲ, Policy ಇಲ್ಲ, ಬರುವ ಆ ಹಣ ಒಂದೇ ಮಾನದಂಡ ಅಲ್ಲ. ಉದಾಹರಣೆಗೆ ಈ ಮನ್ನಣೆ ಸಿಕ್ಕ ತಕ್ಷಣ ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಎರಡೆರಡು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರು. ಹಾಗೆ ಕೊಟ್ಟಿದ್ದನ್ನು – ಮೆಚ್ಚುವ; ತಪ್ಪು ಅನ್ನಲಾರೆ. ಆದರೆ ಯಾವ ವಿಶ್ವವಿದ್ಯಾಲಯವೂ ಆ ಎರಡು ಕೋಟಿ ರೂಪಾಯಿಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಒಂದು ಯೋಜನೆ ಮುಂದಿಡಲು ಆಗಿಲ್ಲ. ಬಹಳ ವಿ.ವಿ.ಗಳ ಯೋಜನೆ ನೂರಾರು ಪುಸ್ತಕಗಳನ್ನು ಮುದ್ರಿಸೋದು, ಸೆಮಿನಾರ್‌ಗಳನ್ನು ಮಾಡೋದು ಈ ರೀತಿಯ ಹಣ ಹಂಚುವ ಯೋಜನೆಗಳೇ. ಅದನ್ನ ಕನ್ನಡದ ದೂರಗಾಮಿ ಪರಿಣಾಮವುಳ್ಳ ಅಭಿವೃದ್ಧಿಗೆ ಅನುಕೂಲಕರವಾದ ಒಂದು ಯೋಜನೆಯನ್ನು ಯಾವ ರೀತಿ ರೂಪಿಸಬೇಕು, ಯಾವ ಯಾವ ಕಡೆ ನಾವಿನ್ನೂ ಗಮನ ಹರಿಸಿಲ್ಲ ಇದರ ಬಗ್ಗೆ ಯೋಚನೆ ಮಾಡಿದ ಪ್ರಸ್ತಾವಗಳು ಬಹಳ ಕಡಿಮೆ ಇದ್ದವು. ಕೆಲವು ವಿ.ವಿ.ಗಳು ಗಂಭೀರವಾಗಿ ಯೋಜನೆ ರೂಪಿಸಿದರೆ ಮತ್ತೆ ಕೆಲವು ಏನೂ ಮಾಡಿಲ್ಲ. ಕರ್ನಾಟಕ ಸರ್ಕಾರ ಕೊಟ್ಟ ಇಪ್ಪತ್ತೆರಡು ಕೋಟಿ ರೂಪಾಯಿಗಳನ್ನೇ ಬಳಸಿಕೊಳ್ಳಲು ನಾವು ತಯಾರಾಗಿಲ್ಲ. ತಮಿಳಿನ ವಿಚಾರವೂ ಹೀಗೆ, ಅವರಿಗೆ ಬಂದ ಅನುದಾನದಲ್ಲಿ ಶೇ. ೩೦% ಬಳಕೆಯಾಯ್ತು. ಉಳಿದದ್ದು ಹಾಗೇ ಉಳಿಯಿತು.

ಪ್ರ: ಈ ಶಾಸ್ತ್ರೀಯ ಭಾಷೆಯ ಅನುದಾನ ಹೇಗೆ ಬರುತ್ತೆ, ವಿತರಿಸಲ್ಪಡುತ್ತೆ?

ಉತ್ತರ: ಸಾಮಾನ್ಯವಾಗಿ Ministry of Human resource and development ನ ಅಡಿಯಲ್ಲಿ ಒಂದು ಸಮಿತಿ ಮಾಡ್ತಾರೆ ಅಥವಾ ಒಂದು Pramotion Board ಅಂತ. ಅದು ಏನು ಕ್ರಿಯಾ ಯೋಜನೆ ಕೊಡುತ್ತದೆ, ಅದಕ್ಕೆ ಅನುಗುಣವಾಗಿ ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ಹಣ ಕೊಡಲಾಗುತ್ತದೆ. ರಾಜ್ಯ ಸರ್ಕಾರದ ಮೂಲಕ ಬರದೆ ಅದು ನೇರವಾಗಿ ಸ್ಥಾಪಿಸಲ್ಪಡುವ ಸಂಸ್ಥೆಗೆ ಬರುತ್ತದೆ. ಈಗ ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. Classical language ನ board ನ ಹತ್ತಿರ ನನ್ನ ಪ್ರಕಾರ ಅಂಥ Action plan ಇಲ್ಲ. ಇದ್ದರೂ ಈ ಹೇಳಿದ್ದ ರೀತಿಯ ಹಳೆಯ ಕೃತಿಗಳ ಮರು ಮುದ್ರಣ recycle ಮಾಡೋದು ಈ ರೀತಿಯ ಯೋಜನೆಗಳು, ಯುವ ಜನಾಂಗಕ್ಕೆ ಕನ್ನಡದಲ್ಲಿ ಅದರ ಪ್ರಾಚೀನ ಬರವಣಿಗೆಯಲ್ಲಿ ಅದರ ತಿಳುವಳಿಕೆಯಲ್ಲಿ ಅಡಗಿರಬಹುದಾದ ಜ್ಞಾನ ಸಂಪತ್ತಿನ ಬಗ್ಗೆ ಆಸಕ್ತಿ ಬರುವ ಹಾಗೆ ಮಾಡುವುದು ಹೇಗೆ? ಹೈಸ್ಕೂಲು ಕಾಲೇಜು ವಿದ್ಯಾರ್ಥಿಗಳು ಕನ್ನಡ ಮುಖಿಯಾಗಿ ಬೆಳೆಯುವ ಹಾಗೆ ಮಾಡುವುದು ಹೇಗೆ ಅನ್ನುವುದನ್ನು ಯೋಚನೆ ಮಾಡುತ್ತಿಲ್ಲ.

ಪ್ರ: 'ಕನ್ನಡ ಕೊಡುವ ಭಾಷೆಯಾಗಿಲ್ಲ – ಬರೀ ಪಡೆಯುವ ಭಾಷೆ ಆಗಿದೆ' ಅನ್ನುವ ನಿಮ್ಮ ಮಾತಿಗೆ ಬಂದ ಹಾಗಾಯ್ತಲ್ಲ.

ಉತ್ತರ: ನಿಜ, ಈಚೆಗೆ ನನ್ನ ಬಹಳವಾಗಿ ಕಾಡುತ್ತಾ ಇರುವ ಸಂಗತಿ ಇದು. ನಮ್ಮ ಭಾಷೆಗೆ ಎಲ್ಲವನ್ನೂ ಸ್ವೀಕರಿಸುವ ಉಮೇದಿನಲ್ಲಿ, ಪ್ರತಿಯೊಂದೂ ಕನ್ನಡಕ್ಕೆ ಬರಬೇಕು ಅನ್ನುವ ಆಶಯದಲ್ಲಿ ಹಾಗೆ ಬಂದದ್ದು ಕನ್ನಡಕ್ಕೆ ಬಂದ ತಿಳುವಳಿಕೆ ಆಯ್ತೇ ಹೊರತು, ಕನ್ನಡದ ತಿಳುವಳಿಕೆ ಆಗಲಿಲ್ಲ. ನಾವು ಒಪ್ಪಿಕೊಂಡು ದೊಡ್ಡದಾಗಿ Establish ಮಾಡ್ಕೊಂಡಿದ್ದೀವಿ. ತಿಳುವಳಿಕೆಯನ್ನು ಪಡಕೊಂಡಿದ್ದೀವಿ. ಅದರಿಂದ ಆಗಿರುವ ಅಪಾಯ ಎಂದರೆ ಸ್ವತಂತ್ರವಾಗಿ ಚಿಂತಿಸುವ ಸಾಧ್ಯತೆಯೇ ನಮಗಿಲ್ಲದಾಗಿದೆ. ಲೋಹಿಯಾ ಹೇಳಿದರು, ಕ್ರಿ.ಶ. ೪ರ ನಂತರ ಭಾರತದಲ್ಲಿ ಸ್ವತಂತ್ರ ಚಿಂತಕರೇ ಬರಲಿಲ್ಲ ಅಂತ ಶಂಕರರೇ ಕೊನೆಯವರು ಸ್ವಂತಿಕೆಯುಳ್ಳ Original Thinker ಅಂತ. ಅದಕ್ಕೆ ಐತಿಹಾಸಿಕ ಕಾರಣವನ್ನು ಲೋಹಿಯಾ ವಿವರಿಸುತ್ತಾರೆ. ಆದರೆ ಇವತ್ತು ನಾವು ಯಾವ ಸ್ಥಿತಿಗೆ ಬಂದು ಮುಟ್ಟಿದ್ದೇವೆ ಅಂದರೆ ಯಾವುದೇ ಬಗೆಯ ಚಿಂತನಾ ಕ್ರಮ ಬೇಕೆಂದರೆ ಅದನ್ನ ನಾವು ಇನ್ನೊಂದು ಕಡೆಯಿಂದ ಪಡೆದುಕೊಳ್ಳೋಕೆ ಸಾಧ್ಯ ಇದೆಯೇ ಹೊರತು, ಕನ್ನಡದ ಮನಸ್ಸೊಂದು ತಾನೇ ಸ್ವತಂತ್ರವಾಗಿ ಚಿಂತಿಸಬಲ್ಲದು. ತಾನೇ ಸ್ವತಂತ್ರವಾಗಿ ಜ್ಞಾನವನ್ನು ಸೃಷ್ಟಿ ಮಾಡಬಲ್ಲದು ಅನ್ನುವುದನ್ನು ನಂಬೋಕೆ ಸಾಧ್ಯ ಇಲ್ಲದ ಸ್ಥಿತಿ ಬಂದುಬಿಟ್ಟಿದೆ. ಪಾಶ್ಚಾತ್ಯರ ಎರವಲು ಪಡೆಯೋ ಪ್ರಮಾಣವನ್ನು ಎಲ್ಲಿಯವರೆಗೂ ತಂದೆವು ಅಂದ್ರೆ ಅದನ್ನ ನಮಗೆ ಹೊಂದಿಸಿಕೊಳ್ಳೋದೇ ದೊಡ್ಡ ಪ್ರಯತ್ನದ ಹಾಗೆ ತೋರುತ್ತದೆ. ಸಾಹಿತ್ಯ ಮಾತ್ರ ಅಲ್ಲ ವಿಜ್ಞಾನ, ಅರ್ಥಶಾಸ್ತ್ರ ಸಮಾಜವಿಜ್ಞಾನ, ಎಲ್ಲವೂ ಎರವಲು ಪಡೆಯುವಂಥವೇ. ನಾನು ಎಂ.ಎ. ಓದುವ ದಿನಗಳಲ್ಲಿ ಪಾಶ್ಚಾತ್ಯರಿಂದ ವಿಚಾರಗಳನ್ನು ಸ್ವೀಕರಿಸದೇ ಹೋದಲ್ಲಿ ಜ್ಞಾನದ ದೃಷ್ಟಿಯಿಂದ ನಾವು ಅಪ್ರಸ್ತುತ ಆಗಿಬಿಡ್ತೀವಿ ಅನ್ನುವ ಹಾಗೆ ಆಲೋಚಿಸುತ್ತಿದ್ದೆ. ಯುರೋಪಿನ ಒಬ್ಬರಿಂದ ಒಂದು ಚಿಂತನೆ ಸ್ವತಂತ್ರವಾಗಿ ಬರಬಹುದಾದರೆ ಕನ್ನಡದಲ್ಲೆ ಯಾಕೆ ಬರುವುದಿಲ್ಲ? ಬರಬೇಕು ಅನ್ನೋದು ಒಂದು ಗುರಿ ಅಷ್ಟೇ ಅಲ್ಲ, ಸಾಧ್ಯ ಇದೆ ಅಂತ ನಾವು ನಂಬಬೇಕು. ಆಗ ಕನ್ನಡ ಪಡೆಯುವ ಭಾಷೆ ಆಗುವ ಬದಲು ಕೊಡುವ ಭಾಷೆ ಆಗಬೇಕಿದೆ. ಅದನ್ನು ಕೊಡುವ ಭಾಷೆ ಮಾಡುವುದು ಹೇಗೆ ಮೊದಲು ಅದನ್ನು ಸಾಧ್ಯ ಅಂತ ನಂಬಬೇಕು.

ಮಾಧ್ಯಮಗಳ ಭಾಷೆಯಲ್ಲಿ ಒಂದು ಸಂಗತಿಯನ್ನು ವಿವರಿಸಬೇಕಾದರೆ ಇದು ಇಂಗ್ಲಿಷಿನ ಧಾಟಿಯಲ್ಲಿ ಸಂಸ್ಕೃತ ಪದಗಳನ್ನು ಇಡುವುದಾಗಿದೆ. ಉದಾಹರಣೆಗೆ English ನ Golden opportunity ಅನ್ನೋದನ್ನ 'ಸುವರ್ಣ ಅವಕಾಶ' ಅಂದುಬಿಡ್ತೀವಿ. ಹಾಗೆ ಮಾಡಿದ್ರೆ ಮುಗಿಯಿತು ಅಂತ ಭಾವಿಸ್ತೀವಿ. ಒಂದು ಸಂಗತಿಯನ್ನ ನಾವೇ ನಮ್ಮ ಗ್ರಹಿಕೆಯ ಮುಖಾಂತರ ವಿವರಿಸೋಕೆ ಆಗಲ್ವ. ಭಾಷೆಯಲ್ಲ ಲೋಕದೃಷ್ಟಿಯನ್ನೇ ನಾವು ಎರವಲು ಪಡೀತಾ ಇದ್ದೀವಿ. ಕನ್ನಡದ ಲೋಕದೃಷ್ಟಿ ಯಾವುದು ಅದು ಇಲ್ಲವೇ ಇಲ್ಲವೆ. ರೂಪುಗೊಳ್ಳೋಕೆ ಆಗಲ್ವೇ ಅಥವಾ ನಾವು ಮರೆಯುತ್ತಿದ್ದೇವಾ, ಬಿಟ್ಟುಕೊಟ್ಟದ್ದೇವಾ ನೋಡ್ತಾ ಇಲ್ವಾ... ಇದು ಯೋಚನೆ ಮಾಡಬೇಕಿರೋದು. ಅದನ್ನು ಆಲೋಚಿಸದೇ ನಾವು ಏನೇ ಪ್ರಯತ್ನಪಟ್ಟರೂ ಮುಂದಿನ ತಲೆಮಾರಿಗೆ ಕನ್ನಡ ದಾಟುತ್ತೆ. ಆದರೆ ಒಂದು ಬೇರೆ ತಿಳುವಳಿಕೆಯನ್ನ ತನ್ನೊಳಗೆ ಹೊತ್ತ Carrier Langauge ಆಗಿ, ವಾಹಕವಾಗಿ ಮುಂದುವರೆಯುತ್ತದೆ. ತಾನೇ ಸೃಜನಶೀಲವಾಗಿ ಮುಂದುವರಿಯುತ್ತದಾ ಅದು ತುಂಬಾ ಗಂಭೀರವಾದ ಪ್ರಶ್ನೆ.

ಈಗ ಹೊಸದಾಗಿ ಆಲೋಚಿಸಬೇಕಾದ ಚಿಕ್ಕವರಲ್ಲಿ ಆ ರೀತಿ ನಂಬಿಕೆ ಮೂಡಿಸಬಲ್ಲ ಅವಕಾಶಗಳನ್ನು ನಾವು ಹುಟ್ಟಿಸಬೇಕಾಗಿದೆ, ಮರಳಿ ಕನ್ನಡಕ್ಕೊಂದು ಹೊಸ ಸ್ಥಾನಮಾನ ದಕ್ಕಿದ ಸಂದರ್ಭದಲ್ಲಿ ಅದು ಹಣ ಅಷ್ಟೇ ಅಲ್ಲ, ಒಂದು ಅವಕಾಶ ಅಂತ ಭಾವಿಸಬೇಕು.

ಪ್ರ: ಈ ಅವಕಾಶದ ಸಾಧ್ಯತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಷಿಕ ಶಾಸ್ತ್ರಜ್ಞರು ಕನ್ನಡವನ್ನು ನೋಡುವ ದೃಷ್ಟಿ ಏನಾಗಬಹುದು. ಅವರ ಗಮನವನ್ನ ಈ ಮನ್ನಣೆ ಸೆಳೆಯಬಲ್ಲದೆ?

ಉತ್ತರ: ಆ ರೀತಿ ಕನ್ನಡದವರಾಗಿ ನಿಮ್ಮನ್ನು ನೀವು Project ಮಾಡಿಕೊಳ್ಳಬೇಕಾಗತ್ತೆ. ಅಂಥದ್ದೊಂದು ಸಾಧ್ಯತೆ ಕನ್ನಡಕ್ಕಿದೆ ಅಂತ ತೋರಿಸಬೇಕಾಗತ್ತೆ. ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಅದು ತಜ್ಞರು ಕನ್ನಡವನ್ನ ಎರಡು ಕಾರಣಗಳಿಗಾಗಿ ಗಮನಿಸುತ್ತಾರೆ. ಮೊದಲ ರೀತಿಯ ಜನ ತಾವು ಈಗಾಗಲೇ ಹೇಳುತ್ತ ಇರುವಂಥ ಥಿಯರಿಗಳಿಗೆ ಪೂರಕವಾಗಿ ಇದೆಯೋ ಇಲ್ಲವೋ ಅಂತ cross check ಮಾಡುವವರು, ಅದಕ್ಕೆ ಕನ್ನಡವನ್ನು ಉದಾಹರಣೆಯಾಗಿ ಬಳಸಿಕೊಳ್ಳುವವರು. ಎರಡನೆಯ ರೀತಿಯವರು ಅವರು ಮಂಡಿಸುತ್ತ ಇರುವಂಥ ಥಿಯರಿಗೆ ವಿನಾಯಿತಿ ಯಾವುದಾದರೂ ಭಾಷೆಯಲ್ಲಿದೆಯಾ ಅಂತ, ಅದನ್ನು ಬದಲಾಯಿಸ ಬಹುದಾದ ಅಂಶಗಳು ಕನ್ನಡದಲ್ಲೇನಾದರೂ ಇದೆಯಾ ಅಂತ, ನೋಡತಕ್ಕವರು. ಅಂಥವರ ಸಂಖ್ಯೆ ಕಡಿಮೆ, ಕನ್ನಡಿಗರಾಗಿ ನಾವೇ ಅಂಥ ಹುಡುಕುವಿಕೆಗೆ ಒಂದು ಉಮೇದನ್ನ ತೋರಿಸಬೇಕು. ಆಗ ಬೇರೆಯವರಲ್ಲೂ ಆ ಆಸಕ್ತಿ ಬರುತ್ತದೆ. ಭಾರತದ ಬೇರೆ ಬೇರೆ ಭಾಷೆಗಳ ಬಗ್ಗೆಯೂ ನಾನು ಮಾತಾಡ್ತಾ ಇದ್ದೀನಿ. ಮರಾಠಿ, ಬೆಂಗಾಲಿ, ಪಂಜಾಬಿ ಭಾಷೆಗಳವರಿಗೆ ಕನ್ನಡ ಒಂದು ಆಸಕ್ತಿದಾಯಕ ಭಾಷೆ ಯಾಕಾಗಬಾರದು. ಅದು ರಶಿಯನ್ ಅಥವಾ ಆಫ್ರಿಕಾ ಮಾತಾಡುವವರಿಗೆ ಆಸಕ್ತಿಯ ಭಾಷೆಯಾದರೆ ಸಂತೋಷ ಅದಕ್ಕಿಂತಲೂ ಪಕ್ಕದ ತಮಿಳು, ಮಲೆಯಾಳದವರಿಗೆ ಕನ್ನಡದ ಬಗ್ಗೆ ಆಸಕ್ತಿ ಬರುವಂತಾಗಬೇಕು. ವ್ಯಕ್ತಿತ್ವಗಳನ್ನ ಮುಂದಿಟ್ಟುಕೊಂಡು ಅನಂತಮೂರ್ತಿ ಕೃತಿಗಳನ್ನ ಗುಜರಾತಿಗಳು ಭೈರಪ್ಪನವರ ಕೃತಿಗಳನ್ನು ಮರಾಠಿ ಓದುಗರು ಓದುತ್ತಾರೆ ಅಂತ ಹೇಳಿದರೆ ಪ್ರಯೋಜನವಾಗಲ್ಲ, ಅದು ಒಂದು ರೀತಿಯಲ್ಲಿ ಸರಿ. ಒಟ್ಟು ಕನ್ನಡಕ್ಕೇ ಆ ರೀತಿಯ ಸಾಮರ್ಥ್ಯ ಇದೆ, ಯಾರೋ ಒಬ್ಬಿಬ್ಬರು ವ್ಯಕ್ತಿಗಳಿಂದಾಗಿ ಅಲ್ಲ.

ಪ್ರ: ನಮ್ಮ ಆಧುನಿಕ ಸಂದರ್ಭದಲ್ಲಿ ಸಾಹಿತ್ಯಕ್ಕೆ ಸಿಕ್ಕಿರುವ ಮನ್ನಣೆ ಹಾಗೂ ಒತ್ತು ಇತರ ಜ್ಞಾನ ಶಾಖೆಗಳಿಗೆ ಸಿಕ್ಕಿಲ್ಲ ಅವು ಕನ್ನಡದಲ್ಲಿ ಬೆಳೆದೇ ಇಲ್ಲ, ಬರೀ ಸಾಹಿತ್ಯದ ಭಜನೆಯಲ್ಲಿ ತೊಡಗಿದ್ದೀವಾ?...

ಉತ್ತರ: ಆ ರೀತಿಯ ಪರಿಸ್ಥಿತಿ ಇದೆ. ಆದರೆ ಅಲ್ಲೂ ಏನಾಗಿದೆ ಅಂದ್ರೆ ಕಳೆದ ಇಪ್ಪತ್ತು ವರ್ಷಗಳಿಂದ ಈಚೆಗೆ ಸಾಹಿತ್ಯದ ಬಗ್ಗೆ ಇದ್ದಂಥ ಒತ್ತು ಕೂಡಾ ಕಡಿಮೆ ಆಗಿದೆ ಅಂತ ನನ್ನ ಅಭಿಪ್ರಾಯ. ನಿಜವಾಗಿ ಈ ಹಿಂದೆ ಸಾಹಿತ್ಯಕ್ಕೆ ಇದ್ದ ಪ್ರಾಮುಖ್ಯ ಈಗಿಲ್ಲ, ಒಂದು ಬಗೆಯ ಅತಂತ್ರ ಸ್ಥಿತಿ ಕಾಣುತ್ತಿದೆ. ಹೊಸಬರಲ್ಲಿ ಒಂದು ಮಾದರಿಗಾಗಿಯ ಹುಡುಕಾಟ ಇದೆ. ಹೊಸದಾಗಿ ಬರೆಯುತ್ತಿರುವವರು ತಾವೇ ಒಂದು ಮಾದರಿ ಹುಡುಕುವ ಅವಕಾಶವೂ ಬರಬಹುದು. ಇನ್ನು ಕೆಲವರಿಗೆ ಕೊಂಚ ದೂರ ನಡೆದು ಆಯಾಸದಿಂದ ಇನ್ನು ಮುಂದೆ ನನ್ನ ಕೈಲಿ ಬರೆಯಲು ಆಗುವುದಿಲ್ಲ ಅಂತ ಬಿಟ್ಟು ಬಿಡಬಹುದು. ಆದರೆ ದಾರಿ ತೋರಿಸತಕ್ಕಂಥ ವಾತಾವರಣ ಇದ್ದರೆ ಅಂಥವರು ಮತ್ತಷ್ಟು ಮುಂದೆ ಹೋಗಲು ಸಾಧ್ಯವಿದೆ. ಎಷ್ಟೋ ಜನ ಕವಿಗಳನ್ನ ನೋಡಿದ್ದೀನಿ Promising ಅಂತ; ಮಾಸ್ತಿಯವರು ಹೇಳುವ ಹಾಗೆ ಆ Promise fulfillment ಆಗದೆ ಹೋಗುವ ಸಂಭವವೇ ಹೆಚ್ಚು. ಅದರಲ್ಲಿ ಪ್ರತಿಭೆಯ ಕೊರತೆ ಇರುತ್ತದೆ ಅಂತ ಹೇಳಲಿಕ್ಕೆ ಆಗುವುದಿಲ್ಲ, ವಾತಾವರಣದಲ್ಲೇ ಆ ಪ್ರತಿಭೆಯನ್ನ ಮತ್ತೆ ಪೋಷಿಸುವ ಬೆಳೆಯಿಸುವ ಅವಕಾಶಗಳು ಇಲ್ಲದೇ ಇರಬಹುದು.

ನೀವು ಹೇಳಿದ ಎರಡನೇ ಮಾತು ನಿಜ. ಬೇರೆ ಜ್ಞಾನ ಶಾಖೆಗಳಲ್ಲಿ ಅನ್ಯಮೂಲದಿಂದ ಬರುವ ಜ್ಞಾನಕ್ಕೆ ನಾವು ಕೊಡುತ್ತಾ ಇರುವ ಒತ್ತು ಮತ್ತು ಸ್ವತಂತ್ರವಾಗಿ ಆಲೋಚಿಸುವ ಶಕ್ತಿ ಬೆಳೆಸುವ ಪ್ರಯತ್ನ ನಡೆಯಬೇಕಾಗಿದೆ.

ಪ್ರ: ಉಳಿದ ಭಾರತೀಯ ಭಾಷೆಗಳಲ್ಲಿನ ಪರಿಸ್ಥಿತಿ ಇದೇ ರೀತಿ ಇದೆಯೆ?

ಉತ್ತರ: ಎರಡು ಭಾಷೆಗಳನ್ನ ಪ್ರತ್ಯೇಕವಾಗಿ ಗಮನಿಸಿ ಹೇಳಬಹುದು. ಒಂದು ಬಂಗಾಲಿ ಇನ್ನೊಂದು ಮರಾಠಿ. ಈ ಎರಡೂ ಭಾಷೆಗಳ ಇತರ ಜ್ಞಾನ ಶಾಖೆಗಳಲ್ಲಿ ಆಯಾ ಭಾಷೆಯಲ್ಲೇ ಆಲೋಚಿಸಿ ಮಾಡುವ ಕ್ರಮ ಇದೆ. ಬ್ರಿಟಿಷ್ ಆಡಳಿತದ ಕಾಲದಲ್ಲೇ ಭಾರತದಲ್ಲೇ ಅತಿ ದೊಡ್ಡ ಪ್ರಮಾಣದ ವೈಜ್ಞಾನಿಕ ಸಂಶೋಧನೆ ಬಂಗಾಲದಲ್ಲಿ ಆಗುತ್ತಿತ್ತು ಅಂತ ಕೇಳಿದ್ದೀನಿ. ಜಗದೀಶ್ ಚಂದ್ರಬೋಸ್, ಮೇಗನಾಥ ಸಾಹಾ... ಅಂಥವರು ಹೇಗೆ ಬಂದರು. Anthropology ಯಲ್ಲಿ Sociology ಯಲ್ಲಿ ಮಹತ್ತರ ಕೆಲಸ ಮಾಡಿದ ಕರ್ವೆ ಅಂಥ ವಿದ್ವಾಂಸರು ಹೇಗೆ ಬಂದರು. ದುರ್ಗಾಭಾಗವತ್ ಅವರು ಎಷ್ಟೊಂದು ಕೆಲಸ ಮಾಡಿದ್ದಾರೆ. ಈ ಎರಡು ಭಾಷೆಗಳ ಸಂಸ್ಕೃತಿಯಲ್ಲಿ ತಮ್ಮ ಭಾಷಾ ಕೇಂದ್ರಿತ ಚಿಂತನೆಗಳು ಆಲೋಚನೆಗಳನ್ನು ರೂಪಿಸಬೇಕೆಂಬ ಪ್ರಯತ್ನ ಈಗಲೂ ಇದೆ. ಆದರೆ ಬೇರೆ ಭಾರತೀಯ ಭಾಷೆಗಳಲ್ಲಿ ಆ ರೀತಿ ಇಲ್ಲ.

ಈಗಲೂ ಕನ್ನಡಕ್ಕಿಂತಲೂ ಹೆಚ್ಚು ಪಡೆದುಕೊಳ್ಳುವ ಭಾಷೆಯಾಗಿರುವುದು ಮಲಯಾಳಂ. ಇವತ್ತು ಪಾಲ್‌ಕೋಲ್‌ನಂಥವನ ಕಾದಂಬರಿ ಪ್ರಕಟಗೊಂಡರೆ ಅದು ಭಾರತದ ಯಾವುದೇ ಭಾಷೆಯಲ್ಲಿ ಬರುವುದಕ್ಕಿಂತ ಮೊದಲು ಮಲಯಾಳದಲ್ಲಿ ಬರುತ್ತದೆ. ಅವರು ಇದನ್ನೊಂದು ಹೆಚ್ಚಳ ಅಂತ ಸಾಧಿಸುತ್ತಾರೆ. ಆದರೆ ನನಗೆ ಅದು ಬಹಳ ಅಪಾಯಕಾರಿಯಾಗಿ ಕಾಣುತ್ತೆ. ಮಲಯಾಳಂನಲ್ಲಿ ಒಬ್ಬ ಅನುವಾದಕ ಸ್ವತಂತ್ರವಾಗಿ ಆರಾಮಿ ಬದುಕನ್ನ ಬದುಕಬಲ್ಲಷ್ಟು ಹಣ ಸಂಪಾದಿಸಬಲ್ಲ. ಕನ್ನಡದಲ್ಲಿ ಇವತ್ತಿಗೂ ಅಂಥದ್ದೊಂದು ಸಾಧ್ಯವಾಗಿಲ್ಲ. ತುಂಬಾ ಜನ ನೋಡಿ, ಮಲಯಾಳಂನಲ್ಲಿ ಎಷ್ಟೊಂದು

ಅನುವಾದಗಳಾಗುತ್ತಿವೆ ಅನ್ನುತ್ತಾರೆ. ನನ್ನ ಪ್ರಕಾರ ಇದು ಅಪಾಯಕಾರಿ ಪ್ರವೃತ್ತಿ. ಒಂದು ಹಂತದವರೆಗೂ ಸರಿ. ಆದರೆ ಅದನ್ನೇ ಮುಂದುವರೆಸಿದರೆ ಕಷ್ಟ. ಒಟ್ಟು ಭಾರತೀಯ ಭಾಷೆಗಳ ಪರಿಸ್ಥಿತಿ ಕೂಡ ಈ ಎರಡು ಭಾಷೆಗಳನ್ನು ಬಿಟ್ಟರೆ ಆಶಾದಾಯಕವಾಗಿಲ್ಲ.

ಇಡೀ ಭಾರತೀಯ ಮನಸ್ಸಿಗೇನೇ ಒಂದು ಗ್ಲಾನಿ ಆವರಿಸಿಕೊಂಡಿದೆ. ಅಥವಾ ಒಂದು ಮಸುಕು ಕವಿದಿದೆ. ಸ್ವತಂತ್ರವಾಗಿ ಆಲೋಚಿಸಬಲ್ಲ ಪ್ರವೃತ್ತಿ ಕುಗ್ಗಿದೆ. ಒಂದು ಹಳೆಯ ಉದಾಹರಣೆ ಕೊಡುವುದಾದರೆ ರಾಮಾಯಣದ ಸಾಗರೋಲ್ಲಂಘನೆಯ ಸಂದರ್ಭದಲ್ಲಿ ಹನುಮಂತನಿದ್ದ ಸ್ಥಿತಿ ಇದು. ತಾನೊಬ್ಬ ಪುಟ್ಟ ಕಪಿ, ತನಗೆ ಈ ಸಾಗರ ದಾಟಲಿಕ್ಕಾಗತ್ತ ಅಂತ ಗ್ಲಾನಿಯಾಗಿ ಕುಳಿತಿರುತ್ತಾನಲ್ಲ ಆಗ ಹೋಗಿ ನೀನು ಇದನ್ನು ದಾಟಬಲ್ಲೆ ನಿನ್ನಲ್ಲಿ ಆ ಶಕ್ತಿ ಇದೆ ಅಂತ ಹೇಳುತ್ತಾರಲ್ಲ ಹಾಗೆ ಹೇಳುವವರು ಯಾರೂ ಇಲ್ಲ. ನಮಗೆ ಸ್ವತಂತ್ರವಾಗಿ ಏನನ್ನೂ ಮಾಡಲಿಕ್ಕಾಗಲ್ಲ. ಚಿಂತಿಸಲಿಕ್ಕಾಗಲ್ಲ ಅಂತ ಭಾವಿಸಿದ್ದೀವಿ ಉಳಿದ ವಿದೇಶದ ವಿಶ್ವವಿದ್ಯಾಲಗಳಲ್ಲಿ ಸಾಧ್ಯವಾದದ್ದು ನಮ್ಮಲ್ಲೂ ಸಾಧ್ಯವಾಗಬೇಕು.

ಪ್ರ: ಒಟ್ಟು ಶಿಕ್ಷಣವನ್ನು ನಾವು ನೋಡುವ ಕ್ರಮದಲ್ಲಿ ಬದಲಾವಣೆ ಆಗಬೇಕಲ್ಲವೆ?

ಉತ್ತರ: ಖಂಡಿತವಾಗಿ ಭಾರತದ ಶಿಕ್ಷಣ ಪದ್ಧತಿಯ ಒಂದು ದೊಡ್ಡ ಸಮಸ್ಯೆ ಎಂದರೆ ಅದು ಹಳೆಯ dead load ನ್ನ ಬಿಟ್ಟುಕೊಟ್ಟಿಲ್ಲ. ನಮ್ಮದು ಸ್ಮೃತಿ ಪ್ರಧಾನ ಸಂಸ್ಕೃತಿಯಾದ್ದರಿಂದ, ನೆನಪಿಗೆ ಅಗಾಧವಾದ ಒತ್ತು ಇದೆ. ಎಲ್ಲವನ್ನೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ್ದರಿಂದ ಅದನ್ನ ಒಂದು ಗುಣವನ್ನಾಗಿ ಪಡೆದಿದ್ದೀವಿ. ಇದು ಮೆಚ್ಚಬೇಕಾದ ಗುಣವೆ, ಮಲೆಮಹದೇಶ್ವರ ಕಾವ್ಯ, ಮಂಟೆಸ್ವಾಮಿ ಕಾವ್ಯದ, ಸಾವಿರಾರು ಸಾಲುಗಳು, ವೇದಗಳು ನಮ್ಮ ಜನ ನೆನಪಿನ ಶಕ್ತಿಯಿಂದಲೇ, ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿದ್ದಾರೆ. ಆದರೆ ಇದರಲ್ಲಿ ಒಂದು ಅಪಾಯ ಇದೆ. ಅದು ಎರಡು ರೀತಿಯಲ್ಲಿ; ಮೆದುಳು ಅನ್ನೋದು Virtual thing ಅದು dead ಆದರೆ ಏನೂ ಉಪಯೋಗಕ್ಕೆ ಬಾರದು. ಕಂಪ್ಯೂಟರ್‌ನ hard disc ಹಾಳಾದ ಹಾಗೆ. ಎರಡನೆಯದು ಆ ರೀತಿಯ ನೆನಪುಳ್ಳವರ ಮೇಲಿನ ಅವಲಂಬನೆ. ಅದು ಎಷ್ಟಾಗುತ್ತೆ ಅಂದರೆ ಜ್ಞಾನದ ಪ್ರಜಾಪ್ರಭುತ್ವೀಕರಣ ಅಂತೀವಲ್ಲ ಅದು ಆಗೋಲ್ಲ. ಯಾರೋ ಒಬ್ಬಿಬ್ಬರಲ್ಲಿ ಅದು ಇದೆ ಉಳಿದವರಲ್ಲಿ ಇಲ್ಲ ಅಂತ ಆಗುತ್ತೆ. ಇದರ ಪರಿಣಾಮ ಇವತ್ತೂ ಶಿಕ್ಷಣ ಪದ್ಧತಿಯಲ್ಲಿ ಆಗುತ್ತಿದೆ. ಯಾರು memorise ಮಾಡಬಲ್ಲವರೋ ಅವರು ಹೆಚ್ಚು ಬುದ್ಧಿವಂತರಾಗುತ್ತಾರೆ. ವೈಜ್ಞಾನಿಕವಾದ ಬೆಳವಣಿಗೆಯಲ್ಲಿ ನೆನಪಿಗೆ ಅಷ್ಟೊಂದು ಮಹತ್ವ ಇಲ್ಲ. ನಿಜ ಒಂದರಿಂದ ಇಪ್ಪತ್ತರ ತನಕದ ಮಗ್ಗಿ ಒಂದು ಬುದ್ಧಿಯ ಕಸರತ್ತು. ಆದರೆ ಈಗ ಅದನ್ನ ಬಹಳ ಕಡಿಮೆ ಬಳಸುತ್ತೀವಿ.

ಉದಾಹರಣೆಗೆ ಒಂದು ಕೋಟಿ ಜನ ಪ್ರಾಥಮಿಕ ಶಾಲೆಗಳಲ್ಲಿ ಇದ್ದರೆ, ಅವರು ಹತ್ತನೇ ತರಗತಿಗೆ ಹೋಗುವ ಹೊತ್ತಿಗೆ ಎಂಟು ಲಕ್ಷ ಜನ ಮಾತ್ರ ಆಗುತ್ತಾರೆ. ಉಳಿದ ತೊಂಬತ್ತೆರಡು ಲಕ್ಷ ಜನ ಎಲ್ಲಿ ಹೋದರು. ಆ ಬಗ್ಗೆ ನಾವು ತಲೆಕೆಡಿಸಿಕೊಳ್ಳಲ್ಲ. ಇದು Selection and deletion process. ಇದಕ್ಕಿರುವ ಒಂದು ದೊಡ್ಡ ಅಸ್ತ್ರ ಅಂದರೆ memory, memory orientation ಇರುವ ಶಿಕ್ಷಣವನ್ನು ನಾವು ಮೊದಲು ಕೈಬಿಡಬೇಕು. ಹೊರದೇಶಗಳಲ್ಲಿನ ಶಿಕ್ಷಣ ಪದ್ಧತಿಯಲ್ಲಿ ನೆನಪಿಗೆ ಬಹಳ ಕಡಿಮೆ ಮಹತ್ವ ಇದೆ. Application ಗೆ ಪ್ರಾಮುಖ್ಯತೆ ಇದೆ. ಈ memory ಆಧಾರಿತ ಶಿಕ್ಷಣ ಪದ್ಧತಿ ಕೈಬಿಟ್ಟಾಗ ಸಾಮಾಜಿಕ ತಾರತಮ್ಯಗಳು ನಿವಾರಿಸಬಹುದು. ಯಾರಿಗೆ ವ್ಯವಧಾನ ಬಿಡುವು ಇದೆಯೋ ಅವರಿಗೆ ನೆನಪು ಸಾಧ್ಯ ಎಷ್ಟೋ ಮಕ್ಕಳಿಗೆ ವ್ಯವಧಾನವೂ ಇಲ್ಲ, ಬಿಡುವೂ ಇಲ್ಲ.

ನಮ್ಮ CET ಇತ್ಯಾದಿಗಳು ಈ ನೆನಪಿನ ಪರೀಕ್ಷೆ. Not your application. ಇದು ಎಲ್ಲಿಯತನಕ ಬದಲಾಗುವುದಿಲ್ಲವೋ ಆ ತನಕ ನಮ್ಮ ಭಾಷೆಯಲ್ಲಿ ಆಲೋಚಿಸಿ ಮಾಡಬಲ್ಲ ವಿಧಾನಗಳು ಸೃಜನಶೀಲವಾಗೋಕೆ ಸಾಧ್ಯವಿಲ್ಲ. ಬಹುಶಃ ಶಿಕ್ಷಣ ಶ್ರಮದ ಒತ್ತಡದಿಂದ ಹೊರಬರಲಿಕ್ಕೆ ನಮ್ಮ ಕವಿಗಳು ಸೃಷ್ಟಿಯಾಗಿರಬಹುದು ಕವಿತೆ memory oriented ಅಲ್ವಲ್ಲ!

ನೆನಪುಗಳಲ್ಲಿ ವೈಯಕ್ತಿಕ ನೆನಪಿದೆ ಸಾಮುದಾಯಿಕ ನೆನಪಿದೆ. ಸಾಮುದಾಯಿಕ ನೆನಪುಗಳ ಬಗ್ಗೆ ನನ್ನ ತಕರಾರಿಲ್ಲ. ಯಾಕೆಂದ್ರೆ ಅದಕ್ಕೆ ಯಾರೂ ವಾರಸುದಾರರಲ್ಲ. ವೈಯಕ್ತಿಕ ನೆನಪುಗಳಲ್ಲಿ ಯಾವಾಗಲೂ ಅಪಾಯಗಳಿವೆ. ಅದರ ಮೇಲೆ ಇದು ನನ್ನದು ಅನ್ನುವ claims ಇರುತ್ತದೆ.

ಪ್ರ: ಇವತ್ತಿನ ತಂತ್ರಜ್ಞಾನಕ್ಕೆ ನಿತ್ಯದ ಅಗತ್ಯಗಳಿಗೆ ಕನ್ನಡವನ್ನ ಹೊಂದಿಸಿಕೊಳ್ಳುವ ಬಗೆ ಹೇಗೆ?

ಉತ್ತರ: ಒಂದು ಕನ್ನಡದ ಬಸ್ ಟಿಕೆಟ್, ಡಿಮ್ಯಾಂಡ್ ಡ್ರಾಫ್ಟ್ ಮುಂತಾದವು ಸಣ್ಣಪುಟ್ಟ ಸಮಸ್ಯೆಗಳು. ಒಂದು mind set ಅನ್ನು ತೆಗೆದು ಹಾಕಬೇಕು. ಇವತ್ತಿನ ಪತ್ರಿಕೆಯಲ್ಲಿ 'ಮುಖ್ಯಮಂತ್ರಿ ಗಾದಿಯತ್ತ ಓಮರ್' ಅಂತ ಇತ್ತು. ಅವರ ಪ್ರಕಾರ ಇದು ಸಹಜ ವಾಕ್ಯ ರಚನೆ. ಆದರೆ ನನ್ನ ಪ್ರಕಾರ ಇದು ಕನ್ನಡದ ವಾಕ್ಯರಚನೆ ಅಲ್ಲ. ನಾವು ಆಲೋಚಿಸುವ ವಿಧಾನದಲ್ಲೇ ಹೇಗೆ ಇಂಗ್ಲಿಷ್‌ಗೆ ಹೊಂದಿಕೊಂಡಿದ್ದೀವಿ ಅಂತ. ಒಂದು ಸ್ವವಿಮರ್ಶೆ ಆರಂಭವಾಗಬೇಕು. ಬಹಳ ಜವಾಬ್ದಾರಿಯ ಕೆಲಸ ಅದು. ರೂಢಿಯನ್ನು ಬಿಟ್ಟುಕೊಡಬೇಕು, ತಪ್ಪುಗಳನ್ನು ದಿಟ್ಟವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ನನ್ನ 'ಪದ ಸಂಪದ' ಅಂಕಣದಲ್ಲಿ ಸಂಸ್ಕೃತ ಪದಗಳನ್ನು ಅದರಿಂದ ಹೊರಗಿಡಬೇಕು ಅನ್ನುವ ಪ್ರಯತ್ನ ಮಾಡುತ್ತಿದ್ದೇನೆ. ಉದಾ.ಗೆ ಅರ್ಥ ಅನ್ನುವ ಪದಕ್ಕೆ ಬದಲಾಗಿ ತಿರುಳು ಅನ್ನುವ ಪದ ಬಳಸಿದ್ದೇನೆ. ತುಂಬಾ Hate mails ಬರ್ತವೆ. ನೀವು ಸಂಸ್ಕೃತ ವಿರೋಧಿ ಅಂತ, ನಾನು ಸಂಸ್ಕೃತ ವಿರೋಧಿ ಅಲ್ಲ, ಕನ್ನಡ ಪರ ಅಷ್ಟೆ. ನಾನು ಪದಗಳನ್ನು ಬಳಸೋದು ಅಭಿಮಾನ ಅಲ್ಲ, ಲೋಕದೃಷ್ಟಿ ಅದು. ಜಗತ್ತನ್ನ ನೋಡುವ ಬಗೆ ಅದು. ಸಣ್ಣಪುಟ್ಟ ಸಂಗತಿಗಳನ್ನು ಬದಲಾಯಿಸಬಹುದು. ಆದರೆ ಮೆದುಳಿಗೆ ಹಾಕಿಕೊಂಡಿರೋ ಈ ಕಟ್ಟುಪಾಡು ಬಿಡಿಸಿಕೊಳ್ಳಬೇಕು. ಅದು ಬಿಡುಗಡೇನೂ ಹೌದು. ಜವಾಬ್ದಾರಿಯೂ ಹೌದು. ಬಿಡುಗಡೆ ನಿರಾತಂಕ ಸೃಷ್ಟಿಸಿದರೆ, ಜವಾಬ್ದಾರಿ ಭಾರವನ್ನ ಹೊರೆಯನ್ನ ಸೃಷ್ಟಿ ಮಾಡುತ್ತದೆ. ಆಗ ನೀವು ಹೊಸ ದಾರಿ ಹುಡುಕುತ್ತೀರಿ. ನೀವು ಸಂಸ್ಕೃತ ಪದ ಬಳಸುವುದಿಲ್ಲ ಎಂದಾದರೆ ಅದಕ್ಕೆ ತಕ್ಕದಾದ ಕನ್ನಡದ ಪದ ಯಾವುದು ಅಂತ ಹುಡುಕಿ, ಆ ಪದಕ್ಕೆ ಬಲ ಕಸುವನ್ನು ತಂದುಕೊಡಬೇಕು. ಇದು ವಿಶೇಷ ಹೊಣೆಗಾರಿಕೆ. ಕನ್ನಡ ಬಳಕೆಯ ದಿನನಿತ್ಯದ ವ್ಯಾವಹಾರಿಕ ಸಂಗತಿಗಳಿಂದ ಒಂದು ದೊಡ್ಡ ಮಸೂದೆಯನ್ನ ಮಂಡಿಸುವ ತನಕ ಕನ್ನಡದಲ್ಲೇ ಯೋಚಿಸಿ ಮಾಡುವ ಬಯಕೆ ಮೂಡಬೇಕು. ಹಾಗೆ ಮಾಡಬಹುದು ಅನ್ನೋದು ಮೊದಲಿಗೆ ನಮ್ಮ ಮನಸ್ಸಿನಲ್ಲಿ ಮೂಡಬೇಕು. ನಿಮಗೆ ನಂಬಿಕೆ ಇಲ್ಲದೇ ಹೋದರೆ ಏನೂ ಮಾಡಲಿಕ್ಕಾಗೋದಿಲ್ಲ.

ಸೀನಿಯರ್ ಫೆಲೋ
ಭಾರತೀಯ ಭಾಷಾ ಸಂಸ್ಥೆ
ಹುಣಸೂರು ರಸ್ತೆ, ಮೈಸೂರು

ಶಾಸ್ತ್ರೀಯ ಭಾಷೆಗಳು: ವಾಸ್ತವ ಪರಿಸ್ಥಿತಿ ಮತ್ತು ಮೂಲ ಸಮಸ್ಯೆ

ಮೂಲ : **ಶೆಲ್ಡನ್ ಪೋಲಕ್**
ಅನುವಾದಕರು : **ಎನ್.ಎಸ್. ಸುಬ್ಬಣ್ಣ**

೨೦೦೬ರಿಂದ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಕೊಡಬೇಕೆಂದು ಪ್ರಾರಂಭವಾದ ಚರ್ಚೆಯನ್ನು ಅದರ ಆರಂಭದಿಂದಲೂ ನಾನು ಕುತೂಹಲದಿಂದ ಗಮನಹರಿಸಿ ನೋಡುತ್ತಿದ್ದೇನೆ. ಭಾಷೆಗಳ ಮಧ್ಯೆ ಈ ರೀತಿಯ ಕಂದಕಗಳನ್ನು ನಿರ್ಮಿಸುವುದು ಅಪಾಯಕರ ಮತ್ತು ಭಾಷೆಗಳಲ್ಲಿ ಈ ಸ್ಥಾನದ ಹಂತಗಳನ್ನು ನಿರ್ಮಿಸಲು ಕೊಡುವ ಕಾರಣಗಳ ಹಿಂದಿನ ಪಾಂಡಿತ್ಯ ಶೈಥಿಲ್ಯದಿಂದ ಕೂಡಿದೆ. ಆದರೆ ಈ ಸಮಸ್ಯೆಯ ಕೇಂದ್ರ ಅಂಶದ ವಿಷಯದಲ್ಲಿ ನನಗೆ ಮಹಾಕವಿ ಭರ್ತೃಹರಿ ಹೇಳಿರುವ ಈ ಮಾತು ನೆನಪಿಗೆ ಬರುತ್ತದೆ. 'ಮನೆ ಉರಿಯುವವರೆಗೂ ಬಾವಿಯನ್ನು ತೋಡಲು ಕಾಯಬಾರದು'. ಏಕೆಂದರೆ ಭಾರತೀಯ ಭಾಷೆಗಳ ಅಧ್ಯಯನದ ಸೌದೆ ಬರೀ ಉರಿಯುತ್ತಿಲ್ಲ, ಹೆಚ್ಚು ಕಡಿಮೆ ಭಸ್ಮೀಭೂತವಾಗಿದೆ.

ಯಾವ ಭಾರತೀಯ ಭಾಷೆಗೇ ಆಗಲಿ ಶಾಸ್ತ್ರೀಯ ಸ್ಥಾನ ಕೊಟ್ಟು ಏನು ಪ್ರಯೋಜನ, ಅವುಗಳನ್ನು ಓದುವವರೇ ಇಲ್ಲದಿದ್ದರೆ? ಆದರೆ ಶಾಸ್ತ್ರೀಯ ಭಾಷೆಯ ಸ್ಥಾನ ನೀಡುವುದರ ಉದ್ದೇಶ, ಆ ಭಾಷೆಯ ಗಂಭೀರ ಅಧ್ಯಯನಕ್ಕೋಸ್ಕರವೇ ಆದರೆ, ಭಾರತದಲ್ಲಿ ಈ ಸ್ಥಾನ ಹೊಂದಬೇಕಾದ ಹತ್ತಕ್ಕೂ ಹೆಚ್ಚು ಭಾಷೆಗಳಿಗೆ ಈ ಸ್ಥಾನ ಸಿಗಬೇಕಾದ ಅತ್ಯಗತ್ಯತೆ ಇದೆ. ಆಧುನಿಕ ಭಾರತೀಯ ಸಾಹಿತ್ಯದ ಕಾಲದ ನಿಕಟ ಪೂರ್ವ ಸಮಯದ ಎಲ್ಲಾ ಭಾಷೆಗಳಿಗೂ ಇದು ಅನ್ವಯಿಸುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಮತ್ತು ಅದಕ್ಕೆ ಹಿಂದಿನ ಸುಮಾರು ಎರಡು ಸಾವಿರ ವರ್ಷಗಳ ಕಾಲ, ಭಾರತದಲ್ಲಿ ಇತಿಹಾಸ ಮತ್ತು ಭಾಷಾ ಸಂಬಂಧದ ಆಳವಾದ ಪಾಂಡಿತ್ಯ ಹೊಂದಿದ ಅನೇಕ ಭಾಷಾ ಶಾಸ್ತ್ರಜ್ಞರು ಇದ್ದರು. ಈ ತಜ್ಞರು ಜಗತ್ತಿನ ಯಾವುದೇ ಇತರ ಭಾಗದಲ್ಲಿನ ಪಂಡಿತರಿಗೆ ಸಾಟಿಯಾಗಿದ್ದರು. ಅವರು ರೂಪಿಸಿದ ಕನ್ನಡ, ಮಲಯಾಳಂ, ತೆಲುಗು, ತಮಿಳು ಮತ್ತು ಅಪಭ್ರಂಶ, ಅಸ್ಸಾಮೀಸ್, ಬಂಗ್ಲಾ, ಬ್ರಜ್ ಭಾಷಾ, ಗುಜರಾತಿ, ಮರಾಠಿ, ಒರಿಯಾ, ಪರ್ಷಿಯನ್, ಪ್ರಾಕೃತ, ಉರ್ದು ಮತ್ತಿತರ ಭಾಷೆಗಳಲ್ಲಿನ ಗ್ರಂಥಗಳ ಸಾಹಿತ್ಯಕ ಮತ್ತು ಐತಿಹಾಸಿಕ ಆವೃತ್ತಿಗಳು ಇವತ್ತಿಗೂ ಉಪಯೋಗಿಸಲ್ಪಡುತ್ತಿವೆ. ಹಲವು ಸಂದರ್ಭಗಳಲ್ಲಿ ಈ ಆವೃತ್ತಿಗಳನ್ನು ಬಿಟ್ಟು ಬೇರೆ ನಮಗೆ ಲಭ್ಯವಿಲ್ಲದೇ ಹೋಗಿದೆ. ಇದಕ್ಕೆ ಕಾರಣ, ಇವುಗಳು (ಕೃತಿಗಳ ಆವೃತ್ತಿಗಳು) ಅತ್ಯವಶ್ಯ ಎಂದಲ್ಲ, ಜ್ಞಾನಕ್ಷೇತ್ರದಲ್ಲಿ ಹೊಸ ತಿಳಿವು ಹಳೆಯದನ್ನು ದೂಡುತ್ತದೆ. ಈ ಸಂದರ್ಭದಲ್ಲಿ ಹೊಸದನ್ನು ಮಾಡುವವರು ಯಾರೂ ಇಲ್ಲ.

ಭಾರತೀಯ ಭಾಷೆಗಳ ಮತ್ತು ಸಾಹಿತ್ಯಗಳ ಅಧ್ಯಯನ ಮಾಡುವಲ್ಲಿ ಈಚಿನ ಎರಡು ತಲೆಮಾರುಗಳ ವಿದ್ಯಾರ್ಥಿಗಳು ಪೂರ್ಣವಾಗಿ ನಿರಾಸಕ್ತರಾಗಿದ್ದಾರೆ. ಇದಕ್ಕೆ ಕಾರಣ ಬೇರೆ ಕ್ಷೇತ್ರಗಳ ಪ್ರಬಲ ಆಕರ್ಷಣೆ. ಇದಕ್ಕೆ ಇದನ್ನೊಂದು ಕಾರಣ ಈ ಕ್ಷೇತ್ರವನ್ನು ಕಡೆಗಣಿಸಿರುವುದು ಕೂಡ. ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ. ಈ ಸಂದರ್ಭದಲ್ಲಿ ನಾನು ಕೆಲವು ದೃಷ್ಟಾಂತಗಳನ್ನು ಕೊಡುತ್ತೇನೆ. ಅಮೆರಿಕದ ಒಂದು ಪ್ರಸಿದ್ಧ ವಿಶ್ವವಿದ್ಯಾನಿಲಯ ಹಲವು ವರ್ಷಗಳಿಂದ ಒಬ್ಬ ತೆಲುಗು ಭಾಷಾ ಪ್ರಾಧ್ಯಾಪಕನಿಗಾಗಿ ಹುಡುಕಿತು. ವಿಶ್ವವಿದ್ಯಾನಿಲಯವು ಭಾರತೀಯ ಶಾಸ್ತ್ರೀಯ ಅಧ್ಯಯನದಲ್ಲಿ ಅತ್ಯಾಸಕ್ತಿಯನ್ನು ಮೊದಲಿನಿಂದ ಹೊಂದಿದೆ. ನನ್ನಯ್ಯನಿಂದ ಇಂದಿನವರೆಗೂ ತೆಲುಗು ಸಾಹಿತ್ಯದಲ್ಲಿ ಪಾಂಡಿತ್ಯವುಳ್ಳ ಒಬ್ಬ ವಿದ್ವಾಂಸನೂ ಆ ವಿಶ್ವವಿದ್ಯಾನಿಲಯಕ್ಕೆ ದೊರಕಲಿಲ್ಲ. ಈ ಕ್ಷೇತ್ರದಲ್ಲಿ ಗಂಭೀರ ಅಧ್ಯಯನ ಮಾಡಿರುವ ಏಕೈಕ ಪ್ರಾಧ್ಯಾಪಕರು ಈ ವಿಶ್ವವಿದ್ಯಾನಿಲಯದಿಂದ ಸ್ವಲ್ಪ ಸಮಯದಲ್ಲೇ ನಿವೃತ್ತರಾಗುತ್ತಾರೆ. ಅವರ ನಿವೃತ್ತಿಯೊಂದಿಗೆ, ಅಮೆರಿಕದಲ್ಲಿ ತೆಲುಗು ಶಾಸ್ತ್ರಾಧ್ಯಯನವು ಅಸ್ತಂಗತವಾಗುತ್ತದೆ. ಇದೇ ಪರಿಸ್ಥಿತಿ ಬೇರೆ ಭಾಷೆಗಳಲ್ಲೂ ಇದೆ. ಉದಾಹರಣೆಗೆ, ಬಂಗಾಳಿ ಭಾಷೆಯಲ್ಲಿ ಟಾಗೋರರ ಕೃತಿಗಳನ್ನಲ್ಲದೇ ವೈಷ್ಣವ ಪದಗಳನ್ನು ಮತ್ತು ಚೈತನ್ಯನ ಜೀವನ ಚರಿತ್ರೆ 'ಚೈತನ್ಯ ಚರಿತಾಮೃತ'ವನ್ನು ಓದಬಲ್ಲ ವಿದ್ವಾಂಸರು ಅತಿ ವಿರಳ.

ನಾನು ಹಲವು ವರ್ಷಗಳಕಾಲ ಶಾಸ್ತ್ರೀಯ ಕನ್ನಡವನ್ನು ಮೈಸೂರಿನ ಡಾ।। ವೆಂಕಟಾಚಲ ಶಾಸ್ತ್ರಿಗಳೊಡನೆ ಅಧ್ಯಯನ ಮಾಡಿದ್ದೇನೆ, ಅವರು, ಆಗಲೇ ಹೇಳಿದ, ಚಾರಿತ್ರಿಕ ಹಾಗೂ ಗಂಭೀರ ಅಧ್ಯಯನದಲ್ಲಿ ಒಬ್ಬ ಅತ್ಯುತ್ತಮ ಪ್ರತಿನಿಧಿಗಳು. ಕನ್ನಡದ ಪ್ರಸಿದ್ಧ ಕವಿಗಳಾದ ಪಂಪ, ರನ್ನ ಪೊನ್ನರ ಕೃತಿಗಳಲ್ಲಿ ಪ್ರಭುತ್ವ ಹೊಂದಿದ ಒಬ್ಬ ಯುವ ವಿದ್ವಾಂಸನನ್ನು ನಾನು ಭೇಟಿಯಾಗಲು ಆಗಿಲ್ಲ. ಇನ್ನು ಕರ್ನಾಟಕದ ಅಪ್ರತಿಮ ಶಾಸನಗಳ ಸಂಪತ್ತನ್ನು ಓದುವ ವ್ಯಕ್ತಿಗಳಂತೂ ಇಂತೆಯೇ ವಿರಳ.

ಭಾರತದ ರಾಜಧಾನಿಯಲ್ಲಿರುವ ಎರಡು ಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ಯಾರೂ ಹಿಂದಿ ಶಾಸ್ತ್ರೀಯ ಸಾಹಿತ್ಯದಲ್ಲಿ ಸಂಶೋಧನೆ ಮಾಡುತ್ತಿಲ್ಲ, ನಾನು ಹೇಳುತ್ತಿರುವುದು ಕೇಶವದಾಸ ಮತ್ತು ಆತನ ನಂತರದವರ ಮಹತ್ಕೃತಿಗಳನ್ನು ಕುರಿತು. ಇದನ್ನು ನಾವು ಇಂದಿನ ಪ್ಯಾರಿಸ್‌ನಲ್ಲಿ ಕಾರ್ಲೈಲ್, ರೇಸಿನ್ ಮತ್ತು ಮೋಲಿಯೇರ್ ಕೃತಿಗಳ ಬಗ್ಗೆ ಯಾರೂ ಅಧ್ಯಯನ ಮಾಡದಿದ್ದರೆ ಹೇಗೋ ಅದಕ್ಕೆ ಹೋಲಿಸಬಹುದು. ಈ ಪರಿಸ್ಥಿತಿಯ ಚಿಹ್ನೆಯಂತೆ ಸಾವಿರಾರು ಬ್ರಿಜ್ ಭಾಷಾ ಕೃತಿಗಳು ಪತ್ರಾಗಾರದಲ್ಲಿ ಕೂತಿವೆ. ಇಂದಿಗೂ ಸಂಪಾದಿಸುವವರು ಯಾರೂ ಇಲ್ಲದೆ ಈ ಪರಿಸ್ಥಿತಿ ಇಂಡೋ-ಪರ್ಷಿಯನ್ ಸಾಹಿತ್ಯದ ವಿಷಯದಲ್ಲಿ ಇನ್ನೂ ಹೆಚ್ಚು ಪ್ರಸ್ತುತ. ಹಲವಾರು ಹಸ್ತಪ್ರತಿಗಳು ಮೊಘಲ್ ಆಸ್ಥಾನದ ದಿವಾನ್‌ಗಳನ್ನು ಒಳಗೊಂಡು, ಇನ್ನೂ ಓದುವವರಿಲ್ಲದೇ, ಸಂಪಾದನೆ ಸಾಧ್ಯವಾಗದೆ ಇವೆ. ಈ ವಿಷಯದಲ್ಲಿ ಪರಿಚಯ

ಇರುವ ಸ್ನೇಹಿತರೊಡನೆ ಪ್ರಸ್ತಾಪ ಮಾಡಿದಾಗ ಈ ಕ್ಷೇತ್ರದಲ್ಲಿ ಇರುವ ನುರಿತ ವಿದ್ವಾಂಸರೆಲ್ಲಾ ೮೦ರ ಮೇಲ್ಪಟ್ಟಿನ ಪ್ರಾಯದವರೆಂದು ಹೇಳುತ್ತಾರೆ.

ಎರಡು ವರ್ಷಗಳ ಹಿಂದೆ, ನಾನು ಉದಯಪುರದಲ್ಲಿ ನಡೆದ ಒಂದು ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಆ ಸಮ್ಮೇಳನದ ಚರ್ಚಾ ವಿಷಯ "ಭಾರತದಲ್ಲಿ ಮಾನವ ಸಂಬಂಧ ಶಾಸ್ತ್ರಗಳ ಅಧ್ಯಯನದ ಇವತ್ತಿನ ಸ್ಥಿತಿ ಮತ್ತು ಭವಿಷ್ಯ". ಅಲ್ಲಿ ಬಂದಿದ್ದ ನೂರಕ್ಕೂ ಹೆಚ್ಚಿನ ಪ್ರತಿನಿಧಿಗಳನ್ನು ನಾನು ಅವರಲ್ಲಿ ಎಷ್ಟು ಜನ ತಮ್ಮ ಶಿಷ್ಯರಿಗೆ ಭಾರತೀಯ ಭಾಷೆಗಳ ಹಿಂದಿನ ಕೃತಿಗಳನ್ನು ಹೇಳಿಕೊಡುವಿರೆಂದು ಕೇಳಿದೆ. ಅವರಲ್ಲಿ ಹಲವರು ಈ ದೇಶದ ಅತ್ಯುತ್ತಮ ಸಾಹಿತ್ಯ ವಿದ್ವಾಂಸರು. ಅವರಲ್ಲಿ ಕೇವಲ ಮೂರು ಜನ ಕೈ ಎತ್ತಿದರು. ಅವರೆಲ್ಲರೂ ಸಂಸ್ಕೃತಾಧ್ಯಾಪಕರು.

ಒಂಭತ್ತು ವರ್ಷಗಳ ಹಿಂದೆ ಅಪಭ್ರಂಶದ ಪ್ರಸಿದ್ಧ ವಿದ್ವಾಂಸರಾದ ಎಚ್.ಸಿ.ಭಯಾನಿ ಯವರು ತೀರಿಕೊಂಡರು ಅವರ ಮೃತ್ಯುವಿನೊಡನೆ ಭಾರತದಲ್ಲಿಯೂ ಅಪಭ್ರಂಶದ ಅಧ್ಯಯನವೇ ಅಂತ್ಯವಾಯಿತು. ನನ್ನ ಅಭಿಪ್ರಾಯದಲ್ಲಿ ಅಪಭ್ರಂಶದಲ್ಲಿ ಏನಾಗಿದೆಯೋ ಅದು ಈ ದೇಶದಲ್ಲಿ ಆಗುತ್ತಿರುವ ಸಾಂಸ್ಕೃತಿಕ ಕಗ್ಗೊಲೆ ಹಾಗೂ ಆತ್ಮಹತ್ಯೆಯ ಸಂಕೇತವಾಗಿದೆ. ಭಾಷಾ ಜ್ಞಾನದ ಜೊತೆ ಅವರೊಡನೆ ಅನ್ಯೋನ್ಯ ಸಂಬಂಧ ಹೊಂದಿರುವ ಹಳೆಯ ಲಿಪಿಗಳನ್ನು ಓದುವ ಸಾಮರ್ಥ್ಯ (ಉದಾ: ಬ್ರಾಹ್ಮೀ, ಮೋಡಿ, ಶಿಖಾಸ್ತ) ಮರೆಯಾಗುತ್ತಿದೆ.

ನಾನು ಭಾರತದಲ್ಲಿ ಇರುವ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಈ ಮೇಲೆ ಕಂಡ ವಿಷಯದಲ್ಲಿ ಏನಾಗುತ್ತಿದೆಯೆಂದು ಕೂಲಂಕಷವಾಗಿ ಪರಿಶೀಲಿಸಿಲ್ಲ, ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಈ ದಿಸೆಯಲ್ಲಿ ನಾನು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಕಾರ್ಯ ನಡೆಯುತ್ತಿರುವುದು ನನಗೆ ಗೊತ್ತು. ಆದರೆ ಅತಿಶಯೋಕ್ತಿಯಿಲ್ಲದೆ ನಾನು ಇದನ್ನು ಹೇಳಬಲ್ಲೆ, ಇನ್ನು ಎರಡು ತಲೆಮಾರುಗಳಲ್ಲಿ, ಭಾರತದ ವಿದ್ವತ್ ಚರಿತ್ರೆ ಪ್ರಪಂಚದ ನಾಗರಿಕತೆಗೆ ಭಾರತ ಕೊಟ್ಟ ಪ್ರಕಾಶಮಯ ನಿಧಿ– ಭಾರತದ ಜನರಿಗೆ ಓದಲು ಅಶಕ್ಯವಾಗಲಿದೆ.

ಸಂಸ್ಕೃತದಲ್ಲಿ ಇನ್ನೊಂದು ಗಾದೆಯಿದೆ. 'ಒಂದು ಮನೆಯನ್ನು ಸುಲಭವಾಗಿ ಕೆಡವಬಹುದು. ಆದರೆ ಕಟ್ಟುವುದು ಕಷ್ಟ.' ಭಾರತದ ಮಹತ್ತಾದ ವಿದ್ವತ್ ಸೌಧವು ಹೆಚ್ಚು ಕಡಿಮೆ ಕುಸಿದಿದೆ. ಈ ಕೊನೆಯ ಘಳಿಗೆಯಲ್ಲಿ ಅದನ್ನು ಮತ್ತೆ ಕಟ್ಟಲು ಸಾಧ್ಯವೇ? ಭಾರತ ತಾನು ಆರಿಸಿಕೊಂಡ ಕ್ಷೇತ್ರಗಳಲ್ಲಿ ಅತ್ಯುನ್ನತವಾದ ಶಿಖರವನ್ನು ಏರಿ ಎಷ್ಟೋ ಬಾರಿ ತೋರಿಸಿದೆ. ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗಳನ್ನೇ ತೆಗೆದುಕೊಳ್ಳಿ. ಪ್ರಪಂಚದ ವಿಶ್ವವಿದ್ಯಾನಿಲಯಗಳು, ಉದ್ಯಮಗಳು ಮತ್ತು ಸಂಸ್ಥೆಗಳು ಈ ಸಂಸ್ಥೆಗಳ ಪದವೀಧರರನ್ನು ತಮ್ಮಲ್ಲಿ ಸೇರಿಸಿಕೊಳ್ಳಲು ಪೈಪೋಟಿ ಮಾಡುತ್ತವೆ. ಏತಕ್ಕಾಗಿ ಭಾರತ ತನ್ನ ಸಂಸ್ಕೃತಿಯ ರಕ್ಷಣೆಗಾಗಿ ಮತ್ತು ಬೆಳವಣಿಗೆಗಾಗಿ ಇದೇ ರೀತಿಯ ಸಂಸ್ಥೆಗಳನ್ನು ಕಟ್ಟಬಾರದು? ಬರೀ ನೃತ್ಯಕಲೆ ಮತ್ತು ಸಂಗೀತಕ್ಕೆ ಮೀಸಲಾಗದೆ ಸಾಹಿತ್ಯ ಸಂಸ್ಕೃತಿಗಾಗಿ ಕೂಡ.

ಭಾರತದ ಶಾಸ್ತ್ರೀಯ ಭಾಷೆಗಳ ಅಧ್ಯಯನದ ಪುನರುತ್ಥಾನಕ್ಕಾಗಿ ಮತ್ತು ಲೋಕಮಾನ್ಯ ವಿದ್ವತ್ತಿಗಾಗಿ, ಮಿಕ್ಕ ವಿಶ್ವವಿದ್ಯಾನಿಲಯಗಳಿಗೆ ಮಾದರಿಯಾಗಿ, ಆ ವಿಶ್ವವಿದ್ಯಾನಿಲಯಗಳಿಗೆ ಜ್ಞಾನ ಗಂಗೋತ್ರಿಯಾಗಿ, ಏಕೆ ಭಾರತೀಯ ಮಾನವ ಸಂಬಂಧ ಶಾಸ್ತ್ರಗಳ ಸಂಸ್ಥೆಗಳನ್ನು ಕಟ್ಟಬಾರದು? ಇನ್ನೂ ಕಾಲ ಮಿಂಚಿಲ್ಲ, ಇದರಲ್ಲಿ ಭಾರತ ವಿಫಲವಾದರೆ ಅದರ ಪರಿಣಾಮ ಒಂದು ಆಗಬಾರದ ಮಹಾ ಅನಾಹುತ.

ಲೇಖನ ಕೃಪೆ: ಜನಪದ ವಿಚಾರ ಪತ್ರಿಕೆ
ಸಂಪುಟ ೯, ಸಂಚಿಕೆ ೬, ಜನವರಿ ೨೦೦೯

ಪ್ರಶಸ್ತಿಗಳ ಬೆಳಕು ಮತ್ತು ಬೆಳಗಿನಲ್ಲಿ ಶ್ರೀನಿವಾಸ ವೈದ್ಯ



ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಶ್ರೀನಿವಾಸ ವೈದ್ಯರ ಚೊಚ್ಚಲ ಕಾದಂಬರಿ 'ಹಳ್ಳ ಬಂತು ಹಳ್ಳ' ಕೃತಿ (೨೦೦೪) ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಈ ಲೇಖನ ಬರೆಯಬೇಕೆಂದುಕೊಂಡಿದ್ದೆ. ಆದರೆ ಅವರ ನನ್ನ ಸ್ನೇಹ ಬರೇ ಸಾಹಿತ್ಯಕ್ಕೆ ಮೀಸಲಾಗಿರದೆ ವೈಯಕ್ತಿಕ ಮಟ್ಟಕ್ಕೇರಿದ್ದರಿಂದ ನನ್ನ ಬರವಣಿಗೆ ವ್ಯಕ್ತಿನಿಷ್ಠವಾಗುತ್ತದೇನೋ ಎಂಬ ಅಳುಕು ನನ್ನನ್ನು ಬರವಣಿಗೆಯಿಂದ ಹಿಂಜರಿಸಿತು. (ಇಂತಹ ವ್ಯಕ್ತಿಪ್ರಜ್ಞೆಯಿಂದಾಗಿ ಅನೇಕ ವಿಮರ್ಶೆಗಳು ವಾಸ್ತವದ ಗತಿಗೆ ವಿರೋಧವಾಗಿ ಹೊಸ ಜಗತ್ತು ಮತ್ತು ಜಾಗತಿಕತೆಗಳನ್ನು ಕೃತಿಯಲ್ಲಿ ಸೃಷ್ಟಿಸಲು ಯತ್ನಿಸಿ ನಗೆಪಾಟಲಾದದ್ದೂ ಇದೆ!) ಜೊತೆಗೆ ನನ್ನ ಲೇಖನ ಸಂಗ್ರಹ 'ಬಿಸಿಲ ಹಂದರ'(೨೦೦೭)ಕ್ಕೆ ವೈದ್ಯರು ಮುನ್ನುಡಿ ಬರೆದಿದ್ದರು. ಹೀಗೆ ನನ್ನ ಲೇಖನ ಭ್ರೂಣಾವಸ್ಥೆಯಲ್ಲೇ ಉಳಿಯಿತು. ಈಗ ವೈದ್ಯರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ(ಕ್ಲೀಷೆಯ ಪದ ಬಳಸುವುದಾದರೆ ಪ್ರಶಸ್ತಿಯ ಗರಿ) ಲಭಿಸಿದೆ. ಈಗ ಅವರ ಈ ಕೃತಿ ಕನ್ನಡವನ್ನು ಅಧಿಕೃತವಾಗಿ ಪ್ರತಿನಿಧಿಸುತ್ತದೆಯಾದ್ದರಿಂದ ಅದರ ಮತ್ತು ಅವರ ಬಗ್ಗೆ ಬರೆಯುವುದು ವ್ಯಕ್ತಿನಿಷ್ಠವಾಗುವುದಿಲ್ಲ, ಬದಲಿಗೆ ಅಗತ್ಯ ಮನೋಭಾವವಾಗುತ್ತದೆ. ಇವಿಷ್ಟು ಹೇಳಿ ವೈದ್ಯ ಮತ್ತು ಅವರ ಬರೆಹಗಳ ಕುರಿತು ಲಕ್ಷ್ಯ ಬೀರುವುದು ಉಚಿತವೆಂದು ನನಗನ್ನಿಸಿದೆ.

ವೈದ್ಯರು ಆರಂಭದಲ್ಲಿ ನಗೆಬರೆಹಗಾರರೆಂದೇ ಅವರ ಕೃತಿಗಳನ್ನು ಓದಿದವರೂ

ವಿಮರ್ಶಿಸಿದವರೂ ಅವರನ್ನು ಪರಿಚಯಿಸಿದ್ದು. ಇದು ನಿಜವಿರಬಹುದೆಂಬಂತೆ ಅವರು ಕನ್ನಡದ ಪ್ರಸಿದ್ಧ ನಗೆಬರೆಹಗಳ ಪತ್ರಿಕೆ ಅಪರಂಜಿಯಲ್ಲಿ ತಮ್ಮ ಬರೆಹಗಳನ್ನು ಪ್ರಕಟಿಸಿದ್ದರು. ಅವರ ಹರಟೆ-ಪ್ರಬಂಧಗಳ ಸಂಕಲನ 'ಮನಸುಖರಾಯನ ಮನಸು' ಮನೋಹರ ಗ್ರಂಥಮಾಲೆಯಿಂದ ಆಗಲೇ ಪ್ರಕಟವಾಗಿ ನನ್ನಲ್ಲಿತ್ತಾದರೂ ಅದನ್ನು ನಾನು ಗಂಭೀರವಾಗಿ ಸ್ವೀಕರಿಸದೆ just glance ಮಾಡಿದ್ದೆ ಅಷ್ಟೆ.

ಈ ನಡುವೆ ಅಪರಂಜಿಯಲ್ಲಿ ವೈದ್ಯರ ಒಂದು ಬರೆಹ (ಇದನ್ನು ಬರೆಹ ಎಂದು ಏಕೆ ಹೇಳಿದೆನೆಂದು ಮುಂದೆ ನಿಮಗರ್ಥವಾಗುತ್ತದೆ.) ಗಂಡಭೇರುಂಡ ಪ್ರಕಟವಾಗಿತ್ತು. ಅದನ್ನೋದಿ ನಾನು ಇದು ಮಾಸ್ತಿ ಸಂಪ್ರದಾಯದ ಒಂದು ಒಳ್ಳೆಯ ಕತೆ ಎಂದು ಪ್ರತಿಕ್ರಿಯಿಸಿದೆನೆಂದು ನೆನಪು. ಅದಕ್ಕೆ ಉತ್ತರವಾಗಿ ವೈದ್ಯರು ವಿನಮ್ರರಾಗಿ ತಮ್ಮ ಮಿತಿಯನ್ನು ಹೀಗೆ ಹೇಳಿಕೊಂಡರು:

> ಗಂಡಭೇರುಂಡ ಲೇಖನದ ಮೂಲ ಉದ್ದೇಶವೇ ಮಾಸ್ತಿಯವರನ್ನು ಅಣಕ ಮಾಡಲೆಂದು. ನೀವು ಮಾಸ್ತಿಯವರ ಛಾಯೆಯನ್ನು ಗುರುತಿಸಿದ್ದರಲ್ಲಿ ಆಶ್ಚರ್ಯ ವೇನೂ ಇಲ್ಲ. ಇದನ್ನು ಬರೆಯುವಾಗ ನಾನು ತುಂಬ ಹೆದರಿಕೊಂಡಿದ್ದೆ. ಎರಡು ತೀವ್ರ ದಟ್ಟವಾದ ಪೂರ್ವಗ್ರಹಗಳಲ್ಲಿ ಲೇವಡಿ ಮಾಡುವುದಷ್ಟೇ ನನ್ನ ಉದ್ದೇಶ ವಾಗಿತ್ತು. ಬರೀತಾ ಬರೀತಾ ಅದರಲ್ಲಿ ಇನ್ನೊಂದೆರಡು ಸ್ತರಗಳು ಬಂದು ಕೂಡಿದವು. ಇಷ್ಟೆಲ್ಲ ಆಗುವಾಗ, ಇನ್ನಷ್ಟು ಪೂರ್ವಗ್ರಹಗಳನ್ನೆಲ್ಲಿ ಕೆದಕುವೆನೋ ಎಂಬ ಭೀತಿ ಕಾಡುತ್ತಿತ್ತು. ಹಾಗೇನೂ ಆಗಲಿಲ್ಲ ಸದ್ಯ.
>
> ಮಾಸ್ತಿಯವರು ನನಗೆ ಆರಾಧ್ಯದೈವತರು. ಅವರ 'ಸುಬ್ಬಣ್ಣ' ವನ್ನು ನಾನು ಪಾರಾಯಣ ಮಾಡಿದ್ದೇನೆ. ಅವರ ಸರಳ ಸುಂದರ ಶೈಲಿ, ಅವರು ಬಳಸುವ 'ಇರುತ್ತೆ', 'ಶಾನೆ', 'ಅಂದಿನ ದಿನಕ್ಕೆ' ಎಂಬ ಶಬ್ದಗಳ ಮೋಡಿ ನಮ್ಮನ್ನು ಯಾವುದೋ ಕಳೆದುಕೊಂಡ ಕನಸಿನ ಲೋಕಕ್ಕೆ ಕೊಂಡೊಯ್ಯುತ್ತದೆ.
>
> ಆದರೇನು ಮಾಡಲಿ? ಇದು ಹಾಸ್ಯಗಾರನ ಶಾಪ. ಅವನು ತಾನು ಮೆಚ್ಚಿದ್ದನ್ನೇ, ಗೌರವಿಸಿದ್ದನ್ನೇ, ಅಥವಾ ಅವನನ್ನು ಕೂಡ ಹಾಸ್ಯಕ್ಕೆ ಎಳೆಯುತ್ತಾನೆ. ಇದಿಷ್ಟು 'ಗಂಡಭೇರುಂಡ'ದ ಕತೆ.

ಇಂತಹ ಅಣಕಗಳು ಬೇಂದ್ರೆಯವರ 'ಬೆಕ್ಕು ಹಾರುತಿದೆ ನೋಡಿದಿರಾ?' ಅಥವಾ ಬ್ಲೇಕನ 'ಟೈಗರ್'ನಂತಹ ಉದಾಹರಣೆಗಳಿವೆ. ವೈದ್ಯರು ಹೀಗೆ ಹೇಳಿದರೂ ಗಂಡಭೇರುಂಡ ಅವರ ಆಶಯಗಳನ್ನು ಮೀರಿ ಕತೆಯಾಗಿದೆ. 'ಅಕಟಾ'ದಂತಹ ಒಂದೆರಡು ಉದ್ದೇಶಿತ ಹಾಸ್ಯ ಬಳಕೆಗಳನ್ನು ಹೊರತುಪಡಿಸಿದರೆ ಇಲ್ಲಿ ಕಥಾವಸ್ತು ಸಹಜವಾಗಿ ಬದುಕಿನ ಬಣ್ಣದಲ್ಲೇ ತೆರೆದುಕೊಳ್ಳುತ್ತದೆ. ಆದ್ದರಿಂದ ಅದು ತಾಂತ್ರಿಕವಾಗಿ ಬರೆಹವಾದರೂ ಒಂದು ನೈಜ ಯಶಸ್ವೀ ಕತೆ. (ನನ್ನ ಲೇಖನಕ್ಕೆ ಆ ಕತೆಯ ವಿವರಗಳು ಮತ್ತು ವಿಸ್ತೃತ ಚರ್ಚೆ ಅವಶ್ಯವಿಲ್ಲವೆಂದುಕೊಂಡಿದ್ದೇನೆ.) ಕೆ.ಸತ್ಯನಾರಾಯಣರ ಕತೆಗಳಲ್ಲಿ ಸುಮಾರಾಗಿ ಈ ರೀತಿಯ ಸಹಜ ವಿವರಣೆ ಮತ್ತು ವಸ್ತು ವೀಕ್ಷಣೆಯನ್ನು ಕಾಣಬಹುದು.

೨೦೦೩ರಲ್ಲಿ 'ವೈದ್ಯರ ರುಚಿಗೆ ಹುಳಿಯೊಗರು' ಎಂಬ ಕೃತಿ ಪ್ರಕಟವಾಯಿತು. ಈ ಕೃತಿಯಲ್ಲಿ ಇರುವುದು ಅವರೇ ಹೇಳಿಕೊಂಡಂತೆ ಹಾಸ್ಯ ಪ್ರಬಂಧಗಳು. ಈ ಕೃತಿಗೆ ಆ.ರಾ.ಮಿತ್ರ ಅವರ ಮುಂಗೊರೆತವಿತ್ತು. ಇದೂ ಹಾಸ್ಯಮಯವಾಗಿದ್ದರೂ ಮಿತ್ರರು ಹೀಗೆ ಬರೆದದ್ದು ಈಗ ಹೆಚ್ಚು ಪ್ರಸ್ತುತವಾಗುತ್ತದೆ:

ಶ್ರೀನಿವಾಸ ವೈದ್ಯರ ಅನನ್ಯ ಶೈಲಿಯ ಬಗೆಗೆ ಎರಡು ಮಾತು ಹೇಳಿ ಮುಗಿಸುತ್ತೇನೆ. ಇವರ ಶೈಲಿಯ ಮುಖ್ಯಾಂಶ ಎಂದರೆ ಧ್ವನಿಪೂರ್ಣವಾದ ಉತ್ಪ್ರೇಕ್ಷೆಯ ಕುದುರೆಯನ್ನೇರಿ ಧಾರವಾಡದ ದೇಸೀ ಪರಿಮಳವನ್ನು ಆಘ್ರಾಣಿಸುತ್ತ ತನಗೇ ವಿಶಿಷ್ಟವಾದ ವಿಚಾರ ಸೀಮೆಯಲ್ಲಿ ಹೆಜ್ಜೆ ಹಾಕುವ 'ವೈಹಾಳಿ'ತನ.

'ನುಡಿಯಗಡಣದ ಬೆಳಕು ಮರುತ ಪರಿಮಳದಂತೆ' ಎಂಬ ಅಲ್ಲಮನ ಹೇಳಿಕೆಯನ್ನು ನಿಜವಾಗಿಸುವ ವೈದ್ಯರ ಭಾವಪುಷ್ಪಗಳು ಹೃದಯಂ'ಘಮ'ವಾಗಿವೆ ಎಂದರೆ ಎಲ್ಲವನ್ನೂ ಹೇಳಿದಂತಾಯಿತಲ್ಲ.

ಅಲ್ಲಮ ಮತ್ತು ಚೋಮ್‌ಸ್ಕಿಯನ್ನು ಉಲ್ಲೇಖಿಸದೆ ಯಾವ ಕನ್ನಡ ಸಮಕಾಲೀನ ಅಕೆಡೆಮಿಕ್ ವಿಮರ್ಶೆಯೂ ಪೂರ್ಣವಾಗುವುದಿಲ್ಲವೆಂದು ಮಿತ್ರರೊಬ್ಬರು ಹೇಳಿದ್ದು ಈ ಮುಂಗೂರೆತವನ್ನು ಓದುವಾಗ ನೆನಪಾಗಿದ್ದರೂ ಅದು ವೈದ್ಯರ ಶೈಲಿ ಬಗ್ಗೆ ಸಮರ್ಥನೀಯವೆಂದು ನಂತರದಲ್ಲಿ ನನಗನ್ನಿಸಿದೆ.

ಈ ಕೃತಿಯಲ್ಲಿ ವೈದ್ಯರು ಮತ್ತೆ 'ಮೂಲತಃ ಇವು ನಗೆಬರೆಹಗಳು' ಎಂದಿದ್ದಾರೆ. ಒಂದು ರೀತಿಯಲ್ಲಿ ತನ್ನ ರಚನೆಗಳ ಬಗ್ಗೆ ಒಂದು ಕನ್ಸಿಸ್ಟೆನ್ಸಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲನೇಕರು ತಾವು ಬೆಳೆದಂತೆಲ್ಲ ತಮ್ಮ ಮಿತಿಯನ್ನು ಗುರುತಿಸುವ ಎಲ್ಲ 'ಎ' ಸಂಗತಿಗಳನ್ನೂ ಸೆನ್ಸಾರ್ ಮಾಡಿಕೊಂಡು 'ಯು' (ಯುನಿವರ್ಸಲ್) ಸರ್ಟಿಫಿಕೇಟಿಗೆ ತಮ್ಮನ್ನು ಅದು ಹೇಗೋ ಹೊಂದಿಸಿಕೊಂಡು ಜನರೂ ಅದೇ ರೀತಿಯಲ್ಲಿ ಭಾವಿಸಬೇಕೆಂದು ಬಯಸುತ್ತಾರೆ.

೨೦೦೪ರಲ್ಲಿ ವೈದ್ಯರ magnum opus 'ಹಳ್ಳ ಬಂತು ಹಳ್ಳ' ಪ್ರಕಟವಾಯಿತು. (ಇದನ್ನು ಪ್ರಕಟಣಾಪೂರ್ವವಾಗಿ ಓದಿದ ಸೌಭಾಗ್ಯ ನನ್ನದು.) ಈ ಕೃತಿಯ ಕುರಿತು ಈಗಾಗಲೇ ಅನೇಕ ಲೇಖನಗಳು ಬಂದಿವೆ. ಆದರೂ ಅವರ ಪ್ರಶಸ್ತಿಯ ಬೆಳಕಿನಲ್ಲಿ ಅವರ ಬದುಕಿನ ಮುಸ್ಸಂಜೆಯ ಬೆಳಗಿನಲ್ಲಿ ಕೆಲವು ಸಂಗತಿಗಳನ್ನು ಹೇಳಲು ನನಗೆ ಸಂತೋಷವಿದೆ.

ವೈದ್ಯರು ಈ ಕೃತಿಯ ಬರೆಹದ ಇತಿಹಾಸವನ್ನು ಈಗಾಗಲೇ ಕೆಲವು ಪತ್ರಿಕಾ ಸಂದರ್ಶನಗಳಲ್ಲಿ ಹೇಳಿದ್ದಾರೆ. ಪ್ರಶಸ್ತಿ ಬಂದದ್ದರಿಂದ ಕೃತಿ ಮುಖ್ಯವಾಗುವವರಿಗೆ ನನ್ನ ಕಿವಿ ಮಾತು: ಈ ಕೃತಿ ಮುಖ್ಯ ಮತ್ತು ಉತ್ತಮವಾದ್ದರಿಂದ ಇದಕ್ಕೆ ಪ್ರಶಸ್ತಿ ಬಂದಿದೆ. ಈ ಎರಡೂ ಘಟನೆಗಳು ಒಂದೇ ಕೃತಿಯಲ್ಲಿ ಸಂಭವಿಸುವುದು ಸಾಮಾನ್ಯವೇನಲ್ಲ. ಅನೇಕ ವಿಮರ್ಶೆಗಳಲ್ಲಿ 'ಇದೂ ಅಲ್ಲ, ಅದೂ ಅಲ್ಲ' ಎಂಬ ಉಪನಿಷತ್ಕಾರರ 'ನೇತಿನೇತಿ' ದರ್ಶನ ಅನೇಕ ವಿಮಶೆಗಳ ಸೂತ್ರ. ನನ್ನ ಉದ್ದೇಶವಿರುವುದು ಈ ಕೃತಿಯ ಹೆಚ್ಚಳಗಳನ್ನು ಗುರುತಿಸುವುದು.

ಕೃತಿಯ ಆರಂಭದಲ್ಲಿ ವೈದ್ಯರು 'ಕಾಲೋ ನ ಯಾತೋ ವಯಮೇವ ಯಾತಾಃ' ಎಂಬ ಭರ್ತೃಹರಿಯ ವೈರಾಗ್ಯಶತಕದ ತೃಷ್ಣಾ ದೂಷಣೆಯ ೧೨ನೇ ಸುಭಾಷಿತದ ಒಂದು ಭಾಗವನ್ನು ಉಲ್ಲೇಖಿಸಿದ್ದಾರೆ. (ಇದರರ್ಥ: ಕಾಲವು ಮುನ್ನಡೆಯಲೇ ಇಲ್ಲ, ಅದರ ಬದಲು ನಾವೇ ಮುನ್ನಡೆದೆವು, ಅರ್ಥಾತ್ ಮರಣವನ್ನು ಸಮೀಪಿಸಿದೆವು.)

ಪೂರ್ಣ ಸುಭಾಷಿತ ಹೀಗಿದೆ:

ಭೋಗಾನ ಭುಕ್ತಾ ವಯಮೇವ ಭುಕ್ತಾ ಸ್ತಮೋ ನ ತಪ್ತಂ ವಯಭೇವ
ಕಾಲೋ ನ ಯಾತೋ ವಯಮೇವ ಯಾತಾ ತೃಷ್ಣಾ
ನ ಜೀರ್ಣಾ ವಯಮೇವ ಜೀರ್ಣಾಃ

(ಇದರ ತಾತ್ಪರ್ಯ: ನಾವು ವಿಷಯ ಸುಖಗಳನ್ನು ಅನುಭೋಗಿಸಲಿಲ್ಲ, ಆದರೂ ವಿಷಯವು ನಮ್ಮನ್ನು ಭೋಗಿಸಿತು. ಅರ್ಥಾತ್ ನಮ್ಮನ್ನು ಅಸಮರ್ಥರನ್ನಾಗಿಸಿತು. ನಾವು ಎಂದೂ ತಪವನ್ನು ಮಾಡಲಿಲ್ಲ. ಆದರೆ ತಪವೇ ನಮಗೆ ತಾಪವನ್ನಿತ್ತಿತು. ಕಾಲವು ಮುನ್ನಡಿಯಲೇ ಇಲ್ಲ. ಆದರ ಬದಲು ನಾವೇ ಮುನ್ನಡೆದೆವು. ಅರ್ಥಾತ್ ಮರಣವನ್ನು ಸಮೀಪಿಸಿದೆವು. ನಮ್ಮ ಹೃದಯದೊಳಗೆ ಹುದುಗಿದ ತೃಷ್ಣೆಯು ಜೀರ್ಣವಾಗಲಿಲ್ಲ. ಆದರ ಬದಲು ದಿನದಿನಕ್ಕೆ ನಾವೇ ಜೀರ್ಣವಾಗುತ್ತಾ ಹೊರಟೆವು.)

*ಎಂ.ಜೀವನ ಅವರ ಅನುವಾದ, ೧೯೬೦.

ಕಾಲವನ್ನು ಪರದೆಯಂತಿಟ್ಟು ದೃಶ್ಯಾವಳಿಗಳನ್ನು ಚಲಿಸಲು ಬಿಟ್ಟು ಒಂದು ವಿಸ್ಮಯವನ್ನು ಇಡೀ ಕೃತಿಯಲ್ಲಿ ತೋರಿಸಲಾಗಿದೆ. ವೈದ್ಯರ 'ಪೂರ್ವಾಗ್ರಹಗಳು' ಇಲ್ಲಿ ಕೆಲಸಮಾಡಲೇ ಇಲ್ಲ!

ಸುಮಾರು ತೊಂಬತ್ತು ವರ್ಷಗಳ ಅಂದರೆ ಸಿಪಾಯಿದಂಗೆಯೆಂದು ಕರೆಯಲ್ಪಡುತ್ತಿದ್ದ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ಕಾಲದಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಸಂದರ್ಭವನ್ನು ಕ್ಯಾನ್ವಾಸಾಗಿಟ್ಟುಕೊಂಡು ಸ್ಥಿತ್ಯಂತರದೆದುರು ಉತ್ತರ ಕರ್ನಾಟಕದ ಮಾಧ್ವ ಕುಟುಂಬವೊಂದರ ಸಾಮಾಜಿಕ ಜೀವನವು ಪಲ್ಲಟವಾಗುವ ವಿನ್ಯಾಸ ಇಲ್ಲಿದೆ. ಸತ್ಯಸಂಗತಿಯ ಎಳೆಯೊಂದರ ಆಧಾರದಲ್ಲೇ ತಾವು ಈ ಕಥಾನಕವನ್ನು ಹಿಗ್ಗಿಸಿದ್ದಾಗಿ ವೈದ್ಯರೇ ಹೇಳಿಕೊಂಡಿದ್ದಾರೆ.

'ಹಳ್ಳ ಬಂತು ಹಳ್ಳ' ಕೃತಿಯ ಶೀರ್ಷಿಕೆಯ ಪದಗಳು ಬರುವುದು ಕೊನೆಯ ಪುಟದಲ್ಲಿ. ಸನ್ನಿವೇಶ ಹೀಗಿದೆ: ರಜಬಿಲ್ಲಿ ಮೋಟರು ನವಲಗುಂದದ ಸರಹದ್ದನ್ನು ದಾಟುತ್ತಿದ್ದಂತೆಯೇ ಕೇಶವನ ಮಗ ಮಾಧವ 'ಈಗ ಬೆಣ್ಣೀಹಳ್ಳ ಬರತದ. ನಾವೆಲ್ಲ ಗಂಡಸರು ಇಳದು ನಡಕೋತ ಹೋಗಬೇಕಾಗತದ' ಎಂದು ತನ್ನ ಅಕ್ಕನಿಗೆ ಹೇಳುತ್ತಾನೆ. ಇಳಿಯುವುದು ಅಗತ್ಯವಿಲ್ಲವೆಂದೂ ಕಲ್ಲಿನ ಸೇತುವೆ ಮಾಡಿದ್ದಾರೆಂದು ಪಕ್ಕದಲ್ಲಿ ಕುಳಿತಿದ್ದವರ್‍ಯಾರೋ ಹೇಳಿದಾಗ ಅವರು ಇಳಿಯಬೇಕಾಗದೆ ಮೋಟರು ಸಲೀಸಾಗಿ ಓಡುತ್ತದೆ. ಪ್ರಯಾಣಕ್ಕೆ ಅಡ್ಡಿಯಾಗುವುದಿಲ್ಲ. 'ಕೆಳಗೆ ಬೆಣ್ಣಿಹಳ್ಳ ತನ್ನ ಪಾಡಿಗೆ ತಾನು ಶಾಂತವಾಗಿ ಹರಿಯುತ್ತಿತ್ತು' ಎಂಬ ಹಂಸಗೀತೆಯೊಂದಿಗೆ ಕೃತಿ ಮುಗಿಯುತ್ತದೆ.

ಮೊದಲು ಈ ಕೃತಿಗೆ ಹರಿವ ನೀರಿದು ಎಂದು ಹೆಸರಿಡುವುದೆಂದು ವೈದ್ಯರು ಅಂದುಕೊಂಡಿದ್ದರಂತೆ. ಆದರೆ ಅದೇ ಹೆಸರಿನ ಕವನ ಸಂಕಲನವೊಂದನ್ನು ಚಿತ್ತಾಲರು ಬರೆದಿದ್ದರು ಎಂಬ ಅಂಶದೊಂದಿಗೆ ಈ ಹೊಸ ಹೆಸರು ಪ್ರಾಪ್ತವಾಯಿತು. ಈಗಿರುವ ಶೀರ್ಷಿಕೆಯಲ್ಲಿ ಎರಡು ಆಕರ್ಷಕ ವಿಚಾರಗಳು ಗೋಚರಿಸುತ್ತವೆ: ಮೊದಲನೆಯದಾಗಿ, 'ಹಳ್ಳ ಬಂತು ಹಳ್ಳ' ಎಂಬ ಪದಪುಂಜವೇ ಚಲನಶೀಲವಾದದ್ದು; ಅಲ್ಲಿ ಘೋಷಣೆಯಿಲ್ಲ, ಇದಮಿತ್ಥಂ ಎಂಬ ನಿರ್ಣಯವಿಲ್ಲ, ಬದಲು ಒಂದು ಕೂಗಿದೆ, ಆರ್ತತೆಯಿದೆ, ಅಚ್ಚರಿಯೂ ಇದೆ. ಎರಡನೆಯದಾಗಿ ಆರಂಭದಲ್ಲಿ ಉಲ್ಲೇಖಿಸಿದ ಶ್ಲೋಕದ ಭಾವವನ್ನು ಈ ಪದಗಳು ಸರಿಯಾಗಿ ಹಿಡಿದಿಡುತ್ತವೆ: ನಿಜಕ್ಕೂ ಹಳ್ಳ ಬರುವುದೆಲ್ಲಿಗೆ? ಅದು ಬರುವುದೇ ಇಲ್ಲ. ನಾವೇ ಹಳ್ಳವಿರುವಲ್ಲಿಗೆ ಅಥವಾ ಅದನ್ನು ದಾಟಿ ಹೋಗಬೇಕಾಗಿದೆ; (ಕಾಲವು ಮುನ್ನಡೆಯಲೇ ಇಲ್ಲ; ಆದರ ಬದಲು ನಾವೇ ಮುನ್ನಡೆದೆವು ಎಂಬ ಘೋಷವಾಕ್ಯವನ್ನು ಗಮನಿಸಿ.) ನೀರಿಗೆ ಜೀವನ ಎಂಬರ್ಥವಿರುವುದನ್ನೂ ಇಡೀ ಕೃತಿಯನ್ನು ಒಂದು ಹರಿವಾಗಿ ಒರತೆಯಿಂದ ಸಾಗರದವರೆಗೆ ನೋಡುವ ದೃಷ್ಟಿಕೋನವಿದೆ. ಇದು ಬದುಕಿನ ಮೌಲ್ಯಮಾಪನ. ನದಿಗೆ ನೂರೆಂಟು ಕವಲುಗಳು, ವಿಭಜನೆಗಳು, ತಿರುವುಗಳು, ಭೋರ್ಗರೆತ ಮತ್ತು ಮಂದ ಸಂಚಲನ, ಉಧೋ ಮತ್ತು ಜುಳುಜುಳು, ಸಿಹಿ, ಕಲುಷಿತತೆ, ಕೊನೆಗೆ ಉಪ್ಪುರುಚಿ ಹೇಗೋ ಹಾಗೆಯೇ ಈ ಕಥೆಗೂ ಅವೆಲ್ಲ ಸೇರಿಕೊಂಡು ಒಂದು ಪರಂಪರೆಯ

ಕಥೆಯಾಗುತ್ತದೆ. ಕಮಲನಾಭ ಪಂತ ಕಮಲಾಚಾರ್ಯನಾಗುವುದು ಒಂದು ತಿರುವು. ಅವರ ಕುಟುಂಬ ಸಾಕಷ್ಟು ದೊಡ್ಡದಾಗಿ ಬೆಳೆಯುತ್ತದೆ ಮತ್ತು ಅವರ ಮಗ ವಾಸುದೇವಾಚಾರ್ಯರ ಕಾಲಕ್ಕೆ ಸಂಕೀರ್ಣವಾಗುತ್ತದೆ; ಸಾಮಾಜಿಕ ಬದಲಾವಣೆಗಳಿಗನುಗುಣವಾಗಿ ಬದಲಾಗುತ್ತದೆ. ಇವುಗಳ ನಡುವೆ ಕುಟುಂಬದ ಮತ್ತು ಆಶ್ರಿತರ ಬದುಕು ಸ್ವಂತವಾಗಿ ಒಂದೆಡೆ ರೂಪುಗೊಂಡರೆ ಒಟ್ಟಾಗಿ ಇನ್ನೊಂದೆಡೆ ರೂಪುಗೊಳ್ಳುತ್ತದೆ. ವೈಯಕ್ತಿಕ ಇತಿಹಾಸವೇ ಸಮೂಹದ ಇತಿಹಾಸವೂ ಆಗುವ ವಿಚಿತ್ರ ಪ್ರಕ್ರಿಯೆಯನ್ನು ಅಂಬಕ್ಕ, ಬೋಧರಾಯ, ಕೇಶವ, ರಾಮ ಮುಂತಾದವರ ಜೀವನದ ವಿಕಾಸದಲ್ಲಿ ಕಾಣಬಹುದು. ಇದು ವೈಸಾವರ್ಸಾ ಕೂಡ ಸತ್ಯವೆಂಬುದು ಸ್ವಾತಂತ್ರ್ಯ ಹೋರಾಟದಲ್ಲಿ ಕುಟುಂಬದವರು ಪಾಲ್ಗೊಂಡಾಗ ಇಡೀ ಕುಟುಂಬ ಪರಿಣಾಮಕ್ಕೊಳಗಾಗುವುದರ ಮೂಲಕ ಸೂಚಿಸಲಾಗಿದೆ. ವ್ಯಕ್ತಿಯ, ಇಲ್ಲವೇ ಕುಟುಂಬದ ಶ್ರದ್ಧಾಕೇಂದ್ರ ತನ್ನೊಳಗೆ, ಅಥವಾ ಕುಟುಂಬದೊಳಗೆ, ಅಥವಾ ಸಮಾಜದೊಳಗೆ, ಅಥವಾ ಇವೆಲ್ಲವನ್ನೂ ಮೀರಿದ ಕಾಲ-ದೇಶದ ಹಂಗಿನಲ್ಲಿ ರೂಪುಗೊಳ್ಳುತ್ತದೆಯೇ ಎಂಬ ಬಗ್ಗೆ ಲೇಖಕರು ನಿರ್ಣಯ ಕೊಡದಿರುವುದೇ ಈ ಕೃತಿಯ ಸೊಗಸೆಂದು ನನಗನ್ನಿಸಿದೆ. ಸೂಚನೆಗಳಿವೆ; ಅವು ವಾಚ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಈ ಕೃತಿಯಲ್ಲಿ ಮಹಾಕಾವ್ಯದ ಹರಿವಿದೆ. ಕೃತಿಯನ್ನು ಓದಿ ಮುಗಿಸುವಾಗ ಇತಿ ಅನ್ನಿಸಬಾರದು; ಮುಂದೇನು? ಎಂದು ಓದುಗನಿಗೆ ಅನ್ನಿಸಬೇಕು, ಅವನ ಅನ್ವೇಷಣೆ ಆರಂಭವಾಗಬೇಕು. ಮಹಾಭಾರತದ ಕೊನೆಯೂ ವ್ಯಾಸರ ವಿಷಾದವೂ (ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ/ ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ//) ಸೇರಿಕೊಂಡು ಹೊಸ ಇತಿಹಾಸದ ಆರಂಭದಂತಿದೆಯಲ್ಲವೇ?

ವೈದ್ಯರ ಕಾದಂಬರಿಯು ಈಗಾಗಲೇ ಒಳ್ಳೆಯ ಓದುಗಬಲವನ್ನೂ ಓದುಗರ ಒಲವನ್ನೂ ಸ್ಥಾಪಿಸಿಕೊಂಡಿದೆ. ಆದ್ದರಿಂದ ಕತೆಯನ್ನು ನಾನು ಇಲ್ಲಿ ವಿವರಿಸಿಲ್ಲ. ಮೇಲಾಗಿ ಅನೇಕ ಮೌಲಿಕ ಬರೆಹಗಳೂ ಪ್ರಕಟಗೊಂಡಿವೆ. ಆದ್ದರಿಂದ ಕೃತಿಯ ಆಶಯ, ಪಾತ್ರಪರಿಶೀಲನೆ ಇವೆಲ್ಲ ಚರ್ವಿತ ಚರ್ವಣವಾಗುವ ಭೀತಿ ನನಗಿದೆ. ಇಲ್ಲಿನ ಪಾತ್ರಗಳು ಸ್ವಯಂಪೂರ್ಣ ಮತ್ತು ಸ್ವಯಂವೇದ್ಯ. ಸ್ವತಹ ಮಾಧ್ವರಾಗಿರುವ ವೈದ್ಯರಿಗೆ ಇಲ್ಲಿರುವ ಕುಟುಂಬದ ಜೀವನವನ್ನು ಶಕ್ತಭಾಷೆ ಮತ್ತು ಶೈಲಿಯಲ್ಲಿ ಚಿತ್ರಿಸುವುದು ಕಷ್ಟವಾಗಿಲ್ಲ. ಅವರ ಸಂವೇದನೆ ಅದೇ ತಾನೇ? ಇದರಿಂದಾಗಿ ಅಂಬಕ್ಕ ಕೇವಲ ನವಲಗುಂದದಲ್ಲಿ ಓಡಾಡದೆ ನಮ್ಮ ನಿಮ್ಮ ನಡುವೆ ಓಡಾಡುತ್ತಾಳೆ. ವಾಸುದೇವಾಚಾರ್ಯರ ಪಾತ್ರ ಪ್ರಾಣೇಶಾಚಾರ್ಯರನ್ನೂ ಶ್ರೋತ್ರಿಯರನ್ನೂ ನೆನಪಿಸಿದರೆ ತಪ್ಪಲ್ಲ. ಪಾತ್ರಗಳು ಕತೆಯ ಚೌಕಟ್ಟನ್ನು ಮೀರಿ ಪ್ರಯಾಣಿಸುವುದಿಲ್ಲವಾದ್ದರಿಂದ ಎಲ್ಲವೂ ಒಂದು ಸಮಪಾಕ, ಸಮತೂಕಕ್ಕೆ ಒಪ್ಪಿಸಿಕೊಂಡಿವೆ. ಯಾರೊಬ್ಬರೂ ಸ್ವತಃ ಕತೆಯ ಕೇಂದ್ರವಲ್ಲ, ಪಾತ್ರಗಳೆಲ್ಲವೂ ಪೋಷಕವೇ.

ಕತೆಯ ಓಟದ ದೃಷ್ಟಿಯಿಂದ ಕಾಣುವ ಪುಟ್ಟ ದೋಷವೆಂದರೆ ಉಪ್ಪಿನ ಸತ್ಯಾಗ್ರಹದಿಂದ ಎರಡನೆಯ ಮಹಾಯುದ್ಧದ ವರೆಗೆ ಕಥೆ ಚುಟುಕಾಗಿ ಸಾಗಿದೆ. ಓದುಗನ ಮಹತ್ವಾಕಾಂಕ್ಷೆಯಿಂದಾಗಿ ಈ ಮಿತಿ ಗೋಚರಿಸುವುದೂ ಇರಬಹುದು.

ಪ್ರಾಯಶಃ ಹೀಗಿರಬಹುದು: ದೂರದ ಚುಕ್ಕಿ ಯಾವಾಗಲೂ ಚಿಕ್ಕದು. ನವಲಗುಂದದ ಪರಿಸರಕ್ಕೆ ನೇರ ಪರಿಣಾಮ ಬೀರಿದ ಸನಿಹದ ಘಟನೆಗಳು, ಬೆಳವಣಿಗೆಗಳು ಮಹತ್ತಾದ ಪರಿಣಾಮ ಬೀರುತ್ತವಾದ್ದರಿಂದ ಅವನ್ನು ಹೆಚ್ಚು ವಿವರವಾಗಿ ಮತ್ತು ಇತಿಹಾಸದ ಕೊಂಡಿಗಳಾಗಿ ಬರುವ ಇತರ ಸಂಗತಿಗಳನ್ನು ಸಂಕ್ಷೇಪವಾಗಿ ಹೇಳುವುದು ಲೇಖಕರ ಉದ್ದೇಶವಿರಬಹುದು.

ಕನ್ನಡದ ಸಾಹಿತ್ಯ ಸಂದರ್ಭದಲ್ಲಿ ಈ ಕೃತಿ ಮಹತ್ವದ್ದು. ಕೃತಿಕಾರನನ್ನು ಮೀರಿ ಕೃತಿ ಬೆಳೆಯುವದಕ್ಕೆ ವೈದ್ಯರಿಗೆ ಈ ಕೃತಿಗೆ ಸಿಕ್ಕ ಪ್ರಶಸ್ತಿಗಳೇ ಸಾಕ್ಷಿ. ವೈದ್ಯರನ್ನು ಮೀರಿ ಕನ್ನಡದಲ್ಲಿ ಸಾಹಿತ್ಯ ಕೃಷಿ ಕೆಲಸ ಮಾಡಿದ ಕೆಲವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿಲ್ಲವಲ್ಲಾ ಎಂಬ ಕೊರಗನ್ನೊಬ್ಬರು ತೋಡಿಕೊಂಡರು. ಅದಕ್ಕೇನು ಮಾಡಬೇಕು ಎಂದು ನಾನು ಕೇಳಿದೆ. ಅನಂತಮೂರ್ತಿಯವರಿಗಾಗಲೀ ವೈದೇಹಿಯವರಿಗಾಗಲೀ ಈ ಪ್ರಶಸ್ತಿ ಇನ್ನೂ ಸಿಕ್ಕಿಲ್ಲ. ಈ ಪ್ರಶಸ್ತಿ ಕೃತಿಕಾರರಿಗಲ್ಲ; ಕೃತಿಗೆ. ಮಗುವನ್ನು ಕೊಂಡಾಡುವಾಗ ತಾಯಿಗೆ ಸಹಜ ಸಂತಸ. ಅದು ಪ್ರಕೃತಿ. ಆ ಸಂತಸ ವೈದ್ಯರಿಗೆ.

‘ಹಳ್ಳ ಬಂತು ಹಳ್ಳ’ ಕಾದಂಬರಿಯ ನಂತರ ವೈದ್ಯರ ಕಥಾ ಸಂಕಲನ ’ಅಗ್ನಿಕಾರ್ಯ’ ಪ್ರಕಟವಾಗಿದೆ. ಅದರಲ್ಲಿ ‘ಹಣತೆಗಳು’ ಎಂಬ ನೀಳ್ಗತೆಯಲ್ಲಿ ನಿರೂಪಿತವಾದ ನೆನಪಿನ ಬತ್ತಿಗಳಿವೆ. ಅವು ನಿರೂಪಕನ ಮೂಲಕ ಉರಿಯುತ್ತವೆ. ಉಳಿದ ಕಥೆಗಳಲ್ಲಿ ಒಂದು ಹಳೆಯದು; ಇನ್ನೆರಡು ಕಥಾ ಸಂವಿಧಾನ ಇಲ್ಲವೇ ನಿರೂಪಣೆಗಳಲ್ಲಿ ಈ ಕಾದಂಬರಿಯ ಛಾಯೆಯಂತೆಯೋ ಮುಂದುವರಿಕೆಯಂತೆಯೋ ಅನ್ನಿಸಿದರೆ ಆಶ್ಚರ್ಯವಿಲ್ಲ. ವೈದ್ಯರಿಗೂ ಅವರ ಹಳ್ಳದಿಂದ ಹೊರಬರಲು ಕಷ್ಟವಾಗುತ್ತಿದೆಯೆಂದು ಈ ಹೊಸ ಕಥೆಗಳು ಹೇಳುತ್ತವೆ. ‘ಹೇಗಿದೆ?’ ಎಂದು ಅವರೇ ಕೇಳಿದಾಗ ನಾನು ‘ಚೆನ್ನಾಗಿವೆ’ ಎಂದಷ್ಟೇ ಹೇಳಿ ಸುಮ್ಮನಾಗಿದ್ದೇನೆ.

‘ಹಳ್ಳ ಬಂತು ಹಳ್ಳ’ಕ್ಕೆ ಸಿಕ್ಕ ಪ್ರಶಸ್ತಿಗಳು ವೈದ್ಯರಿಗೆ ಏಕಕಾಲಕ್ಕೆ ಅನುಕೂಲವನ್ನೂ ಅನನುಕೂಲವನ್ನೂ ತಂದಿವೆ. ಓದುಗರು ಅವರ ಕೃತಿಗಳಲ್ಲಿ ಏಕಾಏಕಿ ಸಿದ್ಧಾಂತಗಳನ್ನು ಅಸಂಗತಗಳನ್ನು, ದರ್ಶನಗಳನ್ನು ಕಾಣುತ್ತಾರೆ ಇಲ್ಲವೇ ಹುಡುಕುತ್ತಾರೆ. ಅವರ ಈಚೆಗಿನ ಕಥೆಗಳಲ್ಲೂ ಹೀಗೇ ಆಗಿದೆಯೆಂದು ನನ್ನ ಸಂಶಯ. ಸ್ವಲ್ಪ ಕಾಲ ಅವರು ಹಾಸ್ಯದ ಹೆಸರಿನಲ್ಲಿ ಕೆಸರಿನಲ್ಲಿ ಮತ್ತೆ ಆಟವಾಡಿದರೆ ಮತ್ತೊಂದು ತಿಳಿನೀರಿನ ಅಥವಾ ಹರಿವಿನ ಭರದ ಹಳ್ಳ ಸೃಷ್ಟಿಯಾಗುವುದು ಕಷ್ಟ; ಅಲ್ಲಿಂದ ಇನ್ನೊಂದು ಕಮಲ ಅರಳಿದರೆ ಸ್ವಾಗತ.

ವೈದ್ಯರು ಸುಖವಾಗಿದ್ದಾರೆ; ಸಂತೋಷವಾಗಿದ್ದಾರೆಂದು ಹೇಳಲಾರೆ. ಸಂತೋಷವೆನ್ನುವುದು subjective. ಹುಚ್ಚರಲ್ಲದೆ ನಗುವವರು ಬಹುಪಾಲು ಅಳುನುಂಗಿ ನಗುತ್ತಾರೆ. ನಗದೇ ಇರುವವರು ಸುಖದ ಅಹಂನಿಂದಲೇ ಗಂಭೀರವಾಗಿರುತ್ತಾರೆ. ಸುಖವೆನ್ನುವುದು ಎಲ್ಲ ಕಾಲದಲ್ಲೂ ಸಿಗುವ ತಾತ್ಕಾಲಿಕ ಸಂತೋಷ. ಅದು ಸಮಾಧಾನದಿಂದಲೇ ಬರಬೇಕೆಂದಿಲ್ಲ. ದೈಹಿಕ ಇಲ್ಲವೇ ಮಾನಸಿಕ ನೋವಿನಲ್ಲಿರುವವನೂ ಕಚಗುಳಿಯಿಟ್ಟರೆ ನಗುತ್ತಾನಲ್ಲವೇ, ಹಾಗೆ. ಅದನ್ನು ಶಾಶ್ವತವೆಂದು ಮತ್ತು ಸ್ಥಾಯೀಭಾವವೆಂದು ತಿಳಿಯುವುದು ಮುಠ್ಠಾಳತನವೆಂದು ನನ್ನ ತರ್ಕ.

ವೈದ್ಯರಿಂದ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ಸಿಕ್ಕಿದೆ. ನಿವೃತ್ತಿಯ ನಂತರ ಪ್ರವೃತ್ತಿಯ ಬೆನ್ನು ಹಿಡಿದ ವೈದ್ಯರು ಎಳೆಯರೂ ನಾಚುವಂತೆ ನಾಗಾಲೋಟ ಓಡಿ ಮೊದಲಿಗರಾಗಿ ಬಂದಿದ್ದಾರೆ. ನಮ್ಮಲ್ಲಿ ಮೀಸೆ ಮೂಡದವರೂ ಅಳುಮುಖ ಹಾಕಿ ಬದುಕೇ ಮುಗಿಯಿತು ಎಂಬ ಹಾಗೆ ಸಾಹಿತ್ಯದಲ್ಲಿ ಅತಿಮೀರಿದ ಗಾಂಭೀರ್ಯದಲ್ಲಿ ವರ್ತಿಸುವಾಗ ವೈದ್ಯರು ಅಂಥವರಿಗೆ ಮಾದರಿಯಾಗಿದ್ದಾರೆ. ವೈದ್ಯರು ಕಾಲಗತಿಯನ್ನು ಹಿಂದೆ ಸರಿಸಿ ಮುಸ್ಸಂಜೆಯಲ್ಲಿ ಸೂರ್ಯೋದಯವನ್ನು ಕಾಣಿಸಿದ್ದಾರೆ. ಈ ಬೆಳಕು, ಬೆಳಗು ಇನ್ನಷ್ಟು ಹೆಚ್ಚಲಿ.

ವಕೀಲರು, ಸಿರಿ, ಬ್ರಾಹ್ಮಿನ್ ವ್ಯಾಲಿ, ಮಡಿಕೇರಿ,
ಕೊಡಗು ಜಿಲ್ಲೆ – ೫೭೧ ೨೦೧, ಮೊಬೈಲ್: ೯೮೪೫೩ ೨೭೯೪೯



ಸಂಗಜ್ಜ ನನಗೂ ಅಜ್ಜ

ಛಾಯಾ ಭಗವತಿ

ನಾನು ಸಂಗಜ್ಜನವರನ್ನು ಮೊದಲು ನೋಡಿದ್ದು ಹಗರಿಬೊಮ್ಮನಹಳ್ಳಿಯಲ್ಲಿ. ಅಲ್ಲಿ ಕಕ್ಕಿಯ ಮನೆಯಲ್ಲಿ ಓದಲಿಕ್ಕೆಂದು ನನ್ನನ್ನು ಕರೆದುಕೊಂಡು ಹೋಗಿ ಬಿಟ್ಟಿದ್ದರು. ಹಾಗೆ ಹೊಸದಾಗಿ ಶಾಲೆಗೆ ಸೇರಿದ್ದ ನನ್ನನ್ನು ಅದೇ ಶಾಲೆಯಲ್ಲಿ ಓದುತ್ತಿದ್ದ ಸಂಗಜ್ಜನವರ ಮೊಮ್ಮಕ್ಕಳು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ ಅನ್ನುವುದಕ್ಕೋಸ್ಕರ ಅವರ ಅಳಿಯ ಶ್ರೀ ಉಮಾಪತಿಯವರ ಮನೆಗೆ ನನ್ನ ಕರ್ಕೊಂಡು ಹೋಗಿ ಮೊಮ್ಮಗ ಆನಂದಬಾಬು ಮತ್ತು ಮೊಮ್ಮಗಳು ವತ್ಸಲಳ ಪರಿಚಯ ಮಾಡಿಸಿಕೊಟ್ಟು ಬಂದಿದ್ದರು ಕಕ್ಕ. ವತ್ಸಲ, ನಾನು ನನ್ನ ಬಾಲ್ಯದಲ್ಲಿ ಕಂಡ ನನ್ನ ಅತ್ಯಂತ ಪ್ರೀತಿಯ ಗೆಳತಿಯಾಗಿದ್ದವಳು. ಒಮ್ಮೆ ಅವರ ಮನೆಗೆ ಸಂಗಜ್ಜ ಬಂದಿದ್ದರು. ಜರ್ಮನಿಗೊ, ಡೆನ್ಮಾರ್ಕಿಗೊ ಹೊಗಿದ್ದವರು ವಾಪಸಾಗುವಾಗ ಬೊಮ್ನಳ್ಳಿಯಲ್ಲಿ ಉಳಿದಿದ್ದರು. ಊಟಕ್ಕೆ, ನಿದ್ದೆಗೆ ಮಾತ್ರ ಮನೆಗೆ ಬಂದು ಮಿಕ್ಕೆಲ್ಲ ಸಮಯವನ್ನೂ ಅವರ ಮನೆಯಲ್ಲೇ ಹೆಚ್ಚು ಕಳೆಯುತ್ತಿದ್ದ ನನಗೆ ಉಮಾಪತಿಯಯರು ತೋರಿಸುತ್ತಿದ್ದ ಅಕ್ಕರೆ, ವಾತ್ಸಲ್ಯಗಳು ತುಂಬ ಇಷ್ಟವಾಗುತ್ತಿದ್ದವು. ನಮ್ಮ ಅಜ್ಜ ಬಾಳ ಫೇಮಸ್ಸು ಗೊತ್ತಾ? ಅಂತ ಒಮ್ಮೆ ಬಾಬುವೂ, ಮತ್ತೊಮ್ಮೆ ವತ್ಸಲಳೂ ಹೇಳಿ ಹೇಳಿ

ಅವರ ಬಗ್ಗೆ ನನಗೊಂದು ರೀತಿಯ ಭಯ ಮತ್ತು ಕುತೂಹಲಗಳು ಮನೆ ಮಾಡಿಕೊಂಡಿದ್ದವು. ಒಂದು ಭಾನುವಾರದಂದು ಅವರ ಮನೆಯಲ್ಲಿ ಆಟವಾಡಿಕೊಂಡಿದ್ದ ನನಗೆ ಅವರನ್ನು ಕಂಡು ಬಾಳ ಖುಶಿಯಾಗಿತ್ತು. ಆಗಿನ ನೆನಪು ಅಷ್ಟೇ ಇರುವುದು. ನಡುವೆ ಒಮ್ಮೊಮ್ಮೆ ಅವರು ಹೋಗಿ ಬಂದು ಮಾಡುತ್ತಿದ್ದರಾದರೂ, ಅವರ ಮೊಮ್ಮಕ್ಕಳೇ ಅವರ ಜೊತೆ ಬೆರೆಯಲು ಭಯ ಪಡುತ್ತಿದ್ದುದರಿಂದ ನನಗೂ ಹೆಚ್ಚೇನೂ ಧೈರ್ಯ ಬರುತ್ತಿರಲಿಲ್ಲ. ಆದರೆ ಅವರು ವಿದೇಶಗಳಿಗೋ, ಹೊರ ರಾಜ್ಯಗಳಿಗೋ ಜಾನಪದ ಕಲಾವಿದರನ್ನು ಕರೆದುಕೊಂಡು ಹೋಗಿ ಅಲ್ಲಿ ಅವರ ಪ್ರದರ್ಶನಗಳಿಗೆ ಅವಕಾಶ ಒದಗಿಸಿಕೊಡುತ್ತಿದ್ದ ನೆನಪು ಚೆನ್ನಾಗಿದೆ. ಹಳೇ ಹಗರಿಬೊಮ್ಮನಹಳ್ಳಿಯಲ್ಲಿ ಶ್ರೀ ಎಡ್ರಾಮನಳ್ಳಿ ಭರಮಜ್ಜರ ತೊಗಲು ಬೊಂಬೆಯಾಟದ ಪ್ರದರ್ಶನವಿತ್ತು. ಅದೇ ಮೊದಲು ನಾನು ತೊಗಲು ಗೊಂಬೆಯಾಟದ ಸೊಗಸು ಸವಿದದ್ದು. ನನ್ನ ಅಪ್ಪನೂ ಒಮ್ಮೆ ಅವರನ್ನ ದೂರದ ನಾರಾಯಣಪುರಕ್ಕೆ ಕರೆದುಕೊಂಡು ಹೋಗಿ ತೊಗಲು ಬೊಂಬೆಯಾಟ ಏರ್ಪಡಿಸಿ, ಆ ಸಂದರ್ಭದಲ್ಲಿ ಮಳೆ ಹಚ್ಚಿ ಹೊಡೆದು, ಬರಬೇಕಾದಷ್ಟು ಜನ ಬರದೇ ಪ್ರದರ್ಶನ ನೀರಸವಾಗಿದ್ದನ್ನು ಭಾಳಾ ಬೇಸರದಿಂದ ಹೇಳಿದ್ದು ಇನ್ನೂ ನೆನಪಿದೆ.

ಅವರನ್ನು ನಾನು ಮತ್ತೆ ನೋಡಿದ್ದು ೯೩ರಲ್ಲಿ, ಹಡಗಲಿಯ ಹತ್ತಿರದ ಮಾಗಳದಲ್ಲಿ. ವ್ಯಾಕರಣ ತೀರ್ಥ ಚಂದ್ರಶೇಖರ ತಾತನವರ ೧೦೦ನೆಯ ವರ್ಷದ ಸ್ಮರಣೆಗೆ ಬಳ್ಳಾರಿ ಜಿಲ್ಲೆಯ ಕವಿಗಳೆಲ್ಲರ ಪ್ರಾತಿನಿಧಿಕ ಕವನ ಸಂಕಲನವೊಂದು ತಯಾರಾಗಿ ಅದರ ಬಿಡುಗಡೆಯ ಸಮಾರಂಭಕ್ಕೆ ಅವರು ಬಂದಿದ್ದರು. ಒಂದೇ ವೇದಿಕೆಯಲ್ಲಿ ಅವರೊಡನೆ ಕುಳಿತಿದ್ದರೂ ನನಗೆ ಅವರ ಮುನಿ ಗಾಂಭೀರ್ಯ ಕಂಡು ವಿಪರೀತ ಹೆದರಿಕೆ ಆಗಿತ್ತು. ನಾನಾಗ ೧೦ನೆ ಕ್ಲಾಸಿನಲ್ಲಿ ಓದುತ್ತಿದ್ದೆ.

ಆಮೇಲಾಮೇಲೆ ನಾನು ಹೊಸ ಹಗರಿಬೊಮ್ಮನ ಹಳ್ಳಿಗೆ ಕಕ್ಕ ಬದಲಾಯಿಸಿದ ಮನೆಗೆ ಹೋಗಿಬಿಟ್ಟೆ. ನಾನಲ್ಲಿಗೆ ಹೋದರೂ, ವತ್ಸಲ ನನ್ನನ್ನು ಹುಡುಕಿಕೊಂಡು ಬರ್ತಿದ್ದು, ಪ್ರತೀ ವರ್ಷವೂ ಸಂಗಜ್ಜನವರ ತೀರಿ ಹೋಗಿದ್ದ ಮಗಳ ನೆನಪಿನ ತಿಥಿಯ ಪೂಜೆಗೆ ಬಂದು ಬಿಡದೇ ಕರೆದುಕೊಂಡು ಹೋಗುತ್ತಿದ್ದುದೂ, ಅಲ್ಲಿ ನಾವಿಬ್ಬರೂ ಕೈ ಕೈ ಹಿಡಿದೇ ಮಾತಾಡಿ, ಊಟ ಮಾಡಿ, ಸುದ್ದಿಗಳನ್ನು ಮಾತಾಡಿಕೊಂಡು, ಕಡೆಗೆ ನಾ ಮನೆಗೆ ವಾಪಸ್ಸಾಗುತ್ತಿದ್ದುದೂ, ನಾನು ಕಕ್ಕಿಯ ಮನೆಯಲ್ಲಿರುವತನಕ ಪ್ರತೀ ವರ್ಷ ನಡೆಯುತ್ತಿತ್ತು. ಈ ಇಂಥ ಗೆಳತಿ ಕಡೆಗೊಮ್ಮೆ ಟಿ.ಸಿ.ಹೆಚ್ ಮಾಡಲೆಂದು ಯಾವುದೋ ಕಾಲೇಜಿಗೆ ಸೇರಿದವಳು, ಮೊದಲನೇ ವರ್ಷದಲ್ಲೆ ಫೇಲಾಗಿಬಿಟ್ಟಳು. ಹಾಗೆ ಫೇಲಾಗಿದ್ದಕ್ಕೆ ಅಜ್ಜನ ಮರ್ಯಾದೆ ಹೋಗುವುದೆಂದು ಹೆದರಿದಳೋ, ಅಪ್ಪ ಅಮ್ಮನಿಗೆ ಭಯ ಪಟ್ಟಳೋ, ಕಡೆಗೆ ಏನು ಯೋಚನೆ ಮಾಡಿದಳೋ, ನಮ್ಮಿಬ್ಬರ ಗೆಳೆತನದ ಸವಿಯನ್ನೂ ಮರೆತು ಮಣ್ಣಾಗಿ ಹೋಗಿಬಿಟ್ಟಳು.

ಇದಾಗಿ ನಾನು ಓದು, ಅಧ್ಯಯನ ಅಂತೆಲ್ಲ ಮುಗಿಸಿ ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದು ಚಿತ್ರಕಲಾ ಪರಿಷತ್ತಿನಲ್ಲಿಯೂ, ಪಾಲಿಟೆಕ್ನಿಕ್ ಕಾಲೇಜೊಂದರಲ್ಲಿಯೂ ಅರೆಕಾಲಿಕ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತ ಹಾಸ್ಟೆಲಿನಲ್ಲಿದ್ದೆ. ಆವಾಗೊಮ್ಮೆ ಸಂಗಜ್ಜನವರ ಅಳಿಯ ಉಮಾಪತಿಯವರು ಅವರ ಮಗನನ್ನ ನೋಡಲು ಬೆಂಗಳೂರಿಗೆ ಬಂದಿದ್ದರು. ಅವರೊಡನೆ ಸಂಗಜ್ಜನವರ ಮಗ ಅಶೋಕಣ್ಣನವರೂ ಇದ್ದರು. ನನ್ನನ್ನೂ ಮಾತನಾಡಿಸಲು ಬಂದಿದ್ದ ಅವರು ಆಕಸ್ಮಾತ್ತಾಗಿ ಅವರು ಕಾಣಬೇಕಿದ್ದ ಹಿರಿಯರೊಬ್ಬರ ಮನೆಗೆ ನನ್ನನ್ನೂ ಒತ್ತಾಯಪೂರ್ವಕವಾಗಿ

ಕರೆದುಕೊಂಡು ಹೋದರು. ಆಗ ಪರಿಚಯವಾದವರೇ ಶ್ರೀ ಬೆಣ್ಣೆಹಳ್ಳೀ ಮಂಜುನಾಥಜ್ಜನವರು. ಅವರು ಸಂಗಜ್ಜನವರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದವರು, ಅವರ ಪರಮಾಪ್ತ ಗೆಳೆಯರು. ಹಾಗೆ ಪರಿಚಯವಾದ ಸಂಗಜ್ಜನವರ ಗೆಳೆಯ ಮಂಜಜ್ಜನವರು ನಮಗೆ ಅಜ್ಜನಿಲ್ಲದ ಕೊರತೆಯನ್ನು ಅವರ ವಾತ್ಸಲ್ಯದ ಮೂಲಕ ನೀಗಿದರು ಅನ್ನಬಹುದು. ಒಮ್ಮೆ ನಾನು ಹಾಸ್ಟೆಲ್ಲಿನಲ್ಲಿಯ ಊಟ ಉಂಡೂ ಉಂಡೂ, ಅನಾರೋಗ್ಯಪೀಡಿತಳಾಗಿದ್ದರಿಂದ, ಮಂಜಣ್ಣಜ್ಜ ನನ್ನನ್ನು ಹೆಚ್ಚಿನ ಆರೈಕೆಗೆಂದು ಅವರ ಮನೆಗೇ ನನ್ನ ವಾಸವನ್ನು ಸ್ಥಳಾಂತರಿಸಿಬಿಟ್ಟರು. ಅವರು ಮತ್ತು ಅವರ ಮಗ ಶ್ರೀ ಧನ್ಯಕುಮಾರರ ಋಣ ನಮ್ಮ ಮೇಲಿದೆ. ನಾನು ಮತ್ತು ಅಕ್ಕ ಸ್ವಲ್ಪ ಕಾಲದ ಮಟ್ಟಿಗೆ ಅವರ ಮನೆಯಲ್ಲಿಯೇ ಆಶ್ರಯ ಪಡೆಯಬೇಕಾಗಿ ಬಂತು. ಈ ಒಂದು ಕಾರಣದಿಂದ ನಾನು ಮತ್ತೆ ಸಂಗಜ್ಜನವರೊಡನೆ ಇರುವ, ಮಾತಾಡುವ, ಅವರ ನಲ್ನುಡಿಗಳನ್ನ ಕೇಳಿಸಿಕೊಳ್ಳುವ ಸದವಕಾಶವನ್ನು ಪಡೆದೆ ಅಂತಲೇ ಹೇಳಬಹುದು.

ಒಮ್ಮೆ ಸಂಗಜ್ಜ ಬೆಂಗಳೂರಿಗೆ ಬರುವವರಿದ್ದರು. ಅವತ್ತು ನನಗೂ, ಮಂಜಣ್ಣ ಅಜ್ಜನವರಿಗೂ ಬೆಳಗಿನಿಂದಲೇ ಉತ್ಸಾಹ ಪುಟಿದು ಪುಟಿದು ಬರುತ್ತಿತ್ತು. ಅಜ್ಜಾರು ಬಂದರೆ ಇಲ್ಲಿ ಕೂತು ಕೊಳ್ಳುತ್ತಾರೆ, ಜಿಡ್ಡು ಹೆಚ್ಚಿಲ್ಲದ ಊಟ ಉಣ್ಣುತ್ತಾರೆ, ಅವರು ಏನಾದರೂ ಓದುತ್ತಿದ್ದರೆ ಹೆಚ್ಚು ಮಾತಾಡಿಸಬಾರದು, ಅವರಿಗೆ ಈ ಈ ಕೆಸೆಟ್ಟುಗಳನ್ನು ಕೇಳಿಸಬೇಕು, ಅವರು ನೆಮ್ಮದಿಯಿಂದ ಮಲಗಿರುವಾಗ ಮನೆಯಲ್ಲಿ ಹೆಚ್ಚು ಗಲಾಟೆ ಬೇಡ...ಹೀಗೆ ಹತ್ತು ಹಲವು ಪ್ಲಾನುಗಳಲ್ಲಿ ಮಧ್ಯಾಹ್ನದ ಇಂಟರ್ ಸಿಟಿ ರೈಲು ಬರುವ ಸಮಯ ಬಂದೇ ಬಿಟ್ಟಿತು. ಅವತ್ತು ನಾನು ಕಾಲೇಜಿನ ಪಾಠವನ್ನು ಮುಗಿಸಿ ಬೇಗನೆ ಮನೆ ಸೇರಿಕೊಂಡಿದ್ದೆ, ನಾನು, ಮಂಜಣ್ಣ ಅಜ್ಜಾರು, ಅವರ ಮಗನ ಜೊತೆ ಕಾರಿನಲ್ಲಿ ಹೊರಟು, ರೈಲು ನಿಲ್ದಾಣದಲ್ಲಿ ನಿಂತು ಕಾಯತೊಡಗಿದರೆ, ರೈಲು ಬಂದೇ ಬಂತು, ನೀಳ ಕಾಯದ, ಬಿಳಿಯ ಕುರುಚಲು ಗಡ್ಡದ, ಬಗಲ ಚೀಲದ ಜೊತೆ ಕೈಲೊಂದು ಕೋಲು ಹಿಡಿದಿದ್ದ ಸಂಗಜ್ಜನವರನ್ನು ಕೂರಿಸಿಕೊಂಡು. ಜೊತೆಗೆ ಅವರ ಲಗೇಜು ಹಿಡಿದು ನಿಂತಿದ್ದ ಅವರ ಹಲವು ಪ್ರಯಾಣಗಳ ಜೊತೆಗಾರ, ಅವರ ಮೊಮ್ಮಗ. ನನ್ನ ಎದೆ ಬಡಿತ ಜೋರಾಗುತ್ತಿತ್ತು. ಅವರಿಗೆ ಬಾಗಿ ನಮಸ್ಕರಿಸಿ ತಲೆಯೆತ್ತಿ ನೋಡಿದರೆ, ಮುಖದ ಮೇಲೊಂದು ಅಗಲವಾದ ತುಂಬು ನಗು. ಬಲಗೈ ಹಣೆಗಿಟ್ಟು, ತುಸು ಬಾಗಿ, ಮೊದಲನೇ ಮಾತು ಅವರಾಡಿದ್ದು ''ಆದಾಬ್ ರೀ ಮೇಡಮ್ಮರೇ''. ನನಗೆ ಯಾಕೋ ಭಾಳಾ ನಾಚಿಕೆಯಾಗಿ ಮುಗುಳ್ನಕ್ಕು ''ಆರಾಮದೀರೀ ಅಜ್ಜಾರೇ'' ಅಂತ ಕೇಳಿದ್ದೊಂದೇ ನೆನಪು. ಆಮೇಲಾಮೇಲೆ ಅವರು ನನ್ನ ಯಾವಾಗ ನೋಡಿದರೂ ಹಂಗೇ ಮಾತಾಡಿಸುತ್ತಿದ್ದರು. ಕಾರಣ ಇವತ್ತಿಗೂ ನನಗೆ ಗೊತ್ತಿಲ್ಲ.

ಅವರು ಬಂದದ್ದು ಆ ತಿಂಗಳ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮ ನಡೆಸಿಕೊಡಲು. ಅವತ್ತು ಸಂಗಜ್ಜ ತುಂಬ ಸೊಗಸಾಗಿ, ಮನಸ್ಸು ಬಿಚ್ಚಿ ಮಾತಾಡಿದ್ದರು. ತಾವು ಮದನಪಲ್ಲಿಯಲ್ಲಿ ಓದಿದ್ದು ಹಾಗೆ ಓದುವಾಗ ಜಿಡ್ಡು ಕೃಷ್ಣಮೂರ್ತಿಯವರ ಪ್ರಭಾವಕ್ಕೆ ಒಳಗಾದ್ದು, ಚಿಗಟೇರಿಗೆ ವಾಪಸಾದ ಮೇಲೆ ೬೦-೭೦ರ ದಶಕದಲ್ಲಿ ಚುನಾವಣೆ ಎದುರಿಸಿ ಸೋಲನುಭವಿಸಿದ್ದು ಮತ್ತಾಕಡೆ ತಲೆ ಹಾಕದೇ ಸುಮ್ಮನೆ ತಮ್ಮ ತಂಬಾಕು ಕೃಷಿ, ಜೊತೆಗೆ ಸಾಹಿತ್ಯ ಕೃಷಿಯನ್ನು ಮುಂದುವರೆಸಿದ್ದು...ಹೀಗೆ ನಿರ್ಭೀಡೆಯಿಂದ ಇರುವುದನ್ನ ಇದ್ದ ಹಾಗೆ ಹೇಳಿದ್ದರು ಸಂಗಜ್ಜ.

ಅವರೊಂದಿಗೆ ಮಾತಿಗೆ ಕೂತರೆ ಒಂದು ಸೊಲ್ಲೂ ಆಡದೇ ಸುಮ್ಮನೆ ಕಿವಿಯಾಗಿರಬೇಕು

ಅನಿಸುವಷ್ಟು ಆಪ್ತವಾಗಿ ಸಂಗಜ್ಜ ಮಾತಾಡುತ್ತಿದ್ದರು. ಯಾರನ್ನಾದರೂ ಅವರು ಟೀಕಿಸಿ ಮಾತಾಡಿದವರಲ್ಲ. ಏನೇ ವಿಷಯ ಚರ್ಚೆಯಾದರೂ, ''ಹೌದೇನ್ರೀ, ಹಂಗೇನ್ರೀ, ಅದು ನನಿಗೆ ಗೊತ್ತಿಲ್ಲ ಬಿಡ್ರೀ'' ಅಂದು ತಮಗೆ ತಿಳಿಯದ ವಿಚಾರವನ್ನು ಸೌಜನ್ಯದಿಂದಲೇ ಪ್ರಕಟಪಡಿಸುತ್ತಿದ್ದರು. ಅವರ ಆ ಭೇಟಿಯಲ್ಲಿ, ಅವರ ಕಿರಿಯ ಸ್ನೇಹಿತರೊಬ್ಬರು ಮಂಜಣ್ಣಜ್ಜನವರ ಮನೆಗೆ ಬಂದು ಅವರಿಬ್ಬರನ್ನೂ ಒತ್ತಾಯಪೂರ್ವಕವಾಗಿ ಅವರ ಮನೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಅವರ ಮನೆಯ ಮೇಲ್ಮಾಳಿಗೆಯನ್ನು, ಅವರ ಬಲವಂತಕ್ಕೆ ಕಷ್ಟಪಟ್ಟು ಏರಿದ್ದ ಸಂಗಜ್ಜ ಮನೆಗೆ ವಾಪಸಾದವರೇ ವಿಪರೀತ ಎದೆ ನೋವಿನಿಂದ ಹಾಸಿಗೆ ಹಿಡಿದು ಬಿಟ್ಟಿದ್ದರು. ಅವಾಗೆಲ್ಲ ತಿಳಿಗಂಜಿ, ರಾಗಿ ಅಂಬಲಿ, ಸೂಪು ಮತ್ತೊಂದು ಮಗದೊಂದು ಮಾಡಿಕೊಡುತ್ತ, ಹೊತ್ತು ಹೊತ್ತಿಗೆ ಗುಳಿಗೆ ನುಂಗಿಸುತ್ತ ಅವರನ್ನು ಮಗುವಿನಂತೆ ಜೋಪಾನ ಮಾಡುವ ಪುಣ್ಯ ನನ್ನದಾಗಿತ್ತು. ಏನವ್ವಾ ನಮ್ಮವ್ವಾ, ಹಡದವ್ವಾ ಅನ್ನುತ್ತ ನನ್ನ ಕೆಲಸವನ್ನು ಅವರು ಒಪ್ಪಿಸಿಕೊಳ್ಳುತ್ತಿದ್ದುದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಆದರೂ ಒಮ್ಮೆ ನಾನು ಧಾರಾಳವಾಗಿ ತುಪ್ಪ ಹಾಕಿ ಮಾಡಿದ ಪೊಂಗಲು ತಿಂದು ಅವರ ಆರೋಗ್ಯ ಮತ್ತಷ್ಟು ಅಸ್ತವ್ಯಸ್ತವಾಗಿ, ನಾನು ತುಂಬ ಪೇಚಾಡಿಬಿಟ್ಟಿದ್ದೆ. ''ಇದೇನವಾ ನಮ್ಮವ್ವಾ, ಬೆಂಗಳೂರಿನೋರು ಇಂಥಾ ಪದಾರ್ಥಾನಾ ದಿನಾವಂದಕ್ಕೂ ತಿಂದು ಅದ್ ಹೆಂಗ್ ಜೀರ್ಣಸ್ಕೆಂತಾರವಾ'' ಅಂದು ನಕ್ಕಿದ್ದರು.

ಅಂಥ ಅನಾರೋಗ್ಯದಲ್ಲೂ ಅವರು ಸುಮ್ಮನೆ ಕೂತವರಲ್ಲ. ಮಂಜಣ್ಣರೇ ಹಂಗಾತು, ಮಂಜಣ್ಣರೆ ಹಿಂಗಾತು, ನಮ್ಮ ವೈದೇಹಿ ಬಾಳಾ ಒಳ್ಳೇ ಹೆಣ್ಣು ಮಗಳು, ಅಷ್ಟೇ ಛಂದ ಬರೀತಾಳ ಅಂತಲೂ ಅಥವಾ ಒಮ್ಮೆ ಕಾರಂತರ ಊರಿಗೆ ಹೋಗಿದ್ದಾಗ ಬ್ಯಾಸಿಗೀ ಅಂತಾ ಒಬ್ಬ ಮನಿಷಾ ತಲೀ ಮ್ಯಾಲ ಸಣ್ಣ ಫ್ಯಾನಿನಂಥಾದ್ದನ್ನ ಕಟಗೊಂಡಿದ್ದ ನೋಡ್ರೀ ಅಂತಲೋ, ನಮ್ಮ ಅಮರೇಶ ನುಗಡೋಣಿಯವರ ಶ್ರೀಮತಿಯವರು ಬಾಳಾ ಛಂದ ಹಿಂದುಸ್ತಾನೀ ಸಂಗೀತ ಹಾಡ್ತಾರ್ರೀ ಅಂತಲೋ ಹಿಂಗೆ ಅದೇಸೋ ಘಟನೆಗಳ ರಸಗವಳವನ್ನ ಸದಾ ಉಣಬಡಿಸುತ್ತಲೇ ಇರುತ್ತಿದ್ದರು. ನಾವು ಸಂಭ್ರಮದಿಂದ ಜಗಜೀತ್ ಸಿಂಗರ ಗಜಲುಗಳನ್ನು ಕೇಳಿಸುತ್ತಿದ್ದರೆ, ಅವರಿಂದ ಮದಿರೆ, ಸಾಕಿಗಳ ಬಗ್ಗೆ ರಸವತ್ತಾದ ಹಲವು ಸಂಗತಿಗಳನ್ನು ಆಸ್ವಾದಿಸುವ ಸೊಗಸು ನಮ್ಮದಾಗಿರುತ್ತಿತ್ತು. ಶಾಂತರಸರು, ಅವರ ಮಗಳು ಮುಕ್ತಾಯಕ್ಕ, ಕಾರಂತರು, ಹೀಗೆ ಯಾರನ್ನೆಲ್ಲ ಸಂಗಜ್ಜ ನೆನಪಿಸಿಕೊಳ್ಳುತ್ತಿದ್ದರು. ಯಾನ್ನಿಯ 'ಅಕ್ರೋಪಾಲಿಸ್' ಸಂಗೀತ ಅವರಿಗೆ ತುಂಬಾ ಹಿಡಿಸಿತ್ತು. ಹಿಂದುಸ್ತಾನೀ ಸಂಗೀತದಲ್ಲಿ ಅವರಿಗಿದ್ದ ಆಸಕ್ತಿ, ಅಭಿರುಚಿಗಳು ನನ್ನನ್ನು ತುಂಬ ಬೆರಗುಗೊಳಿಸಿದ ಸಂಗತಿಗಳು. ಕಿಶೋರಿ ಅಮೋಣ್ಕರ್, ಕುಮಾರ ಗಂಧರ್ವ, ಪಂಡಿತ್ ಜಸ್‌ರಾಜ್ ಹೀಗೆ ಹಲವಾರು ಸಂಗೀತ ದಿಗ್ಗಜರ ನೂರೆಂಟು ಧ್ವನಿ ಸುರುಳಿಗಳ ಪ್ರತಿ ಮಾಡಿಸಿ ಮಾಡಿಸಿ ಸಂಗೀತದ ಹುಚ್ಚು ಇದ್ದವರಿಗೆಲ್ಲ ಪ್ರೀತಿಯಿಂದ ಹಂಚುತ್ತಿದ್ದರು. ಚಿಗಟೇರಿಯ ಅವರ ಮನೆಯಂಗಳ ಇಂಥ ಅದೆಷ್ಟು ಕಛೇರಿಗಳಿಗೆ ಸಾಕ್ಷಿಯಾಗಿದೆಯೋ! ನಾನು ಸಂಗೀತ ಕಲಿತಿರದಿದ್ದರೂ, ಕಲಿತಷ್ಟೇ ಹಾಡುಗಳನ್ನ ನನ್ನಿಂದ ಹಾಡಿಸಿ ಖುಷಿ ಪಡುತ್ತಿದ್ದರು.

ಬುದ್ಧನೆಂದರೆ ಸಾಕು ಸಂಗಜ್ಜನವರ ಕಣ್ಣುಗಳು ಅರಳಿಬಿಡುತ್ತಿದ್ದವು. ಅವರು ನನ್ನ ಕಣ್ಣಿಗೆ ಸದಾ ನಡೆದಾಡುವ ಬುದ್ಧನಂತೆಯೇ ಕಾಣುತ್ತಿದ್ದರೆ, ಅದಕ್ಕೆ ಕಾರಣ ಅವರಿಗೆ ಬುದ್ಧನ ಬಗೆಗಿದ್ದ ಮಮಕಾರ, ಅಪಾರ ಆಸಕ್ತಿ. ಕಡೆ ಕಡೆಗೆ ಬುದ್ಧನ ಮೇಲೆ ಅವರೊಂದು ನಾಟಕ

ರಚಿಸುವಾಗಲಂತೂ ಬುದ್ಧನನ್ನು ಪರಕಾಯ ಪ್ರವೇಶ ಮಾಡಿದ್ದಾರೇನೋ ಅನಿಸುವಷ್ಟರ ಮಟ್ಟಿಗೆ ಅದರ ರಚನೆಯಲ್ಲಿ ಅವರು ತೊಡಗಿಕೊಂಡಿದ್ದರು.

ಅದಾದ ಮೇಲೆ ಅವರು ಬೆಂಗಳೂರಿಗೆ ಮತ್ತೊಮ್ಮೆ ಬಂದದ್ದು ಕೋಲಾರದಲ್ಲಿ ನಡೆಯಲಿದ್ದ ಸಮಾರಂಭವೊಂದರಲ್ಲಿ ಬಾಗವಹಿಸಲು. ಆ ವರ್ಷ ಅವರಿಗೆ ಶ್ರೀ ಎಲ್. ಬಸವರಾಜು ಪ್ರಶಸ್ತಿ ಬಂದಿತ್ತು. ಆ ಕಾರ್ಯಕ್ರಮಕ್ಕೆ ನಾವೆಲ್ಲ ಜೊತೆಯಾಗಿ ಹೋಗಿದ್ದೆವು. ಕೋಲಾರದ ಅವರ ಸಾಹಿತಿ ಮಿತ್ರರ ಬಳಗ ನಮ್ಮನ್ನೆಲ್ಲ ಉಪಚರಿಸಿದ ಬಗೆ ಅನನ್ಯವಾದುದು.

ಸಂಗಜ್ಜನವರನ್ನು ಬೆರಗುಗೊಳಿಸದ ಸಂಗತಿಗಳನ್ನು ಹುಡುಕುವುದೇ ಕಷ್ಟ ಅನಿಸುವ ಹಾಗೆ ಒಂದೊಂದು ಪುಟಾಣಿ ವಿಚಾರವೂ ಅವರನ್ನು ವಿಸ್ಮಯಗೊಳಿಸುತ್ತಿತ್ತು. ಯಾವುದೇ ಪತ್ರಿಕೆಯ ಒಂದು ಫೋಟೋ, ಒಂದು ಪುಟ್ಟ ಲೇಖನ, ಅವರ ಮಗುವಿನ ಅಚ್ಚರಿಗೆ ಕಾರಣವಾಗಿರುತ್ತಿತ್ತು. ''ಏ ಬಾಳಾ ಛಂದ ಬರದಾನ್ರೀ/ಳ್ರೀ, ನೀವೊಮ್ಮೆ ಓದೇ ತೀರಬೇಕ್ರೀ'' ಅಂತ ಹೇಳುತ್ತಿದ್ದರು. ಅವರಿಗೆ ಗೊತ್ತಿರದ ವಿಷಯಗಳೇ ಇಲ್ಲವೇನೋ ಅನಿಸುವ ಹಾಗೆ ಅವರ ಮಾತಿನ ಓಘ, ವಿಷಯದ ಹರವು ಕಾಣುತ್ತಿದ್ದವು. ಮಹಾರಾಷ್ಟ್ರದ ಯಾವುದೋ ಒಂದು ಊರಿಗೆ ಹೋದಾಗ ಅಲ್ಲಿಯ ತುಂಬ ವಿದ್ಯಾವಂತ, ಸುಸಂಸ್ಕೃತ, ಸನ್ನಡತೆಯ ಆದರೆ ನೋಡಿದವರು ಹೆದರಿ ಮೂರ್ಛೆ ಹೋಗಬಹುದಾದಷ್ಟು ಕುರೂಪಿಯಾಗಿದ್ದ ಯುವಕನೊಬ್ಬ ಇವರ ಬಳಿ ಬಂದು ತನಗೆ ಹೇಗಾದರೂ ಮಾಡಿ ಒಂದು ಹೆಣ್ಣು ಹುಡುಕುವಂತೆ ವಿನಂತಿಸಿಕೊಂಡದ್ದನ್ನು ನೆನಪಿಸಿಕೊಳ್ಳುತ್ತಿದ್ದರು. ''ಕಡೀಗೂ ಒಬ್ಬಾಕಿ ಹೆಣುಮಗಳು ಆತನ್ನ ಮದಿವಿ ಮಾಡಿಕೆಂತೀನಿ ಅಂತ ಮುಂದ ಬಂದ್ಲಂತರೀ, ಆದರ ಮತ್ಯಾರು ಅಕೀಗೆ ಏನು ಹೇಳಿದರೋ ಏನೋ, ಆತನ್ನ ಮದಿವ್ಯಾದ ಮ್ಯಾಲ ಹುಟ್ಟೋ ಹುಡುಗ ಹೆಂಗ ಹುಟ್ಟಿದ್ರೂ ಸೈಯೇ ಸಯ್ಯಿ, ಆದರ ಒಂದು ಹೆಣ್ಣು ಅವನ್ಹಂಗ ಹುಟ್ಟಿದ್ರ ತನ್ನ ಜವಾಬ್ದಾರಿ ಭಾಳಾ ಅದೀತಲ್ಲ ಅಂತ ಹೆದರಿ, ವಲ್ಲೆ ಅಂದುಬಿಟ್ಟಳಂತ ನೋಡ್ರೀ'' ಅಂದು ಮರುಕ ಪಟ್ಟಿದ್ದರು ಸಂಗಜ್ಜ ''ಆದರ ಮಂಜಣ್ಣರೆ, ಆ ಕುರೂಪಿ ಕಂಠದ ಗೊಗ್ಗರು ದನೀ ವಳಗ ಅದೆಂಥಾ ಸೊಗಸಾದ ಮರಾಠೀ ಬಾಷಾ ಉಕ್ಕುತಿತ್ತು ಅಂತೀರಿ, ವ್ಹಾ ವ್ಹಾ'' ಅಂದಿದ್ದರು. ಅವರಿಗೆ ಬರದ ಬಾಷೆಯೇ ಇರಲಿಲ್ಲವೇನೋ?

ಅವರ ಆ ಭೇಟಿಯ ಸಮಯದಲ್ಲೇ ನಾವೆಲ್ಲ ಸೇರಿ ಮಾಗಡಿಗೆ ಶ್ರೀ ರಾಮಚಂದ್ರಪ್ಪನವರ ಮನೆಗೂ ಹೋಗಿ ಬಂದಿದ್ದೆವು. ಅವರಿಲ್ಲಿ ಇದ್ದಾಗ ಶ್ರೀನಿವಾಸರಾಜು ಮೇಷ್ಟ್ರು, ಸರಸ್ವತಿ ಅಮ್ಮ, ಓ.ಎಲ್.ಎನ್. ಸರ್, ಬಸವರಾಜ ಪುರಾಣಿಕರು, ಹೊಸಪೇಟೆಯ ಬೆಲ್ಲದ ಚನ್ನಬಸಪ್ಪನವರ ಮೊಮ್ಮಗ ಶ್ರೀ ಅರಳಿ ನಾಗರಾಜ ಹೀಗೆ ಹಲವರು ಅಜ್ಜನವರನ್ನು ಕಾಣಲು ಬಂದ ನೆನಪು ನಿಚ್ಚಳವಾಗಿದೆ. ನಾನು ಆ ಮೊದಲು ಕೆಲಸ ಮಾಡುತ್ತಿದ್ದ ಸಾಫ್ಟ್‌ವೇರ್ ಕಂಪನಿಯ ನಮ್ಮ ಬಾಸ್, ನನ್ನ ಹಿರಿಯಣ್ಣನಂಥ ಶ್ರೀಧರ್ ಸರ್ ಕೂಡ ಸಂಗಜ್ಜ ನವರ ಹಲವಾರು ಮಾತಿನ ಕೂಟಗಳಲ್ಲಿ ಭಾಗಿಯಾಗಿದ್ದವರು. ಅವರಿಂದ ನಾನು ಕಡ ಪಡೆದಿದ್ದ ಕ್ಯಾಮೆರಾ ಸಂಗಜ್ಜನವರ ಹಲವಾರು ವಿಶೇಷ ಭಂಗಿಗಳನ್ನು ಸೆರೆಹಿಡಿದು ಕೃತಾರ್ಥವಾಗಿತ್ತು.

ಮುಂದೆ ನಾನು ಅಕ್ಕ ಬೇರೆ ಮನೆ ಮಾಡಿಕೊಂಡೆವು. ಒಮ್ಮೆ ಮಾತ್ರ ಮಂಜಣ್ಣಜ್ಜನವರ ಜೊತೆಗೆ ಸುಮ್ಮನೆ ಚಿಗಟೇರಿಗೆ ಹೋಗಿದ್ದೆ. ಒಂದಿಡೀ ದಿನ ಅವರೊಡನೆ ಕಳೆದು, ಅವರು ಕೊಟ್ಟ ಪುಸ್ತಕಗಳ ಕಾಣಿಕೆ ಪಡೆದು ಮರಳಿದ್ದೆ. ೨೦೦೫ರಲ್ಲಿ ನನ್ನ ಮದುವೆಯಾಗಿ, ಅವರಿಗೆ

ಬರಲಿಕ್ಕಾಗದೇ ಪ್ರೀತಿಯ ಹಾರೈಕೆಗಳು ತುಂಬಿದ್ದ ಪತ್ರವನ್ನೂ, ಜೊತೆಗೆ ಅವರ ಪುಸ್ತಕಗಳನ್ನೂ ಉಡುಗೊರೆಯಾಗಿ ಕಳಿಸಿಕೊಟ್ಟಿದ್ದರು. ಅವರ ನಲ್ನುಡಿಗಳ ಕೈ ಬರಹದ ಪತ್ರ ನನ್ನಲ್ಲೊಂದು ನೆನಪಾಗಿ ಉಳಿದಿದೆ. ಆ ವರ್ಷದ ನಮ್ಮ ಮೊದಲ ದೀಪಾವಳಿಯ ಎರಡನೇ ದಿನ ನಾನು ಮತ್ತು ಇವರು, ಚಿಗಟೇರಿಗೆ ಹೋಗಿದ್ದೆವು. ನಮ್ಮಿಬ್ಬರನ್ನು ಕಂಡು ಮನಸಾರ ಹರ್ಷಿಸಿದ್ದ ಸಂಗಜ್ಜನವರು, ''ಆದಾಬ್ ರೀ ಮೇಡಮ್ಮರೆ, ಎಂಥಾ ಅನುರೂಪ ಜೋಡಿ ಐತಿ ನೋಡ್ರೀ ನಿಮ್ದು'' ಅಂದು ಹೃದಯಪೂರ್ವಕವಾಗಿ ಹರಸಿ, ಉಪಚರಿಸಿ ಕಳಿಸಿಕೊಟ್ಟಿದ್ದರು. ನಂತರದ ವರ್ಷ ಅವರ ಮೊಮ್ಮಗನ ಮದುವೆಗೆ ನನ್ನ ಪುಟ್ಟ ನಿಜಗುಣನನ್ನೆತ್ತಿಕೊಂಡು ಹೋಗಿದ್ದೆ. ಆವಾಗಾಗಲೇ ಸಂಗಜ್ಜ ದಣಿದಿದ್ದರು. ಅವರಿಗೆ ನಮಿಸಿ, ನನ್ನ ಮಗನ ಹೆಸರು ಹೇಳಿದಾಗ, ತುಂಬ ಸಂತೋಷಿಸಿ, ಮಗುವಿನ ತಲೆಮೇಲೆ ಕೈಯಿಟ್ಟು ಹರಸಿದ್ದೇ ಕೊನೆ. ಮತ್ತೆ ನಾನವರನ್ನ ನೋಡಲಾಗಲೇ ಇಲ್ಲ. ನಡುವೆ ಒಂದೆರಡು ಸಲ ಫೋನಿನಲ್ಲಿ ಮಾತಾಡಿದಾಗ ಅವರ ದನಿ ನಡುಗುತ್ತಿತ್ತು. ಮನಸ್ಸು ಚುರುಕಾಗಿದ್ದರೂ, ಮೈ ದಣಿದಿತ್ತು. ಆಮೇಲಾಮೇಲೆ ನಾನು ನನ್ನ ಎರಡನೇ ಮಗುವಿನ ನಿರೀಕ್ಷೆಯಲ್ಲಿ ಅವರೂರಿಗೆ ಹೋಗಲಾಗಲೇ ಇಲ್ಲ. ಇಲ್ಲವಾದಲ್ಲಿ ನನ್ನ ಎರಡನೆಯ ಪುಟಾಣಿಗೆ ನಾವು 'ಸಿದ್ಧಾರ್ಥ' ಅಂತ ಕರೆಯುವುದ ಕಂಡು ಆ ಹಿರಿಯ ಜೀವ ಅದೆಷ್ಟು ಹಿಗ್ಗುತ್ತಿತ್ತೋ ಅಂತ ನೆನೆದರೆ ಕಣ್ಣಾಲಿಗಳು ತುಂಬಿಕೊಳ್ಳುತ್ತವೆ.

ಇಲ್ಲಿ, ಬೆಂಗಳೂರಿನಲ್ಲಿ ಅವರೊಡನೆ ನಾನು ಕಳೆದ ಅಪರೂಪದ ದಿನಗಳಲ್ಲಿ, ನನ್ನ ಪದ್ಯಗಳೂ ಪದ್ಯಗಳೇ ಅಂತ ನಾನು ಸಂಕೋಚದಿಂದ ಅವನ್ನು ಮುಚ್ಚಿಟ್ಟುಕೊಂಡು, ಮುದುಡಿ ಕೊಳ್ಳುತ್ತಿದ್ದರೂ, ಅವನ್ನೆಲ್ಲ ಓದಿ, ತಿದ್ದಿ, ಮೆಚ್ಚಿದ ಕ್ಷಣಗಳ ನಾನು ಮರೆತೇನಾದರೂ ಹೇಗೆ? ಸಂಬಂಧದಲ್ಲಿ ಅವರ ಮೊಮ್ಮಗಳಾಗಿರದಿದ್ದರೂ ಅವರ ಮತ್ತು ಅವರ ಶ್ರೀಮತಿ ಶಾರದಮ್ಮನವರ ವಾತ್ಸಲ್ಯ, ಅಕ್ಕರೆ, ಆತ್ಮೀಯತೆಗಳ ಸವಿಯನ್ನುಂಡಿರುವ ಸಂತೃಪ್ತಿ ನನ್ನದು.

ಈಗ ಅವರ ಮೆಚ್ಚಿನ ಜಾನಪದ ಲೋಕದಿಂದ, ಅಕ್ಷರ ಲೋಕದಿಂದ ಬಹು ದೂರದ ಕಾಣದ ಲೋಕಕ್ಕೆ ಸಂಗಜ್ಜ ಪಯಣ ಹೋಗಿಬಿಟ್ಟಿದ್ದಾರೆ. ಸಂಗಜ್ಜನವರಿಗೆ ಸಾವಿರ ಶರಣು, ಅದಮ್ಯ ಪ್ರೀತಿ... ಮರೆಯದ ನೆನಪಿನ ನಲ್ವರಕೆಗಳು...

ನಂ.೭, ಆರನೇ ಅಡ್ಡರಸ್ತೆ, ಪೈಪ್‌ಲೈನ್, ವಿಜಯನಗರ
ಬೆಂಗಳೂರು - ೫೬೦ ೦೨೩, ದೂರವಾಣಿ : ೨೩೧೦೧೬೦೨

ಮರೆಯಾಗದ ಮಾರ್ಗದರ್ಶಿ ಮುದೇನೂರ ಸಂಗಣ್ಣ

ಡಿ.ಆರ್. ಚಂದ್ರಮಾಗಡಿ

ನಾಡೋಜ ಮುದೇನೂರು ಸಂಗಣ್ಣನವರು ಈ ಬೆಳಕಿನ ಹಬ್ಬದ ದಿನ ಕತ್ತಲೆಗೆ ಸರಿದರು. ಇಪ್ಪತ್ತೈದು ವರ್ಷಗಳಿಂದಲೂ ದೀಪಾವಳಿಯ ಮುನ್ನ ನಮ್ಮನ್ನು ಹರಸುತ್ತಿದ್ದರು. ಈ ವರ್ಷ ಅವರೇ ಇಲ್ಲವೆನ್ನುವುದು ದುಃಖದ ಸಂಗತಿ. ಆದರೆ ಅವರ ನೆನಪು, ದರ್ಶನಗಳು ನಮಗೆ ಸದಾ ಮಾರ್ಗದರ್ಶಿ.

೧೯೮೩ರಲ್ಲಿ ಮಾಗಡಿಯಲ್ಲಿದ್ದ ನಮ್ಮ ಆಪ್ತ ನಾಟಕಕಾರ ನಿಸರ್ಗಪ್ರಿಯರ ಮನೆಯಲ್ಲಿ ನನ್ನ ಪ್ರತಿ ನೈಸರ್ಗಿಕ ಪುಷ್ಪಕಲೆಯಿಂದಾಗಿ ನನ್ನ ಮತ್ತು ಸಂಗಣ್ಣನವರ ಪರಿಚಯವಾಗಿದ್ದು, ನನ್ನೊಳಗೆ ಅವರು ಬೇರೂರಿ ನಿಂತಿದ್ದಾರೆ.

ಪರಂಪರಾಗತವಾಗಿ ಬಂದ ಬೇಸಾಯ, ಜೊತೆಗೆ ತಂಬಾಕು ದಲ್ಲಾಲ ವೃತ್ತಿಯಿಂದಾಗಿ ಆ ಸುತ್ತಿಗೇ ಸಾಹುಕಾರ ಸಂಗಣ್ಣನವರಾಗಿದ್ದರು. ಸಾಹುಕಾರಿಕೆ ಅವರಿಗೆ ನೆನ್ನೆ ಮೊನ್ನೆಯದಲ್ಲ, ಹಣದ್ದೂ ಅಲ್ಲ, ಮನುಷ್ಯತ್ವದ್ದು. ೨೦೦ ಎಕರೆ ಜಮೀನಿನ ಒಡೆತನ ಅವರದಾಗಿದ್ದರೂ ಏನೂ

ಇಲ್ಲವೇನೋ ಅನ್ನು ಭಾವ ಅವರಲ್ಲಿತ್ತು. ಮುಖ್ಯವೃತ್ತಿಯಾದ ಬೇಸಾಯದ ನೆಲದಿಂದ ಜೀವನ ನಿರ್ವಹಣೆ ಜೊತೆಗೆ ಜಾನಪದ ಕಲೆ ಸಾಹಿತ್ಯ ಸಂಸ್ಕೃತಿಯ ಪೂರ್ಣ ವಿದ್ವತ್ತನ್ನು ಮೈತುಂಬಿ ಕೊಂಡಿದ್ದರು. ಅವರು ಸಂಗ್ರಹಿಸಿದ ಜಾನಪದ ಹಾಡು-ನಾಟಕಗಳು ಅಮೂಲ್ಯವಾದವು.

'ಚಿಗಟೇರಿ ಪದಕೋಶ' ಕನ್ನಡದ ಅಪೂರ್ವ ಪದಕೋಶ. ಇದರ ಮಾದರಿಯಲ್ಲೇ ಪ್ರತೀ ಗ್ರಾಮಕ್ಕೊಬ್ಬ ಇಲ್ಲವೇ ತಾಲ್ಲೂಕಿಗೊಬ್ಬರು ಪದಕೋಶ ಮಾಡಿದರೆ ಸ್ಥಳೀಯ ಭಾಷಾ ಸಂಪತ್ತು ಅಲ್ಲಿಯ ಮಹತ್ವ ಪ್ರಪಂಚಕ್ಕೇ ತೋರಿಸಬಹುದು. ಕನ್ನಡದಲ್ಲಿ ಇಂತಹ ಸ್ಥಳೀಯ ಪದಕೋಶ ನಾನು ತಿಳಿದಂತೆ ಇದೊಂದೇ.

ತಂಬಾಕು ವ್ಯಾಪಾರದ ದೆಸೆಯಿಂದ ಅನ್ನುವುದಕ್ಕಿಂತ ತೀವ್ರ ಸಾಮಾಜಿಕ ಕಳಕಳಿಯಿಂದಾಗಿ ಅನ್ಯ ರಾಜ್ಯ ಭಾಷೆ ಸಂಸ್ಕೃತಿ ಕಲೆಯ ಪಾಂಡಿತ್ಯದ ಅವಕಾಶಗಳು ಸಂಗಣ್ಣನವರಿಗೆ ಲಭ್ಯವಾದವು. ಹೀಗಾಗಿ ಬಂಗಾಳಿ, ಮರಾಠಿ, ಇಂಗ್ಲಿಷ್, ಹಿಂದಿ, ತೆಲುಗು... ಹೀಗೆ ನಾಲ್ಕಾರು ಭಾಷೆಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದರು. ಮರಾಠಿ ನಾಟಕಕಾರ ವಿಜಯ ತೆಂಡೂಲ್ಕರ್‌ರ 'ಘಾಸಿರಾಂ ಕೊತ್ವಾಲ್' ನಾಟಕವನ್ನು ಬಹು ಹಿಂದೆಯೇ ಕನ್ನಡಕ್ಕೆ ಅನುವಾದಿಸಿದ್ದರು. ತೆಂಡೂಲ್ಕರ್ ತೀರಿಕೊಂಡಾಗ ಅವರೊಂದಿಗಿದ್ದ ಆಪ್ತತೆಯ ಬಗ್ಗೆ ಸುಮಾರು ಹೊತ್ತು ಮಾತನಾಡಿದ್ದರು.

ಅವರು ಬೆಂಗಳೂರಿಗೆ ಬರುವ ಮುನ್ನ ಒಂದು ಪತ್ರ ಬರೆಯುತ್ತಿದ್ದರು. ಅವರ ವಾಸ್ತವ್ಯ, ಬರುತ್ತಿರುವ ಉದ್ದೇಶ, ಬಿಡುವಿದ್ದರೆ ನನಗೆ ಬೆಂಗಳೂರಿಗೆ ಬರಲು ಆಹ್ವಾನ. ಸಂಗಣ್ಣನವರ ಜೊತೆ ಇರುವಾಗ ಕಲಾವಿದರು, ಸಾಹಿತಿಗಳು ಸೇರಿ ಸಾಂಸ್ಕೃತಿಕ ವಾತಾವರಣ ಸೃಷ್ಟಿಯಾಗುತ್ತಿತ್ತು. ಅಕಾಡೆಮಿಗಳ ಸಭೆ ಮುಗಿದ ನಂತರ ಪುಸ್ತಕದ ಅಂಗಡಿ, ಅಪರೂಪದ ಕ್ಯಾಸೆಟ್‌ಗಳ ಹುಡುಕಾಟ, ಹೊಸಾ ನಾಟಕಗಳು... ಹೀಗೆ ಬಿಡುವಿಲ್ಲದ ಕಾರ್ಯಕ್ರಮ. ಒಮ್ಮೆ ನಾವು ಸುತ್ತಾಡಿಕೊಂಡು ಹೋಟೆಲ್‌ಗೆ ಬರುವ ಸಮಯಕ್ಕೆ ನಾವಿದ್ದ ರೂಮಿನ ಹತ್ತಿರ ಒಬ್ಬ ಯುವಕ ಕೂತಿದ್ದ. ಹೆಚ್ಚು ಹೊತ್ತು ಕಾಯುತ್ತಾ ಕೂತಿದ್ದಾತ ತಾನು ಪತ್ರಕರ್ತ, ತಮ್ಮನ್ನು ಸಂದರ್ಶನ ಮಾಡಲು ಬಂದಿದ್ದೇನೆಂದ. ಸಂಗಣ್ಣನವರು ತಿಂಡಿ ತರಿಸಿದರು. ತಿಂದ ನಂತರ ಸಂದರ್ಶನಕ್ಕೆ ಆರಂಭಿಸಿ, ಹತ್ತಾರು ಪ್ರಶ್ನೆ-ಉತ್ತರ ನಡೆದವು. ಅದರಲ್ಲಿ ಒಂದು ಪ್ರಶ್ನೆ ಅದನ್ನು ಅರಿತಿದ್ದ ನನಗೆ ಆಶ್ಚರ್ಯ ಅನಿಸಿತು.

ಪ್ರಶ್ನೆ – ಸಾರ್, ತಾವು ಸಂಪಾದಿಸಿದ ಜಾನಪದ ನಾಟಕವನ್ನು ಬೇರೆಯವರು ತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಂಡಿದ್ದಾರೆಂದು ಸುದ್ದಿ. ಈ ಬಗ್ಗೆ ತಾವು ಏನೇಳುತ್ತೀರಿ?

ಉತ್ತರ – ನೋಡಿ, ನನ್ನ ಇಳಿವಯಸ್ಸಿನಲ್ಲಿ ಅವರಿವರ ಮೇಲೆ ಕೆಸರು ಎರಚಿ ಬೇಸರ ಪಡುವ ಬದಲು ನನ್ನ ಉಳಿದ ದಿನಗಳನ್ನು ಆನಂದವಾಗಿ ಕಳೆಯಬೇಕೆಂದಿದ್ದೇನೆ. ದಯವಿಟ್ಟು ಇಂತಹ ಪ್ರಶ್ನೆಗಳನ್ನು ಕೇಳಬೇಡಿ.— ಅಂದರು.

ಪತ್ರಕರ್ತ ಹೋದ ನಂತರ – 'ಸಾರ್, ಯಾಕೆ ನಡೆದದ್ದು ಹೇಳಲಿಲ್ಲ.' ಅಂದೆ.

'ನೋಡಿ, ನಾನು ಬೀಳುವ ಮರ. ನನ್ನ ಕೆಲಸದಿಂದ ಇನ್ನೊಬ್ಬರಿಗೆ ಒಂದು ಪ್ರಮೋಷನ್ ಅಂಥವೇನಾದರೂ ಬರುವುದಾದರೆ ಅವರು ಬೆಳೆಯುವುದಕ್ಕೇನಾದರೂ ಸಹಾಯವಾಗುವುದಾದರೆ ನಾನ್ಯಾಕೆ ಅದನ್ನು ಸುದ್ದಿ ಮಾಡಲಿ. ಸುಮ್ಮನಿರುವುದು ವಾಸಿ ಅಲ್ಲವೇ?' ಅಂದರು.

ಪ್ರತಿ ವರ್ಷವೂ ಅವರ ಮನೆಯಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸುತ್ತಿದ್ದರು. ಈ

ಕಾರ್ಯಕ್ರಮದಲ್ಲಿ ನಾಡಿನ ಪ್ರಸಿದ್ಧ ಸಂಗೀತ ವಿದ್ವಾಂಸರ ಜೊತೆಗೆ ಅಪೂರ್ವ ಪ್ರತಿಭೆಗಳನ್ನು ಆಹ್ವಾನಿಸಿ ಕಾರ್ಯಕ್ರಮ ನಡೆಸುತ್ತಿದ್ದರು. ಇಡೀ ದಿನ ಚಿಗಟೇರಿಯ ಮಾರ್ಗ ಸಂಗೀತ ಸಾಧಕರಿಂದ ಆಸ್ವಾದಕರಿಂದ ತುಂಬಿರುತ್ತಿತ್ತು. ಸಂಗಣ್ಣನವರು ಎಲ್ಲರಿಗೂ ಊಟ, ವಸತಿ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಮನೆಯ ಪುಟ್ಟ ಮಕ್ಕಳಿಂದ ಹಿರಿಯವರೆಗೆ ಎಲ್ಲರೂ ಅದನ್ನು ಸಂಭ್ರಮದಿಂದ ಅನುಭವಿಸುವುದಲ್ಲದೆ ಯಾವುದಕ್ಕೂ ಕೊರತೆ ಬಾರದ ರೀತಿ ನಿಗಾ ವಹಿಸುತ್ತಿದ್ದರು. ನನಗೂ ಒಮ್ಮೆ ಈ ಕಾರ್ಯಕ್ರಮ ಆಸ್ವಾದಿಸುವ ಯೋಗ ಬಂತು. ಊಟ, ತಿಂಡಿ ಹಬ್ಬದ್ದು. ಸಂಗಣ್ಣನವರು ಕಾರ್ಯಕ್ರಮಕ್ಕೆ ಪ್ರಾಸ್ತಾವಿಕವಾಗಿ ಒಂದರೆಡು ಮಾತಾಡಿದರು. ಅದರ ಪೈಕಿ ಒಂದು ಮಾತು –

'ಸಂಗೀತ ಸಾಗರದಲ್ಲಿ ನಾನು ಉಂಡು ಸಂತಸ ಪಡುವುದೇ ಮುಖ್ಯವಲ್ಲ. ನನ್ನೊಟ್ಟಿಗೆ ತಾವೆಲ್ಲರೂ ಸವಿಯಲೆಂದು ತಮ್ಮೆಲ್ಲರನ್ನೂ ಆಹ್ವಾನಿಸಿದ್ದೇನೆ' – ಅಂದರು. ಸಾವಿರಾರು ರೂಪಾಯಿ ಖರ್ಚು ಮಾಡಿ ನಾದ ಸುಧೆಯನ್ನು ಎಲ್ಲರಿಗೂ ಬಡಿಸಬೇಕೆನ್ನುವ ಮನಸ್ಸು ಸಾಹುಕಾರ ಸಂಗಣ್ಣನವರಿಗಿದ್ದು ಸವಿಯಲು ಅವರ ಸಂಗ ಸಿಕ್ಕಿದ್ದು ನನ್ನ ಪುಣ್ಯ. ಅವರು ನನಗೆ ಕೊಟ್ಟ ಗಾನ ಮುದ್ರಿಕೆಗಳ ಅಪಾರ ಸಂಗ್ರಹ ಅಪೂರ್ವ. ಪ್ರಪಂಚದ ಬೇರೆ ಬೇರೆಡೆ ನೇರ ಕಾರ್ಯಕ್ರಮಗಳಿಂದ ಧ್ವನಿ ಮುದ್ರಿಸಿಕೊಂಡವು. ಅವರು ಕೊಡದಿದ್ದರೆ ಅಂತಹ ಗಾಯಕರ ವಾದಕರನ್ನು ನನ್ನ ಕಿವಿ ಈ ತನಕ ಆಲಿಸುತ್ತಲೇ ಇರಲಿಲ್ಲವೇನೋ. ಒಮ್ಮೆ ನಾವಿಬ್ಬರೂ ಇಪ್ಪತ್ತು ವರ್ಷಗಳ ಹಿಂದೆ ಭೀಮಸೇನ ಜೋಷಿ ಮತ್ತು ಬಾಲಮುರಳಿ ಕೃಷ್ಣ ಅವರ ಜುಗಲ್ ಬಂದಿ ಕ್ಯಾಸೆಟ್‌ಗಾಗಿ ಹತ್ತಾರು ಅಂಗಡಿಗಳನ್ನು ಸುತ್ತಿ ಕಡೆಗೆ ವಿಳಾಸ ಕೊಟ್ಟು ಬಂದದ್ದು ನೆನಪಾಗುತ್ತದೆ.

ಒಮ್ಮೆ ಸೌಂದರ್ಯ ಪ್ರಜ್ಞೆಯ ಕುರಿತು ಮಾತಾಡುತ್ತಾ ತಂಬಾಕು ವ್ಯಾಪಾರಕ್ಕೆ ಹೋಗುತ್ತಿದ್ದಾಗಿನ ಒಂದು ಅನುಭವವನ್ನು ವಿವರಿಸಿದ್ದರು –ನಿಪ್ಪಾಣಿಯಲ್ಲಿ ಒಬ್ಬ ಬಹುಭಾಷಾ ಪಂಡಿತನ ಗೆಳೆತನ ಇವರಿಗಿತ್ತಂತೆ. ಆತ ನಾಲ್ಕು ಐದು ಪದವಿಗಳನ್ನು ಪಡೆದಿದ್ದಾತ. ಆದರೆ ಆತನದು ಅಷ್ಟಾವಂಕನ ಚಲುವು. ಸಂಗಣ್ಣನವರು ಅಲ್ಲಿಗೆ ಹೋದಾಗಲೆಲ್ಲಾ ತಪ್ಪದೆ ಭೆಟ್ಟಿಯಾಗಿ ಬರುತ್ತಿದ್ದ ರಂತೆ. ಅವನ ಪ್ರತಿಭೆ ಸಹಜವಾಗಿ ಇವರನ್ನು ಆಕರ್ಷಿಸಿತ್ತು. ಆತ ಒಮ್ಮೆ ಸಂಗಣ್ಣನವರೊಂದಿಗೆ ಮಾತಾಡುತ್ತಾ – 'ನನಗೆ ಎಲ್ಲಾ ಅನುಕೂಲಗಳೂ ಇವೆ. ಒಂದು ಕೊರತೆ ಎಂದರೆ ಈ ತನಕ ನನ್ನನ್ನು ನೋಡಿದ ಎಲ್ಲ ಹೆಣ್ಣುಗಳೂ ನನ್ನನ್ನು ತಿರಸ್ಕರಿಸಿ ನಾನು ಬಹುದಿನ ಮದುವೆಯಾಗದೆ ಏಕಾಂಗಿಯಾಗೇ ಇರುವ ಗತಿ ಬಂದಿದೆ. ತಮಗೆ ತಿಳಿದ ಹಾಗೆ ಎಷ್ಟು ವಯಸ್ಸಾಗಿದ್ದರೂ ಪರವಾಗಿಲ್ಲ. ನನಗಿಂತ ಕುರೂಪಿಯಾಗಿದ್ದರೂ ಚಿಂತಿಲ್ಲ. ಆಕೆಯ ಷರತ್ತುಗಳೇನಿದ್ದರೂ ನಾನು ಮಾನ್ಯ ಮಾಡುತ್ತೇನೆ. ನನಗೊಬ್ಬ ಸಂಗಾತಿ ಬೇಕು. ದಯವಿಟ್ಟು ಯಾರಾದರೂ ಇದ್ದರೆ ನೋಡಿ, ನನಗೆ ಒಂಟಿ ಬದುಕು ಬೇಸರವಾಗಿದೆ' – ಅಂದರಂತೆ. ಅದಕ್ಕೆ ಸಂಗಣ್ಣನವರು ನನ್ನೊಂದಿಗೆ ಹೇಳಿದ ಮಾತೆಂದರೆ — 'ನಾನೂ ಈ ದಿಕ್ಕಿನಲ್ಲಿ ಹೆಚ್ಚು ಕಡೆ ಪ್ರಯತ್ನ ನಡೆಸಿದೆ. ಆದರೆ ಅವರ ದುರಾದೃಷ್ಟ ಅವರಿಗೆ ಒಂದೂ ಹೆಣ್ಣು ಸಿಗಲಿಲ್ಲ. ಅವರ ಸ್ಥಿತಿಯನ್ನು ನೋಡಿ ನನಗನಿಸಿದ್ದೆಂದರೆ ನಾನೇನಾದರೂ ಹೆಣ್ಣಾಗಿದ್ದರೆ ಖಂಡಿತಾ ಅವರ ಬಾಳ ಸಂಗಾತಿಯಾಗಿರಲು ಒಪ್ಪುತ್ತಿದ್ದೆ.'

ಈ ಪ್ರಸಂಗವನ್ನು ಇವರು ವರ್ಣಿಸಿದ ರೀತಿ ತೀರಾ ಕಲಾತ್ಮಕ ಕರುಣಾಜನಕವಾಗಿತ್ತು. ಆ ವ್ಯಕ್ತಿಯ ಅಮೋಘ ಚಿತ್ರಣವನ್ನು ಕೇಳಿದ ಮೇಲೆ ದಯವಿಟ್ಟು ಇದನ್ನು ಒಂದು ಲೇಖನ

ಮಾಡಿಕೊಡಲು ಹಲವು ಬಾರಿ ಕೇಳಿದೆ. ನಾಟಕಗಳ ರಚನೆಗಾಗಿ ನಡೆಸುತ್ತಿದ್ದ ಚಿಂತನೆಯಿಂದಾಗಿ ಇವುಗಳ ಕಡೆ ಮನಸ್ಸು ಮಾಡಿರಲಿಲ್ಲ. ಇಂತಹ ಹತ್ತಾರು ಪ್ರಸಂಗಗಳನ್ನು ಅವರು ಹೇಳುತ್ತಿದ್ದ ಸಂದರ್ಭದಲ್ಲಿ ಅವನ್ನು ಕುರಿತು 'ಕಂಡುಂಡವರು', 'ಅನ್ಯೋನ್ಯ ಅನ್ಯರು' ಎರಡು ಶೀರ್ಷಿಕೆಯಲ್ಲಿ ಬರೆಯಬೇಕೆಂದಿದ್ದೇನೆ ಎಂದು ಬರೆದಿರುವ ಪತ್ರ ಮಾತ್ರ ನನ್ನಲ್ಲಿ ಜೋಪಾನವಾಗಿದೆ.

ಶಿವರಾಮಕಾರಂತರು ಸಂಗಣ್ಣನವರು ತೀರಾ ಆಪ್ತರು. ಕೆ.ಕೆ. ಹೆಬ್ಬಾರ್ ಕಾರಂತರ ಬಹುಮುಖ ಪ್ರತಿಭೆಯನ್ನು ಪ್ರತಿನಿಧಿಸುವ ಒಂದು ರೇಖಾಚಿತ್ರ(೩-೯-೭೮)ವನ್ನು ಬರೆದಿದ್ದರು. ಇದನ್ನು ಸಂಗಣ್ಣನವರು ಅವರ ಮನೆಯಲ್ಲಿ ಜೋಪಾನವಾಗಿಟ್ಟುಕೊಂಡಿದ್ದರು. ನಾನು ಈ ಚಿತ್ರಪಟವನ್ನು ಆಸಕ್ತಿಯಿಂದ ನೋಡುತ್ತಿದ್ದುದನ್ನು ಗಮನಿಸಿ, 'ಅದನ್ನು ನೀವು ತೆಗೆದುಕೊಂಡು ಹೋಗಿ' ಅಂದರು. ನನಗೆ ಅದರ ಮೇಲೆ ಆಸೆ ಇದ್ದರೂ ಅವರ ಮನೆಯಿಂದ ತರಲು ಮನಸ್ಸಾಗಲಿಲ್ಲ. ಒಂದು ದಿನ ಅವರ ಮೊಮ್ಮಗ ಆನಂದಬಾಬುಗೆ ಹೇಳಿ ಎರಡು ಚೀಲ ಪುಸ್ತಕಗಳು ಮತ್ತು ಆ ರೇಖಾ ಚಿತ್ರವನ್ನು ನಮ್ಮ ಮನೆಗೆ ಕಳುಹಿಸಿಕೊಟ್ಟರು.

ಒಮ್ಮೆ ಹಂಪಿ ಉತ್ಸವ ನೋಡಿ ವಾಪಸ್ಸು ಬರುವಾಗ ಸಂಗಣ್ಣನವರನ್ನು ಕಾಣುವ ಆಸೆಯಿಂದ ಚಿಗಟೇರಿಗೆ ಹೋಗಿ ಅವರನ್ನು ಕಂಡ ಸಂತಸಕ್ಕಿಂತ ಅವರ ಅನಾರೋಗ್ಯ ಕಂಡು ಹೆಚ್ಚು ಆತಂಕವಾಯಿತು. ಯಥಾಪ್ರಕಾರ ಪ್ರೀತಿ-ವಾತ್ಸಲ್ಯದ ಸ್ನಾನ, ಆವತ್ತು ಗೌರಿ ಹುಣ್ಣಿಮೆ ಎಂದು ಹಬ್ಬದ ಅಡಿಗೆ- ಅದೇನು ಪುಣ್ಯವೋ ಕಾಣೆ ನಾನು, ಅವರ ಮನೆಗೆ ಹೋದಾಗಲೆಲ್ಲ ಒಂದಿಲ್ಲ ಒಂದು ಹಬ್ಬ, ದಣಿವರಿಯದ ಮಾತುಕತೆ ಸಮಯ ಸಂದದ್ದೇ ಗೊತ್ತಾಗಲಿಲ್ಲ. ಊರಿಗೆ ಬರುವಾಗ ಅವರು ಮಾಡಿಕೊಂಡಿದ್ದ ಗ್ರಂಥಾಲಯವನ್ನು ತೋರಿಸುತ್ತೇನೆಂದರು. 'ಸಾರ್, ನೀವು ಅಷ್ಟು ದೂರ ನಡೆದು ಬರಬೇಕು...' ಅಂದೆ. 'ಆಸರೆಗೆ ಇದ್ದೇ ಇದೆಯಲ್ಲ' ಅಂದು ಕೈಲಿಡಿದಿದ್ದ ಕೋಲನ್ನು ತೋರಿಸಿದರು. ಲೈಬ್ರರಿಯ ಹತ್ತಿರ ಹೋಗುವ ಸಮಯಕ್ಕೆ ಸರಿ ಒಬ್ಬ ಅಜ್ಜ ಮತ್ತು ಪುಟ್ಟ ಮೊಮ್ಮಗಳು ಎದುರಾದರು. ಅವರಿಗೆ, 'ನಮ್ಮ ಬೆಂಗಳೂರಿನ ಸ್ನೇಹಿತರು...' ಅಂದರು. 'ಪುಟ್ಟಾ, ನಿನ್ನ ಹೆಸರು ಹೇಳ್ತೀಯಾ?' ಅಂದೆ. ಆ ಪುಟ್ಟ ಹುಡುಗಿ 'ಕುಹೂ ಕುಹೂ ರೀ' ಅಂದು ನಾಚಿ ಅವರ ತಾತನ ಕಡೆ ತಿರುಗಿತು. ತಾತ, 'ಅಪ್ಪಾರಿಟ್ಟದ್ರೀ' ಅಂತ ಮೆಲ್ಲಗೆ ಉಸರಿಸಿ ಸಂಗಣ್ಣನವರ ಕಡೆ ಕೈ ತೋರಿಸಿದರು. ಅದು ಹೇಗಿತ್ತೆಂದರೆ ಥೇಟ್ ಕೋಗಿಲೆ ಕೂಗಿದ ಹಾಗಿತ್ತು.

ಒಂದು ಮುಂಜಾನೆ ಅವರ ಆರೋಗ್ಯ ತೀರಾ ಕೆಟ್ಟು ಅವರು ಹೆಚ್ಚು ಹಿಂಸೆ ಪಡುತ್ತಿರುವ ಕನಸು ಬಿತ್ತು. ಇಷ್ಟು ಬೇಗ ಫೋನ್ ಮಾಡುವುದು ಸರಿಯೋ ಅಲ್ಲವೋ ಅನ್ನುವ ಆಂತಕದಲ್ಲೇ ಸಮಯ ಕಳೆದು ಏಳು ಗಂಟೆಗೆ ಫೋನು ಮಾಡಿದೆ. 'ತಮ್ಮ ನಿದ್ದೆ ಕೆಡಿಸಿದೆನೇನೋ ಸರ್' ಅಂದೆ. ಅದಕ್ಕೆ ಅವರು ಹೇಳಿದ್ದು— 'ನನ್ನನ್ನು ಎಚ್ಚರಿಸುವ ಅಧಿಕಾರ ನಿಮ್ಮಂಥವರಿಗಲ್ಲದೆ ಬೇರೆ ಯಾರಿಗಿದೆ... ಆರಾಮವಾಗಿದ್ದೇನೆ' ಅಂದು ನಂತರ ಅವರು ಬರೆಯುತ್ತಿದ್ದ ನಾಟಕ ಕಡೆ ತಿರುಗಿ ಸುಮಾರು ಹೊತ್ತು ಮಾತನಾಡಿದೆವು. ಆವತ್ತು ಕನಸು ಉಂಟುಮಾಡಿದ್ದ ಆತಂಕ ಕಡಿಮೆಯಾಗಿತ್ತು.

ನಮ್ಮ ತಾಯಿ ಮತ್ತು ಸಂಬಂಧಿಕರ ಒತ್ತಾಯಕ್ಕೆ ಮಣಿದು ಒಂದು ಆಸ್ತಿಯನ್ನು ಕೊಳ್ಳ ಬೇಕಾಯಿತು. ಇದರ ಸುದ್ದಿಯನ್ನು ಸಂಗಣ್ಣನವರಿಗೆ ಹೇಳಬೇಕೆನ್ನುವ ಕಾತರದಲ್ಲಿ, 'ಸರ್, ನನ್ನ ಜೀವಮಾನದಲ್ಲಿ ಯಾವುದೇ ಆಸ್ತಿಯನ್ನೂ ಕೊಂಡಿರಲಿಲ್ಲ. ಇಂದು ಒಂದು ಆಸ್ತಿಯನ್ನು ಕೊಂಡೆ' ಅಂದು, ಅದರ ವಿವರ ಹೇಳಿದೆ, 'ಹಣಕ್ಕೇನು ಮಾಡಿದಿರಿ' ಅಂದರು. 'ಬ್ಯಾಂಕಿನಿಂದ ಸಾಲ

ತೆಗೆದಿದ್ದೇನೆ' ಅಂದೆ. 'ತೀರಾ ಸಂತಸವಾಯಿತು. ಆದರೆ ಒಂದು ಮಾತು ನಾನು ಆಸ್ತಿ ಕೊಂಡೆ ಅನ್ನುವುದಕ್ಕಿಂತ ನಮ್ಮ ಹಿರಿಯರ ಆಸ್ತಿಗೆ ನನ್ನ ಶ್ರಮ ಸೇರಿಸಿದ್ದೇನೆ ಅಂತ ಯೋಚಿಸುವುದು ಒಳ್ಳೆಯದು' ಅಂದರು. ಈ ತನಕ ನಾನು ಕೊಂಡೆ ಕೊಂಡೆ ಅನ್ನುತ್ತಿದ್ದ ಗರ್ವ ಚಣದಲ್ಲೇ ಕರಗಿಹೋಯಿತು.

ಯಾವತ್ತೂ ಪ್ರಶಸ್ತಿಗಳ ಹಿಂದೆ ಹೋದವರಲ್ಲ. ಅವರನ್ನು ಹತ್ತಾರು ಪ್ರಶಸ್ತಿ-ಗೌರವಗಳು ಹುಡುಕಿ ಬಂದಿದ್ದವು. ಒಮ್ಮೆ ಮಾತಾಡುತ್ತಾ 'ಅವುಗಳನ್ನೆಲ್ಲಾ ಚೀಲದಾಗ ಕಟ್ಟಿ ಒಗದೀನಿ' ಎಂದು ತೋರಿಸಿದರು.

ಸ್ವಾತಂತ್ರ್ಯ ಹೋರಾಟ ಸಂದರ್ಭಗಳು, ಕರ್ನಾಟಕ ಏಕೀಕರಣದ ಸಂದರ್ಭದಾಗಿನ ಅನುಭವಗಳನ್ನು ಅವರು ವರ್ಣಿಸುತ್ತಿದ್ದ ರೀತಿಯೇ ಸ್ವಾರಸ್ಯಪೂರ್ಣವಾಗಿತ್ತು. ಅವು ಲೇಖನಿಯಿಂದಿಳಿದಿದ್ದರೆ ಅಪೂರ್ವ ದಾಖಲೆಯಾಗುತ್ತಿದ್ದವು.

ಸಂಗಣ್ಣನವರು ಇತ್ತೀಚೆಗೆ ಬರೆದು ಮುಗಿಸಿದ್ದ ಎರಡು ನಾಟಕಗಳು ದರೆಗೆ ದೊಡ್ಡವ(ರು) ಮತ್ತು ಬಹುದಿನಗಳ ಬಯಕೆಯಿಂದ ಅಪಾರ ಐತಿಹಾಸಿಕ ಗ್ರಂಥಗಳ ಆಧಾರದ ಮೇಲೆ ಇತ್ತೀಚೆಗೆ ಪೂರ್ಣಗೊಂಡ 'ಅಹಿಂಸಕ - ಅಂಗುಲಿಮಾಲ' ಪ್ರಕಟಣೆಗೆ ಸಿದ್ಧವಾಗಿದೆ. ಅವರು ಈಗ ಬರೆಯಲು ತೊಡಗಿದ್ದ ನಾಟಕ 'ರೂಪಗರ್ವಿತೆ' ಬಿಂಬಿಸಾರನ ಹೆಂಡತಿಯರ ಪೈಕಿ ಬುದ್ಧನ ಅನುಯಾಯಿಯಾದ ಅತೀ ಚೆಲುವೆ 'ಖೇಮಾ'ಳ ಸೌಂದರ್ಯ ಕುರಿತು ಒಂದು ದೃಶ್ಯದ ಬಗ್ಗೆ ನನಗೆ ವಿವರಿಸಿದ್ದರು. ಮಾತ್ಸರ್ಯವೇ ಮೂಲವಾದ 'ದೇವದತ್ತ' ಕಾದಂಬರಿಯನ್ನು ಬರೆಯುವ ಸಿದ್ಧತೆ ನಡೆಸಿದ್ದರು. 'ಕುಂಡಲಕೇಶಿ' ನಾಟಕದ ವಸ್ತುವನ್ನೂ ವಿವರಿಸಿದ್ದರು. 'ನುಲಿಯ ಚಂದ್ರಯ್ಯ'ನ ಮೇಲೆ ನಾಟಕಕ್ಕಾಗಿ ಟಿಪ್ಪಣಿ ಮಾಡಿಕೊಂಡಿದ್ದರು. ಅವರು ಈ ತನಕ ಬರೆದಿದ್ದ ಬುದ್ಧ ಸಂಬಂಧಿ ಕಥನ-ಕವನಗಳ ಸಂಕಲನ ತರುವ ಆಸೆಯನ್ನು ಒಮ್ಮೆ ವ್ಯಕ್ತಪಡಿಸಿದ್ದರು. ಕೆಲವು ದಿನ ರಾತ್ರಿ ವೇಳೆ ನಿದ್ದೆ ಮಾಡದೆ ಕೂತು ಬರೆದ 'ಕಾಗಿ', 'ಅಪ್ಪನ ದುಡ್ಡು ಎಣಿಸಲಾರೆ ಅವ್ವನ ಸೀರೆ ಮಡಚಲಾರೆ' ಮತ್ತು ಇತರ ಪದ್ಯಗಳನ್ನು ಬರೆದು ಅವರು ಅಧ್ಯಯನ ಮಾಡುತ್ತಿದ್ದ ಗ್ರಂಥಗಳಲ್ಲಿ ಇಟ್ಟು ಸುಮಾರು ದಿನಗಳ ಮೇಲೆ ಸಿಕ್ಕ ಬಗ್ಗೆ ಹೇಳಿದ್ದರು. ಈ ಪದ್ಯಗಳಿಗಾಗಿ ಹುಡುಕಬೇಕಿದೆ.

ಸಂಗಣ್ಣನವರ ಪತ್ರವನ್ನು ಒಂದು ಬಾರಿ ಓದಿದರೆ ತೃಪ್ತಿಯಾಗುತ್ತಿರಲಿಲ್ಲ. ಹಲವು ಓದಿಗೆ-ಸವಿಗೆ ಪ್ರಚೋದಿಸುತ್ತಿದ್ದವು. ಈ ಪತ್ರಗಳು ಇಪ್ಪತ್ತೈದು ವರ್ಷದಿಂದ ಚೈತನ್ಯವನ್ನು ಕೊಟ್ಟಿವೆ. ನನ್ನ ಪಾಲಿಗೆ ಅವು ಬಲುದೊಡ್ಡ ಆಸ್ತಿ. ಅವರ ಕೊನೆಯ ದಿನಗಳು ಸನಿಹವಾಗುತ್ತಿದ್ದ ಹಾಗೇ ಅವರಲ್ಲಿ ಪುಟಿಯುತ್ತಿದ್ದ ಸೃಜನಶೀಲ ದನಿಗಳು ನನ್ನ ಕಿವಿಗೆ ಮತ್ತೆ ಮತ್ತೆ ಕೇಳುತ್ತಲೇ ಇವೆ.

ಹೊಂಬಾಳಮ್ಮನ ಪೇಟೆ, ಮಾಗಡಿ – ೫೬೨ ೧೨೦
ಮೊಬೈಲ್ : ೯೯೬೪೩೭೧೮೪೯

‘ಬಹುವಚನ’ ಒಂದು ವಿಭಿನ್ನ ಪ್ರಯೋಗ. ಇದು ಒಂದು ಕೃತಿಯ ಬಗ್ಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡುವ ಪ್ರಯತ್ನ. ಸಾಹಿತ್ಯ ಕೃತಿಗಳಿಗೆ ಹಳೆಯ ಹೊಸದು ಎಂಬ ಭಿನ್ನತೆ ಇಲ್ಲ. ಆದ್ದರಿಂದ ಕೃತಿಯೊಂದರ ವಚನ-ವಾಚನಗಳು ಅದರ ಸಂದರ್ಭಗಳು ಅನೇಕ.

ಎಚ್.ಎಸ್.ವಿ. ಕವಿತೆಗಳನ್ನು ಅವರ ಸಮಕಾಲೀನ ಕವಿಗಳಿಬ್ಬರ ದೃಷ್ಟಿಯ ಓದು ಈ ‘ಬಹುವಚನ’ದ ಮೊದಲ ಪ್ರಯೋಗ

ಬಹುವಚನ

ವಚನ - ೧

ಅಪೂರ್ವ ಪರಿಣಾಮದ ಕವಿತೆ: ‘ಉತ್ತರಾಯಣ’

ಎಸ್.ಮಂಜುನಾಥ್

ಕನ್ನಡದಲ್ಲಿ ಈಚೆಗೆ ಕಾಣಿಸಿಕೊಂಡ ಅತ್ಯಂತ ಕರುಳು ಮಿಡಿಯುವ ಕವಿತೆ ಶ್ರೀ ಎಚ್.ಎಸ್.ವೆಂಕಟೇಶ ಮೂರ್ತಿಯವರ ‘ಉತ್ತರಾಯಣ’. ನನಗೆ ಇದನ್ನು ಓದಿದಾಗ ರಾಮಾಯಣದ ಆದಿಶ್ಲೋಕದ ಸಂದರ್ಭ ನೆನಪಾಯಿತು. ಜೊತೆ ಹಕ್ಕಿ ಬೇಡನ ಬಾಣಕ್ಕೆ ತುತ್ತಾಗಿ ಕೆಳಗೆ ಬಿದ್ದಾಗ ಉಳಿದೊಂದು ಹಕ್ಕಿಯ ಆಕ್ರಂದನ, ಚಕ್ರಾಕಾರವಾಗಿ ಸುತ್ತು ಸುತ್ತು ಬರುವ ಅದರ ಮೇರೆಯಿಲ್ಲದ ದುಃಖ ನನ್ನ ಕಣ್ಣಿಗೆ ಕಟ್ಟಿತು. ಅಗಲಿಕೆಯ ಈ ಪ್ರತಿಮೆಗಿಂತಲು ಹೃದಯ ಕಲಕುವಂಥದು ಮತ್ತೆ ಯಾವುದಿದೆ? ಸಾವಿನ ಮುಂದೆ ಮನುಷ್ಯನ ವಿಹ್ವಲತೆ, ದಿಗ್ಭ್ರಮೆ, ಅಸಂಗತ ಸ್ಥಿತಿ ಇವೆಲ್ಲವನ್ನು ಒಳಗೊಂಡ ಒಂದು ಅರಿವನ್ನು ‘ಉತ್ತರಾಯಣ’ದಲ್ಲಿ ಕವಿ ಒಗ್ಗೂಡಿಸಿ ಕೊಟ್ಟಿದ್ದಾರೆ. ಕರುಣದ ಆ ಭಾವಕ್ಕೆ ತಕ್ಕುದಾದ ಎಲ್ಲವೂ ಕರಗಿ ಹರಿಯುವಂಥ, ಹರಡಿಕೊಳ್ಳುವಂಥ ಭಾಷೆಯ ಲಯ ಈ ಕವಿತೆಯನ್ನು ಅಪೂರ್ವ ಪ್ರಭಾವಶಾಲಿಯನ್ನಾಗಿಸಿದೆ. ಒಡೆದ ಗಾಜಿನ ಸೀಳಿನ ಹಾಳೆ ಇದು ನೇರ ಎದೆಗಿಳಿದುಬಿಡುತ್ತದೆ.



ಉತ್ತರಾಯಣ ಮತ್ತು...
ಕವನ ಸಂಕಲನ
ಲೇಖಕ:
ಎಚ್.ಎಸ್.ವೆಂಕಟೇಶಮೂರ್ತಿ
ಪ್ರಕಾಶನ:
ಆನಂದಕಂದ ಗ್ರಂಥಮಾಲೆ
ಮಲ್ಲಾಡಿಹಳ್ಳಿ
ಪ್ರಕಟಣಾ ವರ್ಷ : ೨೦೦೮
ಬೆಲೆ : **ರೂ. ೧೦೦**

ಈ ಕವಿತೆಯ ಅನುಭವದ ತೀಕ್ಷ್ಣತೆಯೇ ಎಂತಿದೆ ಎಂದರೆ ಇದು ನಮ್ಮ ರೂಢಿಗತ ಅರ್ಥದಲ್ಲಿ 'ಕಾವ್ಯ'ವಾಗಲೂ ನಿರಾಕರಿಸುತ್ತದೆ. ಇದನ್ನು ಓದಿದ ಮೊದಲಿಗೆ ನಾನು ಕವಿಗೆ ಬರೆದಿದ್ದೆ : 'ನಿಮ್ಮ ಹೃದಯದ ಖಂಡವನ್ನೇ ನೀವು ಹೀಗೆ ಕಿತ್ತಿಟ್ಟಿರುವುದನ್ನು ನಾವು ಕವಿತೆ ಎಂದು ನೋಡುವುದು ಕ್ರೂರವೆನಿಸುತ್ತದೆ.' ಅನುಭವ ಇಲ್ಲಿ ಆ ಪ್ರಮಾಣದಲ್ಲಿ ನಿಜ ವಾಸ್ತವವಾಗಿದೆ. ಹಾಗಾಗಿ ಕವಿತೆ ಎನ್ನುವುದು ಮಾತಾಗಿಯೇ ಉಳಿದೂ ವಿಶೇಷವಾದ ಮನಸ್ಸಿನ ಪರಿಣಾಮವನ್ನು ಉಂಟುಮಾಡುವಂತಿದೆ. ಅಂದರೆ, ಅನುಭವವೇ ಆಗಿರುವ ಈ ಕವಿತೆ ಅಲಂಕಾರದ ಹಂಗನ್ನೂ ತೊರೆದಿದೆ. ಅಥವಾ ಕವಿತೆ ತನ್ನನ್ನು ಬಿಟ್ಟುಕೊಡದೇ ಮಾತಿನ ಸಹಜತೆಯನ್ನುಳಿಸಿಕೊಂಡಿದೆ.

ಎಚ್.ಎಸ್.ವಿ.ಯವರದ್ದು ಬಹಳ ಪರಿಣಿತವಾದ ಮನಸ್ಸು. ಕನ್ನಡ ಪರಂಪರೆಯ ಕಾವ್ಯವಷ್ಟನ್ನೂ ಓದಿ ಗ್ರಹಿಸಿ ಅರಗಿಸಿಕೊಂಡ ಪರಿಷ್ಕೃತ ಮನಸ್ಸು. ಈ ಪರಿಣಿತಿ, ಪರಿಷ್ಕಾರಗಳೇ ಅನುಭವಕ್ಕೆ ಎದೆಗೊಟ್ಟು, ಅದರಿಂದ 'ಘಾತಿಸಿ'ಕೊಂಡು ಅದನ್ನು ಹಾಗೇ ಅಭಿವ್ಯಕ್ತಿಸಬೇಕಾದ 'ಕಷ್ಟ'ದಿಂದ ಅವರನ್ನು ವಂಚಿಸಿಯೇಬಿಟ್ಟಿದೆಯೇನೋ ಎಂದು ನನಗೆ ಕೆಲವೊಮ್ಮೆ ಸಂದೇಹವಾಗಿದೆ.

ಹೊಸ ಅನುಭವವನ್ನು ಎದುರುಗೊಳ್ಳಲು ಮತ್ತು ಅದನ್ನು ಒಡಮೂಡಿಸಲು ಹಿಂದಣ ಅನುಭವದ ನೆನಪು ಹೇಗೋ ಹಾಗೇ ಅನನುಭವದ ಅಸಹಾಯಕತೆ ಕೂಡ ಅವಶ್ಯವಲ್ಲವೆ? ಬಹಳ ಸಂಸ್ಕಾರಗೊಂಡ ಮನಸ್ಸು ಹೊಸ ಅನುಭವವನ್ನು ಸೃಷ್ಟಿಸಲಾರದ ಸಮಸ್ಯೆ ಅಲ್ಲಿ ಇರುತ್ತದೆ. ವೀಣೆಯಂಥ ವಾದ್ಯಕ್ಕೆ ಎಲ್ಲ ಭಾವಗಳೂ ಸ್ವತಃ ಸಿದ್ಧವಾಗಿದ್ದು ಹೊಸದಾಗಿ ಏನನ್ನಾದರೂ ಸೃಜಿಸುವ ಚೈತನ್ಯವನ್ನು ಕಳೆದುಕೊಂಡಂತೆ ಅದು. ಈ ಸಮಸ್ಯೆಯಿಂದಾಗಿ ಎಚ್.ಎಸ್.ವಿ. ಕಾವ್ಯ ಮನಸ್ಸಿಗೆ ಕಚ್ಚಿಕೊಳ್ಳುವ ಗುಣವಿರದೆ ಪಾರಂಪರಿಕವಾಗಿ, ಕಾವ್ಯಮಯವಾಗಿ ಇರುತ್ತ ಓದುಗನಿಗೆ ಗೊಂದಲವಾಗುತ್ತಿತ್ತು. ಇಷ್ಟು ದೋಷರಹಿತವಾದದ್ದು ಯಾಕೆ ತನ್ನ ಮನಸ್ಸನ್ನು ಮುಟ್ಟಿದರೂ ನಾಟುತ್ತಿಲ್ಲ ಎಂದು.

ಆದರೆ 'ಉತ್ತರಾಯಣ' ಕವಿತೆ ಈ ಸಮಸ್ಯೆಯಿಂದ ಪಾರಾಗಿ ಹೊಸದೇ ಆವಿರ್ಭಾವದಂತೆನಿಸಿ ಮನಸ್ಸು ತುಂಬುತ್ತದೆ. ಹಾಗಾಗಿ ಈಚಿನ ದಿನಗಳಲ್ಲಿ ಕನ್ನಡ ಕವಿತೆಯ ಓದುಗನ ಕಣ್ಣು, ಕಿವಿ, ಮನಸ್ಸುಗಳನ್ನು 'ಉತ್ತರಾಯಣ' ಚುರುಕುಗೊಳಿಸಿರುವ ಪ್ರಮಾಣದಲ್ಲಿ ಆ ಕೆಲಸವನ್ನು ಮಾಡಿರುವ ಕವಿತೆಗಳು ಅತ್ಯಂತ ಅಪರೂಪವೇ. ಈ ಕಾರಣಕ್ಕೆ ಕವಿ ನಿಜಕ್ಕೂ ನಮ್ಮ ಅಭಿನಂದನೆಗೆ ಪಾತ್ರರು.

★

ಈ ಕವಿತೆಗಳು ಒಂದು ಸಾವಿನ ಕುರಿತು ಅಷ್ಟೇ ಅಲ್ಲ, ದೈಹಿಕ ನೋವಿನ ಕುರಿತಾಗಿಯೂ ಇವೆ. ಸಾವಿನ ಮುಂದೆ ಮಾತಿಲ್ಲ, ಜೀವಿ ಸಂಪೂರ್ಣ ಅಸಹಾಯಕ. ಅದರ ಕುರಿತಾಗಿ ಅಂಥ ಒಂದು ತಾತ್ವಿಕ ನಿಲುವು ಸಿದ್ಧವಿದೆ. ಆದರೆ, ನೋವು ನೋಡುಗನಲ್ಲಿ ಹೆಚ್ಚಿನ ನೋವನ್ನೇ ಹುಟ್ಟಿಸುತ್ತದೆ. ಅದು ಮನಸ್ಸನ್ನು ಇನ್ನಿಲ್ಲದಂತೆ ಚದುರಿಸುತ್ತದೆ. ಪ್ರೀತಿಯೊಂದಿಗೆ ಹೆಣೆದುಕೊಂಡ ಈ ಸಾವು, ನೋವುಗಳು ಮನುಷ್ಯ ಅಸ್ತಿತ್ವದ ಕುರಿತಾದ ನಿರ್ವಿಣ್ಣತೆ, ನಿರ್ವೇದಗಳನ್ನು ಮೂಡಿಸುತ್ತದೆ.

ಭಗವಾನ್ ಬುದ್ಧನ ಅರಿವಿನ ಮೂಲವಾದರೂ ಇದೇ ಅಲ್ಲವೇ?

ಸರಳವಾದ ತೀರ್ಮಾನಗಳಲ್ಲಿ ವಿರಮಿಸದ 'ಉತ್ತರಾಯಣ'ದ ಸಾಲುಗಳು ಇಂತಹ ಸ್ಥಿತಿಯನ್ನು ಭಾವುಕವಾಗದೆ, ಪ್ರಬುದ್ಧವಾಗಿ, ಪಾರದರ್ಶಕವಾಗಿ ಪ್ರಕಟಿಸುತ್ತವೆ. ಸಂಗಾತಿಯ ವಿಪರೀತ ನೋವು, ಸಾವುಗಳನ್ನು ಉದ್ರೇಕಗೊಳ್ಳದೆ, ಸಂಯಮಗೆಡದೆ ಸಹಿಸುವ ಕವಿಯ ದೃಢತೆ ಈ ಕವಿತೆಯ ಮುಖ್ಯ ಫಲಶ್ರುತಿಗಳಲ್ಲೊಂದು. ಏನನ್ನಾದರೂ ಈ ಕವಿತೆಯ ದರ್ಶನವೆಂದು ಕರೆಯಬಹುದಾದರೆ ಅದು ಈ

ಅಂಶವನ್ನೇ ಎಂದು ನನಗೆ ಅನಿಸುತ್ತದೆ. ದುಃಖವೂ ಜಡವಾಗದೆ, ಮನಸ್ಸಿನ ಅರಿವನ್ನು ಹೆಚ್ಚಿಸುವುದರಿಂದ ಈ ಕವಿತೆ ಅನನ್ಯ ಪರಿಣಾಮವುಂಟುಮಾಡುತ್ತದೆ.

ಬಹುಪಾಲು ಎಲ್ಲ ಭಾಗಗಳಲ್ಲೂ ಜೀವನದ, ಸಂಸಾರದ ಪುಟ್ಟ ಪುಟ್ಟ ಘಟನೆಗಳು ಸೂಚಿಸಲ್ಪಡುತ್ತ, ಅಳಿದ ಸಂಗತಿಯ ಚಿತ್ರ ಚೂರು ಚೂರೇ ಕಟ್ಟಿಕೊಳ್ಳುತ್ತ, ಕವಿತೆ ಮುಗಿಯುವ ಹೊತ್ತಿಗೆ ಆ ಪಾತ್ರ ಇನ್ನೂ ಅಳಿಸಲಾಗದಂತೆ ಮನಸ್ಸಲ್ಲಿ ಮೂಡಿ ನಿಲ್ಲುತ್ತದೆ. ನಶ್ವರವಾದ ಜೀವಿತಕ್ಕೆ ಕಾವ್ಯ ಶಾಶ್ವತೆಯನ್ನು ತಂದುಕೊಡಬಹುದಾದ್ದು ಈ ಬಗೆಯಲ್ಲೇ ತಾನೆ?

ಇಂದ್ರಿಯ ಸುಖ, ಸಂಭ್ರಮ, ಅಂತಃಕರಣ ಇವೆಲ್ಲಕ್ಕೂ ಕಾರಣವಾಗುವ ಈ ದೇಹ ನೋವು ಮತ್ತು ಅಂತ್ಯದ ಇದಿರಿನಲ್ಲಿ ಬಿಡುಗಡೆಯೋ ಶೂನ್ಯವೋ ಅರಿಯಲಾಗದ್ದನ್ನು ಅನುಭವಿಸುವ ಪರಿ ಈ ಕವಿತೆಯ ಸಾಲು ಸಾಲುಗಳಲ್ಲಿ ಚಿತ್ರವತ್ತಾಗಿ ಮೂಡುತ್ತದೆ. ನಿಜ-ಭ್ರಮೆ ಎರಡನ್ನೂ ಕಲೆಸಿ ಮೂಡಿರುವಂಥ ಆಸ್ತಿತ್ವವನ್ನೇ ಸಂಕೇತಿಸುವ ಶುರುವಿನ ಈ ಸಾಲುಗಳನ್ನು ನೋಡಿ :

> 'ಕನ್ನಡಿಯಾಚೆ ಪ್ರತಿಬಿಂಬ... ಹಿಡಿಯಲು ಕೈ ಚಾಚಿದರೆ
> ಅಡ್ಡ ನಿಂತಿದೆ ಬೂತು ಕನ್ನಡಿ... ಕನ್ನಡಿಯನ್ನು ಒಡೆಯುವಂತಿಲ್ಲ
> ಪ್ರತಿಬಿಂಬವನ್ನು ಹಿಡಿಯುವಂತಿಲ್ಲ... ಕನ್ನಡಿಯ ಸುತ್ತ
> ಕತ್ತಲು... ಕನ್ನಡಿಯೊಳಗಿನ ಬೆಳಕು – ದೀಪದ ಕಣ್ಣು
> ಧಿಗ್ಗನುರಿಯುತ್ತ'

ಸಾವಿನ ನಂತರದ ವಾಸ್ತವವನ್ನಷ್ಟೇ ಈ ಸಾಲುಗಳು ಹೇಳುತ್ತಿರುವುದಲ್ಲ ಎಂಬುದು ಯೋಚಿಸಿದರೆ ತಿಳಿಯುತ್ತದೆ. ಅಥವಾ, ಪಶ್ಚಿಮವಾಹಿನಿಯಲ್ಲಿ 'ಬೆಳ್ಳಗೆ ಹುಡಿ ಹುಡಿ ಮೂಳೆ ತುಂಡ ಕನಸೊಡೆಯದಂತೆ ಮೆಲ್ಲಗಿಳಿಸಿ ನಿದ್ದೆಗೆ' ನದಿಯಲ್ಲಿ ಮುಳುಗು ಹಾಕಿ –

> 'ತಲೆ ಎತ್ತಿದಾಗ ಕಡಲ ಕಡೆ ಯಾನ ಹೊರಟಿವೆ
> ಅಸಂಖ್ಯ ಪುಟ್ಟ ಪುಟಾಣಿ ಹಾಯಿ ದೋಣಿ
> ತನ್ನ ಗುರಿಯತ್ತ
> ಹರಿವ ಹೊಳೆಯಲ್ಲಿ ಮೆಲ್ಲಗೆ ಕರಗುತ್ತಾ ಕರಗುತ್ತಾ'

ಮನುಜ ಸಮೂಹ ಜೀವನಕ್ಕೆ ಪ್ರತಿಮೆಯಾಗುವ ಈ ಚಿತ್ರ, ಅಥವಾ –

'ದೇಹಗಳೀಗ ಗಂಧರ್ವರೀಸಾಡಿ ಹೋದ ಕೊಳಗಳ ಹಾಗೆ' ಎಂಬಂಥ ಅಭಿವ್ಯಕ್ತಿ 'ಉತ್ತರಾಯಣ'ದಲ್ಲಿ ತುಂಬಿವೆ. ಇಲ್ಲೆಲ್ಲ ಎಚ್.ಎಸ್.ವಿ. ಪ್ರತಿಭೆ ತನ್ನ ಉತ್ತುಂಗದಲ್ಲಿ ನಮಗೆ ಗೋಚರವಾಗುವಂತಿದೆ.

ಹೀಗೆಲ್ಲ ವಿವರಿಸುತ್ತ ಹೋದರೂ 'ಉತ್ತರಾಯಣ'ದ ಅಪೂರ್ವ ಪರಿಣಾಮವನ್ನು ಸೂಚಿಸಲಾಗದೆ ಗಲಿಬಿಲಿಯಾಗುತ್ತದೆ. ನಿಜವಾದ ಕವಿತೆ ಇರುವುದೇ ಹಾಗೆ – ವ್ಯಾಖ್ಯಾನವನ್ನು ಮೀರಿ ಎಂಬುದು ನನಗೆ ಮತ್ತೊಮ್ಮೆ ರುಜುವಾತಾಗಿದೆ. ಕವಿತೆಯನ್ನು ವಿವರಿಸುವುದೆಂದರೆ ಆ ಕವಿತೆಯನ್ನೇ ಮತ್ತೊಮ್ಮೆ ಓದುವುದು, ಆಗ ಮಾತ್ರ ಅದರ ಇಡಿಯಾದ ಮೈಯಿ-ಮನಸ್ಸು ಗ್ರಹಿಕೆಗೆ ಸಿಗುವಂಥದು. ಆದರೆ ನನ್ನದು ಕವಿತೆಯನ್ನು ವಿವರಿಸುವ ಪ್ರಯತ್ನವೂ ಅಲ್ಲ, ಅದು ನನ್ನನ್ನು ಪ್ರವೇಶಿಸಿದ ಮತ್ತು ನನ್ನೊಳಗೆ ಹರಿದಾಡುತ್ತಿರುವ ಬಗೆಯನ್ನು ವ್ಯಕ್ತಪಡಿಸುವ ಪ್ರಯತ್ನ. ಆದರೆ ಅದರಲ್ಲೂ ಸುಖ ಸೋತಿರುವೆನೆಂಬ ಭಾವನೆಯು ನನಗೆ ಸಾರ್ಥಕತೆಯನ್ನೇ ಕೊಡುತ್ತಿದೆ.

ಬನ್ನೀಮಂಟಪ ಬಡಾವಣೆ,
ಕೆ.ಆರ್.ನಗರ - ೫೭೧ ೬೦೨,
ಮೈಸೂರು ಜಿಲ್ಲೆ

ವಚನ - ೨

ದರ್ಶನ ಲಾಲಸೆಯ ಸುಸ್ವರ ರೋದನ:



ಆನಂದ ಜುಂಝುರವಾಡ

ಸುಮಾರು ೪-೫ ತಿಂಗಳ ಹಿಂದಿನ ಮಾತು ನ್ಯಾಯಾಲಯದಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಕೋರಿಯರ್‌ದವನು ಬಂದು ಎಚ್.ಎಸ್.ವ್ಹಿ ಅವರ 'ಉತ್ತರಾಯಣ... ಮತ್ತು' ಸಂಕಲನ ಕೊಟ್ಟು ಹೋದ. ಹಾಗೇ ಒಂದು ಸುತ್ತು ತಿರುವಿದೆ. ವರ್ಷದ ಹಿಂದೆ ದೀಪಾವಳಿ ಸಂಚಿಕೆಯಲ್ಲಿ ಎಲ್ಲೋ ಓದಿದ ಕೆಲವು ಸಾಲುಗಳಿದ್ದವು. ನಿಧಾನ ಓದುವ ಆಶೆಯಿಂದ ಹಾಗೇ ಇಟ್ಟೆ.

ಆ ರಾತ್ರಿ ಇಡೀ ಸಂಕಲನದ ಎಲ್ಲ ಪದ್ಯಗಳನ್ನೂ ಒಬ್ಬ ಕವಿಯಾಗಿ ಓದಿದೆ. ನಿಸರ್ಗ-ರಮ್ಯ ಭಾವಲೋಕ ಒಂದನ್ನು ಸುತ್ತಿ ಬಂದ ಸುಖ ಅನುಭವಕ್ಕೆ ಬಂತು. ಮೊದಲೇ ಕವಿತೆ, ಅದೂ ೩-೪ ದಶಕಗಳ ಕಾಲ ತನ್ನನ್ನಿಡಿಯಾಗಿ

ತೊಡಗಿಸಿಕೊಂಡ ಕವಿಯ ಕವಿತೆ, ಅಲ್ಲದೇ ಸಾವಿನಂತಹ ದಟ್ಟ-ಸಂವೇದನೆಯ ಹಿನ್ನೆಲೆಯ ವಸ್ತು ಭಾವ, ಛಂದ, ಇವುಗಳಿಂದ ಕವಿತೆಗಳು ನನಗಂತೂ ತುಂಬ ಗುಂಗು ಹಿಡಿಸಿದವು.

ಮರುದಿನ ಕಚೇರಿಗೂ ಆ ಪುಸ್ತಕ ಒಯ್ದೆ!(ನನ್ನ ಟೇಬಲ್ ಮೇಲೆ, ಕಚೇರಿ ಕಡತಗಳ ಜೊತೆ ಸಾಹಿತ್ಯ ಕೃತಿಗಳೂ ಇರುವುದು ಸರ್ವೇಸಾಮಾನ್ಯ). ನನ್ನ ಸಹೋದ್ಯೋಗಿ ದೇಶಪಾಂಡೆ ನಿತ್ಯದಂತೆ ಪಕ್ಕದಲ್ಲಿ ಬಂದು ಕುಳಿತು, ಪುಸ್ತಕ ತಿರುವ ತೊಡಗಿದರು. ದೇಶಪಾಂಡೆ ಮೂವತ್ತು ವರ್ಷದ ತರುಣ ಉದ್ಯೋಗಿ. ಅವರ ತಂದೆ ಬದರಿಯಲ್ಲಿ ನಾರಾಯಣನ ಅರ್ಚಕರಾಗಿ ಅಲ್ಲಿಯೇ ಇದ್ದವರು. ಸಹಜ ವಾಗಿಯೇ ಅವರಿಗೆ ತಾತ್ವಿಕತೆಯ ಹಂಗು ತೊರೆದ ಧಾರ್ಮಿಕ-ಆಚರಣೆಗಳ, ಶ್ರದ್ಧೆಗಳ, ಲೋಕದ ಜೊತೆಗೆ ಹೆಚ್ಚು ಒಡನಾಟ. ಅದರಲ್ಲೂ ಮಾಧ್ವ ಪರಂಪರೆಯ ನೆಲೆಯಲ್ಲಿ ನಡೆದವರು. ಅವರು ಓದುವದೆಲ್ಲ, ತತ್ವಶಾಸ್ತ್ರವೂ ಅಲ್ಲದ, ವಿಜ್ಞಾನವೂ ಆಗದ, ಭಾವುಕ ಕೇಂದ್ರದ ಅಲೌಕಿಕ ಕೃತಿಗಳು. ನನ್ನ ಸಂಪರ್ಕಕ್ಕೆ ಸೇರಿದ ಮೇಲೂ ಅವರಿಗೆ 'ಕಾವ್ಯ-ಸೌಂದರ್ಯ'ದ ರುಚಿ ಹಚ್ಚುವದು ನನಗಾಗಿಲ್ಲ. ಆದರೆ, ಅಂದು ಅವರೊಂದು ವಿಶಿಷ್ಟ ಮನಸ್ಥಿತಿಯಲ್ಲಿದ್ದರು. ಅವರ ಹೆಂಡತಿ (೨೮ ವರ್ಷದ ಸಾಧ್ವಿ) ತೀರಿಕೊಂಡು ೧೮-೨೦ ದಿನಗಳಾಗಿದ್ದವು. ಕಣ್ಣು-ಮುಖಗಳಲ್ಲಿ ಇನ್ನೂ ಆ ಅನುಭವದ ಹಸಿ ಹಸಿ ಗಾಯಗಳು ಸ್ಪಷ್ಟವಾಗಿದ್ದವು. ನಾನು-ಅವರು ಕೂಡಿ, ಈ ದಿನಗಳಲ್ಲಿ ಸಾವನ್ನು ಕುರಿತು ಹಲವು ಬಗೆಯ ಚರ್ಚೆಯ ಮಾತುಗಳನ್ನಾಡಿದ್ದೆವು. ನಾನು ಅವರಿಗೆ ಎಚ್.ಎಸ್.ವ್ಹಿ ಅವರ ಸಂಕಲನ ಕೊಟ್ಟು, ಅದರ ಹಿನ್ನೆಲೆ ತಿಳಿಸಿ ಓದಲು ಹೇಳಿದೆ. ಅವರು ಒಯ್ದರು.

ಮರುದಿನ ಬಂದು ಸಂಕಲನವನ್ನು ಮರಳಿಸಿ ಅವರು 'ಸರ್, ಭಾಳ ಛಂದ ಬರದಾsರ. ನನ್ನ ಸ್ಥಿತಿನೂ ಹಂಗೇ ಅದ. ಅದೇ ಚಿತ್ರ, ಅದೇ ನೆನಪು. ಅದೇ ದುಃಖ, ಎಲ್ಲಾ ಅಗದೀ ನನ್ನದೇ ಅನುಭವಾ ಅನ್ನೋ ಹಂಗ ಬರದಾsರ. ಆದ್ರ ಇದರಿಂದೇನು ಉಪಯೋಗ ಆಗ್ತದ? ಸಾವಿನ ಅರ್ಥನೂ ಆಗಂಗಿಲ್ಲ ಸಾವಿನ ದುಃಖವನ್ನ ಮೀರಸೋದು ಇದರಿಂದ ಸಾಧ್ಯವಿಲ್ಲ. ಇಧರಕ್ಕಿಂತಾ ಭಾಗವತದೊಳಗ ಕಪಿಲಮುನಿ ತನ್ನ ತಾಯಿಗೆ ಉಪದೇಶ ಮಾಡಿದ್ದರೊಳಗ ಏನು ಸಾವಿನ ಮಾಹಿತಿ ಅದ, ಅಥವಾ ಗರುಡ -ಪುರಾಣದ ಪ್ರೇತಕಾಂಡ ಏನು ಹೇಳ್ತದ, ಅದು ಇದಕ್ಕೂ ಹೆಚ್ಚು ಉಪಯೋಗ ಬೀಳ್ತದ ಅಂತ ನನಗಂತೂ ಅನಸ್ತದ. ನನಗ ನಿಮ್ಮಂಗ ಕವಿತಾ-ಗಿವಿತಾ ಗೊತ್ತಿಲ್ಲ ಅಂತನ ಹಿಂಗ ಅನಸ್ತಿದ್ರೂ ಅನಸ್ತಿರಬಹುದು' ಎಂದರು. ಅಷ್ಟರಲ್ಲೇ ನನ್ನ ದಿನದ ಕೆಲಸದ ಒತ್ತಡ ಜಾಸ್ತಿ ಆಗಿ, ನಮ್ಮ ಚರ್ಚೆ ಕಡಿತಗೊಂಡಿದ್ದರಿಂದ ''ಇರಬಹುದು, ಹಾಂಗೂ ಇರಬಹುದು'' ಎಂದೆ. ಅವರು ತಮ್ಮ ಕೆಲಸದ ಟೇಬಲ್ಲಿಗೆ ಎದ್ದು ಹೋದರು.

ದೇಶಪಾಂಡೆಯವರ ಮಾತು, ಮತ್ತು ನನಗಾದ ಹೃದ್ಯ ಅನುಭವ ಇವೆರಡರ ತೀವ್ರ ಸಂಘರ್ಷ ಒಂದು ನನ್ನೊಳಗೆ ನಡೆಯತೊಡಗಿತು. ಬಲಿಷ್ಠ ಕವಿಯಾಗಿಯೂ ತೀವ್ರತಮ ತಾತ್ವಿಕ-ಆಕೃತಿಗಳ ಜೊತೆ ಗುದ್ದಾಡುವುದನ್ನು ಒಂದು ಪ್ರಕೃತಿಸ್ವಭಾವವನ್ನಾಗಿಯೇ ಪಡೆದವ ನಾನು. ಸಾವು ಮತ್ತು ಕಾಮಗಳ ದಾಹಕ-ದ್ರಾವಣವಾಗಿಯೂ ನನ್ನ ಕವಿತೆಗೆ ಒಂದು ಬಗೆಯ ಕಟು-ರುಚಿ ಇದೆ ಎನ್ನುತ್ತಾರೆ ಕೆಲವರು. ಹೀಗಾಗಿ ಸಹಜವಾಗಿಯೇ ಎಚ್.ಎಸ್.ವ್ಹಿ ಅವರ ಪದ್ಯಗಳ ಬಗೆಗೆ ನನ್ನೊಳಗೆ ನಡೆದ ತಿಕ್ಕಾಟಗಳು, ಮತ್ತೊಂದು ಬಗೆಯಲ್ಲಿ ನನ್ನನ್ನು ನಾನೇ ಬಗೆದುಕೊಂಡ ಬಗೆಯಾಗಿಯೂ ರೂಪುಗೊಂಡವು.

ಶ್ರೀ ಎಚ್.ಎಸ್.ವ್ಹಿ ಅವರು ಕಳೆದ ೪-೫ ದಶಕಗಳಿಂದ ಕಾವ್ಯ ಸೃಷ್ಟಿಯಲ್ಲಿ ತೊಡಗಿದವರು. ಅವರು ಕಾವ್ಯ-ಸೃಷ್ಟಿ ಮಾಡಲು ತೊಡಗಿದ ಪ್ರಾರಂಭದ ದಿನಗಳಲ್ಲಿ, ಅನುಭವಗಳ ಅಧಿಕೃತತೆ, ಅಭಿವ್ಯಕ್ತಿಯಲ್ಲಿ ತೀವ್ರತೆ ಮತ್ತು ಮುಕ್ತತೆಗಳು, ಅಶ್ಯಕತೆಗಿಂತ ಹೆಚ್ಚು ಮಹತ್ವವನ್ನು ಪಡೆಯತೊಡಗಿದ್ದವು. ತಾತ್ವಿಕತೆ, ವೈಚಾರಿಕತೆಯ ನೆಲೆಯಲ್ಲಿ ಆತಂಕಗಳನ್ನು ಅನುಭವಿಸುತ್ತಿತ್ತು. ವೈಯಕ್ತಿಕತೆ, ಇನ್ನೊಂದು ಅತಿಯಾದ

ತುದಿಗೆ ತಲುಪಿ, ಆತ್ಮ-ಮಗ್ನವಾಗಿತ್ತು. ಎಚ್.ಎಸ್.ವ್ಹಿ ಅವರು ಕಾಲದ ಈ ಬಗೆಯ ಸನ್ನಿಕರ್ಷದಲ್ಲೂ ಒಂದು ಒಳ್ಳೆಯ ಕಾವ್ಯಕ್ಕೆ ಬೇಕಾಗುವ ಎಚ್ಚರವನ್ನು ಉಳಿಸಿಕೊಳ್ಳಬೇಕೆಂಬ ಪ್ರಜ್ಞೆಯನ್ನು ಆಗಲೇ ಹೊಂದಿದ್ದರು. ಆದರೆ ಅದು ಸಾಧಿತವಾಗಲು ಯಾವ ಕವಿಗೂ ಇರುವಂತೆ – ಐದಾರು ಸಂಕಲನಗಳ ಮಾರ್ಗವನ್ನು ಕ್ರಮಿಸುವ ಅಗತ್ಯತೆ ಅವರಿಗೂ ಇತ್ತು. ಆ ಯಾನದಲ್ಲಿ ಅವರು ರೂಢಿಸಿಕೊಂಡ ದರ್ಶನ-ದೀಕ್ಷೆ ಅವರನ್ನು ವಿಚಲಿತರಾಗದೇ ನಡೆಯಲು ಮಾರ್ಗ ತೋರಿತು. ಆ ನಂತರ ಬಂದ ಇನ್ನೊಂದು ಬಗೆಯ ಅತಿಯಾದ ಬಹಿರ್ಮುಖತೆಯ ಕಾಲದಲ್ಲೂ ಎಚ್.ಎಸ್.ವ್ಹಿ. ಎಷ್ಟು ಬೇಕೋ ಅಷ್ಟೇ ಬಹಿರ್ಮುಖರಾಗಿದ್ದರು. ಶೂದ್ರ-ದಲಿತ-ಬಂಡಾಯ-ಕ್ರಾಂತಿ, ಇಂಥ ಕ್ಷಣಿಕ ಬಿರುಗಾಳಿಗಳಲ್ಲಿ ತನ್ನ ಕಾವ್ಯ ವ್ಯಕ್ತಿತ್ವ ಹಾರಿಹೋಗದಂತೆ ಕಾಪಾಡಿಕೊಳ್ಳುವುದು ನಿಜವಾದ ಬಲಿಷ್ಠ ಕವಿಗೆ ಮಾತ್ರ ಸಾಧ್ಯ. ಆದರೆ ಹಾಗೆಂದು ಎಚ್.ಎಸ್.ವ್ಹಿ. ಕಾಲ-ದೇಶಗಳ ಒತ್ತಡಗಳಿಂದ ತಾವು ಪೂರ್ತಿ ದೂರ ಉಳಿಯಲಿಲ್ಲ. ಅವುಗಳಿಂದ ಏನನ್ನು ಪಡೆಯಬೇಕೋ ಅದನ್ನು, ತನ್ನ ಕಾವ್ಯದ ಜೀವ-ಸ್ಪಂದನಕ್ಕೆ ಪೂರಕವಾದುದನ್ನು ಮಾತ್ರ-ಯಥೇಚ್ಛ ಪಡೆದರು. ಮತ್ತು ಆ ಬಗೆಯ ನೋಟಗಳ ಮಿತಿಗಳನ್ನೂ ಪರೋಕ್ಷವಾಗಿ ಕಾವ್ಯದ ಮೂಲಕ ಸೂಚಿಸಿದರು. ಒಟ್ಟಾರೆ, ಕನ್ನಡ ಕಾವ್ಯದ ವೈಚಾರಿಕ ಪ್ರಪಂಚದಲ್ಲಿ೬೦ರ ದಶಕದವರೆಗೆ ಆಗಿ ಹೋದ ವಿಪ್ಲವಗಳಲ್ಲಿ ಎಚ್.ಎಸ್.ವ್ಹಿ ಕಾವ್ಯ, ತನ್ನ ಕಾವ್ಯತ್ವವನ್ನು ಕಳೆದುಕೊಳ್ಳದೆ ಅಖಂಡ ಬದುಕಿನ ಭಾಗವಾಗಿ ತನ್ನ ಅನುಭವಗಳ ರಸವನ್ನು ಒಳಗೆ ಹಿಂಡಿಕೊಳ್ಳುವಲ್ಲಿ ಸಫಲವಾಯಿತು.

ಆ ನಂತರ ಬಂದ ಪೂರ್ವ-ಪಶ್ಚಿಮಗಳ ಸಂಘಟನೆಯ ಕೇಂದ್ರದಲ್ಲಿ ಬದುಕಿನ ವ್ಯಾಪಕ ರೌದ್ರತೆಯ ಕಾರಣವನ್ನು ಹುಡುಕುವ ಪ್ರಕ್ರಿಯೆಯಲ್ಲಿ ಎಚ್.ಎಸ್.ವ್ಹಿ ಅವರ ಕಾವ್ಯ, 'ಕಳೆದುದನ್ನು ಹುಡುಕಿಕೊಳ್ಳುವ ಪ್ರಕ್ರಿಯೆಗಿಂತ' 'ಇದ್ದುದನ್ನು ಇರುವಂತೆ ಅನುಭವಿಸುವ, ಅಭಿವ್ಯಕ್ತಿಸುವ' ಕ್ರಮದ ಮೂಲಕ 'ಕಳೆದದ್ದು ಮರಳಿ ತಾನೇ ಸ್ಮೃತಿಗೆ ಬರುವ ಸ್ಥಾಪಿತವಾಗುವ' ಸಾಧ್ಯತೆ ಇದೆ. ಎಂದು ನಂಬಿ ನಡೆದರು ಎಂಬುದು ಹಲವು ವಿಮರ್ಶಕರ ನಿಲುವು. ಇದು ನನಗೂ ಸರಿ ಎನ್ನಿಸಿತು. ಏಕೆಂದರೆ, ಸ್ಮೃತಿ -ಆಧಾರವನ್ನಿಟ್ಟು ಕೊಂಡ ನನ್ನಂಥವರು 'ಸ್ಮೃತಿ ಭಾರ'ದಲ್ಲಿಯೇ, ಸಿಕ್ಕು, ಮಿತಗೊಳ್ಳುವ ಅಪಾಯ ಬಹಳವಿದೆ. ಆದರೆ 'ಸ್ಮೃತಿ'ಯ ಹಂಗನ್ನು ಕಳೆದುಕೊಳ್ಳುವುದು ಅಷ್ಟು ಸುಲಭ ಸಾಧ್ಯವಲ್ಲ ಎಂಬುದೂ ನನಗೆ ಗಟ್ಟಿಯಾದದ್ದು ಎಚ್.ಎಸ್.ವ್ಹಿ ಅವರ 'ಉತ್ತರಾಯಣ ಮತ್ತು' ಸಂಕಲನದ ಪದ್ಯಗಳನ್ನು ಓದಿದ ನಂತರವೇ. ತಾತ್ವಿಕತೆ ಅತಿಯಾದರೆ ಚರ್ಚೆ ಅಮೂರ್ತವಾಗುತ್ತದೆ ಎಂಬ ಭಯದಿಂದ ನಾನು, 'ಸಂಕಲನ'ದ ನೆಲಕ್ಕೇನೆ ಇಳಿಯಬಯಸುತ್ತೇನೆ. ಪದ್ಯಗಳ ಬಿಡಿ-ಸಾಲುಗಳ ಆಧಾರವನ್ನು ನನ್ನ ಮಾತುಗಳಿಗೆ ಪೂರೈಸುವುದು, ಒಂದು ಬಗೆಯ ಲೆಕ್ಕಾಚಾರದ ಕೆಲಸವಾದೀತು ಎಂಬ ಅಳುಕಿನಿಂದ ಕವಿತೆಗಳ ಒಟ್ಟಂದದ ಭಾವವನ್ನು, ಅವರ ಈ ವರೆಗಿನ ಕಾವ್ಯದ ಹಿನ್ನೆಲೆಯಲ್ಲಿ ನೋಡಬಯಸುತ್ತೇನೆ.

ಈ ಸಂಕಲನದ ಹಿಂದಿನ ಸಂಕಲನ 'ಭೂಮಿಯೂ ಒಂದು ಆಕಾಶ' ಹೆಚ್ಚು ಕಡಿಮೆ ಪಶ್ಚಿಮವನ್ನು ತಿಳಿದೂ, ಪೂರ್ವವನ್ನು ಬೆನ್ನು ಹತ್ತಿದ ಕವಿ-ಚಿತ್ತದ ಒಂದು ನಿಲುವು. 'ವಿರಕ್ತಿ' ಎಂಬ ಮೌಲ್ಯದ ಅನುಸಂಧಾನದಿಂದ, 'ಇಹ'ವೆಂಬ ಪರಿಭಾಷೆಯಲ್ಲಿ ಯಾವುದನ್ನು ಅಲಕ್ಷಿಸಲಾಗಿದೆ ಎಂದು 'ಪಶ್ಚಿಮ ಬುದ್ಧಿ' ಭಾವಿಸಿದೆಯೋ, ಅದಕ್ಕೆ ಪ್ರತಿಯಾಗಿ 'ಪೂರ್ವವು ಹಾಗೆ ಅಲಕ್ಷಿಸಿಲ್ಲ' ಎಂಬ ಅನುಸಂಧಾನದೊಂದಿಗೆ ಪೂರ್ವವನ್ನು ಸ್ಮೃತಿಗೆ ತಂದುಕೊಳ್ಳುವ, ತೋರಿಸುವ ಪ್ರಯತ್ನದ ಅಂಗವಾಗಿ 'ಭೂಮಿಯೂ ಒಂದು ಆಕಾಶ'ದ ಪದ್ಯಗಳು ದುಡಿಯುತ್ತವೆ. ''ಅಮೆರಿಕದಲ್ಲಿ ಬಿಲ್ಲು ಹಬ್ಬ'' ಸಂಕಲನದಲ್ಲೇ ಪ್ರಾರಂಭವಾಗಿದ್ದ ಈ ಪ್ರಕ್ರಿಯೆ, ''ಭೂಮಿಯೂ ಒಂದು ಆಕಾಶ''ದಲ್ಲಿ ಸ್ಥಾಪನೆಗೊಂಡು ನಿಂತಾಗ, ''ಉತ್ತರಾಯಣ ಮತ್ತು'' ಸಂಕಲನದಲ್ಲಿ, ತನ್ನ ಹಿಂದಿನ ನಿಲುವಿಗೆ ಧಕ್ಕೆ ತರುವ ಒಂದು ದಟ್ಟ ಅನುಭವ ಎದುರಾಗಿದೆ. 'ಸಾವು' ಕವಿಯ ಕಾವ್ಯ-ಪ್ರಜ್ಞೆಯ ಬಾಗಿಲು ತಟ್ಟಿದೆ. ಕವಿ ಈ ಹಿಂದೆ ತನ್ನ ಯಾವುದೇ ಅನುಭವವನ್ನು ಕಾವ್ಯ

ವಿಶಿಷ್ಟ ರೂಪಕಗಳಲ್ಲಿ ಮಾರ್ಪಡಿಸಿ ತನ್ನ ವೈಚಾರಿಕ ನಿಲುವನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿತ್ತು. ಆದರೆ 'ಸಾವು' ಎಂಬ ಅನುಭವ ಕಾವ್ಯ-ರೂಪಕಗಳಲ್ಲಿ ಬೇಕಾದ ಹಾಗೇ ಮಣಿಯವಂತಹದ್ದಲ್ಲ. ಒಪ್ಪಬೇಕು, ಇಲ್ಲವೇ ಮೂಕನಾಗಬೇಕು, ಇವೆರಡೇ ಆಯ್ಕೆಗಳು ಸಾವಿನ ಎದುರಿಗಿರುತ್ತವೆ. ಇದು ಪಾಮರರಿಗೂ ಅಷ್ಟೇ. ಪಂಡಿತನಿಗೂ ಅಷ್ಟೇ. ಕವಿಯ ಕಾವ್ಯ-ಶಕ್ತಿ ಕೂಡ ಇಲ್ಲಿ ಬಧಿರವಾಗುತ್ತದೆ. ಒಂದೆಡೆ ತೀವ್ರವಾದ ದಟ್ಟ ಅನುಭವ; ಇನ್ನೊಂದೆಡೆ ತಾನು ಈವರೆಗೆ ರೂಢಿಸಿಕೊಂಡಿದ್ದ ವೈಚಾರಿಕ-ಚಿಂತನೆ, ಇವೆರಡರ ಸಂಘರ್ಷದಲ್ಲಿ 'ಉತ್ತರಾಯಣ' ಪದ್ಯ, ಕಾವ್ಯವಾಗಿ ಗೆದ್ದಿದೆ. ಅಂತೆಯೇ ಕವಿಯ ಈ ಹಿಂದಿನ ಮನೋ-ವಿಚಾರದ ಆವರಣಕ್ಕೆ ಭಿನ್ನವಾಗಿ ಏಕಾಂಗಿಯಾಗಿ ನಿಂತಿದೆ.

ಕವಿ ಈವರೆಗೆ ಪಶ್ಚಿಮ-ಪ್ರದೇಹ, ಆರೋಗ್ಯದಂಥ ಮೌಲ್ಯಗಳನ್ನು ಪೂರ್ವ ಎಂದಿಗೂ ತಿರಸ್ಕರಿಸಿಲ್ಲ ಎಂಬುದಾಗಿ ಸ್ಥಾಪಿಸುವುದರ ಜೊತೆಗೆ, ವಿಜ್ಞಾನದ ವಿವೇಚನೆಗೆ ಅಳವಡಿಸಿ, ಪರೀಕ್ಷಿಸಿ, ಜೀವನ ಮೌಲ್ಯಗಳನ್ನು ಆಯ್ದುಕೊಳ್ಳುವ ಪದ್ಧತಿಯೂ ನಮ್ಮ ಪ್ರಬುದ್ಧತೆಯಲ್ಲಿತ್ತು ಎಂಬುದನ್ನು, ಸೂಚ್ಯವಾಗಿ ಒಪ್ಪುತ್ತಾನೆ. ಮನುಷ್ಯ ಸಮಾಜಜೀವಿಯೂ ಹೌದು, ವ್ಯಕ್ತಿಗತ ವಿಶಿಷ್ಠ ಸಾಧಕನೂ ಹೌದು ಎಂಬುದನ್ನು ಸೂಚಿಸುವ ಕೃಷ್ಣ-ಕೇಂದ್ರಿತ, ರಾಮ-ಕೇಂದ್ರಿತ ಪದ್ಯಗಳೂ ಇಲ್ಲಿವೆ. ಆದರೆ ಅನುಭವವು 'ಇಹ'ದ ಭಾವಕೋಶದಲ್ಲಿ ಅರ್ಥವನ್ನೇ ಹೊಂದಿರದಿದ್ದರೆ, ಅಥವಾ ಹೊಂದಿದ ಅರ್ಥ, ಕಾವ್ಯ-ಪ್ರಜ್ಞೆಯ ನೆಲೆಯಲ್ಲಿ ಈಗಾಗಲೇ ಗೃಹಿತವಾದ ವಿಚಾರ-ಕೋಶಕ್ಕೆ ಹೊಂದುವಂತಿರದಿದ್ದರೆ, ಆಗ ಕವಿ ಏನು ಮಾಡಬೇಕು? ಕವಿಯ ದುಃಖ ದೊಡ್ಡದು. ಆ ದುಃಖ ತಂದೊಡ್ಡಿದ ಅನುಭವ ಕವಿಯನ್ನು, ತನ್ನ ಈಗಿನ 'ಆಕಾಶವೆಂದು ಭಾವಿಸಿದ ಭೂಮಿಯಿಂದ' ಎದ್ದು ಬರಲು ಕರೆಯುತ್ತಿದೆ. ಆದರೆ ಹಾಗೇ ಅದರ ಬೆನ್ನು ಹತ್ತಿ ಹೋದರೆ ಅದು ತೋರುವ ಹೊಸ ದರ್ಶನದಲ್ಲಿ ತನ್ನ ಈಗಿನ ದರ್ಶನ ಸುಳ್ಳಾದರೆ ಎಂಬ ಭಯ ಕವಿಗಿದೆ. ಆದರೆ ಅನುಭವ ತಂದೊಡ್ಡಿದ ದುಃಖ, ಕಾವ್ಯ-ಸಂವೇದನೆಯಲ್ಲಿ ಎಷ್ಟು ಪ್ರಬಲವಾಗಿದೆ ಎಂದರೆ ಕವಿ ಆ 'ಅನುಭವ' ಕರೆದಲ್ಲಿ ಹೊರಟಿದ್ದಾನೆ. ತುಸು ದೂರ ನಡೆದೂ ಇದ್ದಾನೆ. ಆದರೆ, ಕಾಲ ಸರಿದಂತೆ, ಅನುಭವದ ಪ್ರಾಕೃತಿಕ ಪರಿಣಾಮ ಸಹಜ ಸ್ವರೂಪದಲ್ಲಿಯೇ ತೆಳುವಾದಂತೆ, ಕವಿಗೆ ತನ್ನ 'ಪೂರ್ವಾರ್ಜಿತದ ರತಿ ವಿವೇಕದ ಶಿಖೆ' ಅಷ್ಟೇ ಪ್ರಬಲವಾಗಿ ಎಳೆಯುತ್ತದೆ. ಇದರಿಂದಾಗಿ 'ಉತ್ತರಾಯಣ' ಪದ್ಯ ಮತ್ತು ಆ ಅನುಭವಕ್ಕೆ ಹೊಂದಿಕೊಂಡ ಇನ್ನೊಂದು ಪದ್ಯ, ಎರಡನ್ನು ಬಿಟ್ಟರೆ ಉಳಿದೆಲ್ಲ ಪದ್ಯಗಳು ಒಂದು ಬಗೆಯ ಎಚ್ಚರದ ಪದ್ಯಗಳಾಗಿವೆ. ಉತ್ತರಾಯಣದಲ್ಲಿ ಕವಿ ಎಷ್ಟೊಂದು 'ಭವನಿಮಜ್ಜನ'ದಲ್ಲಿ ತೊಡಗಿದ್ದಾನೆಂದರೆ ಸಾವಿನ ನಂತರದ ವೈದಿಕ 'ಅಪರ-ಕರ್ಮ'ಗಳ ಆಚರಣೆಯಲ್ಲಿ ತಾನು ತೊಡಗಿದ್ದ ಆ ನೆನಪುಗಳನ್ನೆಲ್ಲ ಕವಿ ತನ್ನ ಕಾವ್ಯ -ಸ್ಮೃತಿಯಲ್ಲಿ ಪುನರುಜ್ಜೀವಿಸಿಕೊಳ್ಳುತ್ತಾನೆ. ಅಸ್ಥಿ ಸಂಚಯನ, ವಾಮಸ ಬಲಿ, ಇವುಗಳನ್ನೆಲ್ಲ ಕವಿ ಶ್ರದ್ಧೆಯಿಂದ ಆಚರಿಸಿದ್ದಾನೆ. ಅಗಲಿದ ಜೀವ ಬದುಕಿದ್ದಾಗ, ತನ್ನ ಕಾವ್ಯ ಪ್ರಜ್ಞೆಯ ಅಹಮಿಕೆಯಿಂದಾಗಿ ತಾನು ಅದರ ಜೊತೆ ವರ್ತಿಸಿದ ಒಂದು ಕ್ರೂರ ನೆನಪನ್ನೂ ತಳಮಳದಿಂದ ತೋಡಿಕೊಂಡು, ತನ್ನನ್ನು ಶಪಿಸಿಕೊಳ್ಳುತ್ತಾನೆ. ಪುನರ್‌ಜನ್ಮದ ನಂಬಿಕೆಯೂ ಕೆದಕಿ, ಅಗಲಿದ ಜೀವ ಈಗ ಮತ್ತೆ ಜೀವಂತವಾಗಿರಬಹುದು ಎಂಬ ಕನಸನ್ನೂ ಕಾಣುತ್ತಾನೆ. ಅಗಲಿದ ಜೀವವನ್ನು, ಹಲವು ಬಗೆಯ ಸಾತ್ವಿಕ ಸ್ತ್ರೀರೂಪಗಳನ್ನಾಗಿ ಧೇನಿಸಿ, ಅದರ ವಿಶ್ವಮಾಲೆಯನ್ನು ತಾನೇ ಮತ್ತೊಮ್ಮೆ ಅನುಭವಿಸಿಕೊಳ್ಳುತ್ತಾನೆ. ಅಗಲಿದ ಜೀವಗಳಿಗೆ ನಾವು ಸಲ್ಲಿಸುವ ಸಲ್ಲಿಸಬೇಕಾದ, ಸ್ಮೃತಿ ಧಾರೆಗಳ ಮಹತಿಯನ್ನು ಕವಿ ಸಾರುತ್ತಾನೆ. ತನ್ನ ಅನುಭವ ಬಹಳ ಕಠಿಣವಾದದ್ದು. ಅದನ್ನು ಅರಗಿಸಿಕೊಳ್ಳಲು(?) ಎಲ್ಲರಿಗೂ ಇರುವ ಒಂದೇ ದಾರಿ ಎಂದರೆ ಅದಕ್ಕೊಂದು ಛಂದರೂಪಿ ಆಹುತಿಯನ್ನು ಕೊಡವದು ಎಂಬ ಉತ್ತರದೊಂದಿಗೆ 'ಉತ್ತರಾಯಣ' ಮುಗಿಯುತ್ತದೆ. ತನಗಾದ 'ಸುಖದ ಹಾನಿ'ಯ ನೋವೇ ಕವಿತೆಯ ಹಿಂದಿನ ಭಾವ-ದ್ರವ್ಯವಾಗಿ ಧ್ವನಿತವಾಗಿದೆ.

ಆದರೆ ಇಲ್ಲಿರುವ ಪ್ರಶ್ನೆ ಎಂದರೆ 'ವಾಮನ ಬಲಿ'ಯ ಪ್ರಸ್ತಾಪವಿರುವ ಸಾಲುಗಳನ್ನು ಬರೆಯುವಾಗ ಕವಿ ತನ್ನ ಪೂರ್ವ-ಪಶ್ಚಿಮ ನಿಯೋಗವನ್ನು ಹೇಗೆ ಸಂಭಾಳಿಸುತ್ತಾನೆ? ಎಂಬುದು. ಹೇಳಿ, ಕೇಳಿ ಆ ಕ್ರಿಯೆ, ತೀರ ಅತಾರ್ಕಿಕ ಕ್ರಿಯೆ. ಅದಕ್ಕೆ ನೀವೆಷ್ಟು ಮಾನವಿಕ ರೂಪಗಳನ್ನು ಕೊಟ್ಟರೂ, ಆಧುನಿಕ ಚಿಂತನೆಯ ಚೌಕಟ್ಟಿನಲ್ಲಿ ಅದರ ಚರ್ಚೆಯೇ ಸಾಧ್ಯವಿಲ್ಲ. ಕವಿಗೆ ಆ ಕ್ರಿಯೆಯ ಮೇಲೆ ಶ್ರದ್ಧೆ ಇದೆಯೆ? ಇದ್ದರೆ ಆ ಶ್ರದ್ಧೆಯ ಹಿಂದಿನ ವೈದಿಕ ಜಗತ್ತನ್ನು ಆತ ಹ್ಯಾಗೆ ಸ್ವೀಕರಿಸುತ್ತಾನೆ? ಎಂಬುದು ತಾತ್ವಿಕವಾದ ಪ್ರಶ್ನೆ. ವೈದಿಕೇತರ ಚಿಂತನೆಯನ್ನು ನಂಬಿದ ವಿಮರ್ಶಕರೂ, ಈ ಪದ್ಯದ ಬಗೆಗೆ ಸದಭಿಪ್ರಾಯ ಬರೆದರೆ, ಅದು ಕವಿತೆಯ ನೆಲೆಯಲ್ಲಿನ ಪ್ರಸ್ತಾಪ ಮಾತ್ರವಾದೀತು. ಅಥವಾ ಕವಿ ಜೀವವನ್ನು ಇನ್ನಷ್ಟು ನೋಯಿಸಬಾರದೆಂಬ ಮಾನವಿಕ ಸ್ಪಂದನವಾದೀತು. ಅದು ತಪ್ಪೂ ಅಲ್ಲ. ಹಾಗೇ ನೋಡಿದರೆ ತನ್ನ ಅನುಭವಗಳು ಹೇಳಿದಂತೆ ವರ್ತಿಸುವ ಸ್ವಾತಂತ್ರ್ಯ ಕವಿಗೂ ಇದ್ದೇ ಇದೆ. ಇಷ್ಟಾಗಿಯೂ ಕವಿಯ ಈ ಒಟ್ಟು ಅನುಭವದ ಪಾಲುದಾರಿಕೆಯಲ್ಲಿ ಆತ ಪಟ್ಟ ತಾತ್ವಿಕ ಸಂಕಟಗಳೇನು ಎಂಬುದು ನಮಗೆ-ಅನ್ಯರಾದವರಿಗೆ-ಕವಿತೆ ಕೊಟ್ಟಷ್ಟಲ್ಲದೆ ಬೇರೆ ತಿಳಿಯುವದಾದರು ಎಷ್ಟು?

ಆದರೆ ಇಡೀ ಕನ್ನಡ ಕಾವ್ಯ 'ಜಾಗತೀಕರಣ', 'ಖಾಸಗೀಕರಣ', 'ವಾಣಿಜ್ಯೀಕರಣ' ಇಂಥ 'ಕರಣ'ಗಳ ಬಗೆಗೆ ಮಾತನಾಡುತ್ತಿರುವಾಗ ತನ್ನ ಕಾವ್ಯ-ಪ್ರಜ್ಞೆಯ ಘಟಕದಲ್ಲಿ ಇವುಗಳಿಗೆ ಪ್ರತಿಸ್ಪಂದಿಸುವ ತನ್ನದೇ ಆದ ಕ್ರಿಯಾ-ಬದ್ಧತೆಯೊಂದನ್ನು ಹೇಳುತ್ತ ಬಂದ 'ದೇಹ-ಮನಸ್ಸು-ಬುದ್ಧಿ'ಗಳೆಂಬ ಇನ್ನೊಂದು ಬಗೆಯ 'ತ್ರಿಕರಣ'ಗಳ ಘಟಕದ ಜೊತೆಗೆ ಕವಿಯ ಕಾವ್ಯ-ಪ್ರಜ್ಞೆಯ ಘಟಕ ಸ್ಪಂದಿಸುವ ಕ್ರಮ ಎಂತಹದು ಎಂಬುದು ನಾಡಿನ ಒಂದು ಸಾಂಸ್ಕೃತಿಕ ನೋವಿನ ಚಿಕಿತ್ಸಾಕ್ರಮ ಎಂದು ನಾನು ಭಾವಿಸಿದ್ದೇನೆ. ಆ ಅರ್ಥದಲ್ಲಿಯೇ ನನ್ನ ಮೇಲಿನ ಪ್ರಶ್ನೆ ಮುಖ್ಯವೆಂದು ನನಗನ್ನಿಸುತ್ತದೆ.

ಈ ನಿಟ್ಟಿನಲ್ಲಿ ನನಗನ್ನಿಸುವುದೆಂದರೆ ಎಚ್.ಎಸ್.ವಿ. ಕವಿಯಾಗಿ ಬಹಳ ಪ್ರಾಮಾಣಿಕರಾಗಿದ್ದಾರೆ. ತನ್ನ ಬಾಳಿನ ವೈಚಾರಿಕ ಕ್ರಮಗಳು-ಆಚಾರಿಕ-ಕ್ರಮಗಳೂ, ಎರಡೂ ಕೂಡಿ ಪ್ರೇರೇಪಿಸಿದ ಕಾವ್ಯ-ಪ್ರೇರಣೆಗಳಿಗೆ ಅವರು ತಮ್ಮ ಕಾವ್ಯ-ಪ್ರಜ್ಞೆಯನ್ನು ಅಧೀನಗೊಳಿಸುತ್ತಿದ್ದಾರೆ. ಇದು ನಿಜವಾದ ಕವಿಯ ಲಕ್ಷಣ. ವೈದಿಕತೆಯನ್ನು ಕವಿ ಹಿನ್ನೆಲೆಗಿಟ್ಟುಕೊಂಡಿದ್ದಾರೆಂದು ಅವರ ಬಗೆಗೆ ಅಭಿಮಾನದಿಂದ ನಾನು ಈ ಮಾತು ಆಡುತ್ತಿಲ್ಲ. ಆದರೆ, ಆಧುನಿಕತೆಯ ಪರಿಣಾಮದಿಂದಾಗಿ, ತನ್ನ ನಿಜವಾದ 'ಅನುಭವ' ಯಾವುದು ಎಂಬುದೇ ತಿಳಿಯಲಾಗದಷ್ಟು, ನಾವು ಶಿಕ್ಷಿತರಾಗಿದ್ದರಿಂದ, ಕವಿ-ಪ್ರಜ್ಞೆ ಈ ಪ್ರಶ್ನೆಯನ್ನು ತೀವ್ರ-ಅನುಭವದ ಸಂದರ್ಭಗಳಲ್ಲಿ ಆದ್ಯತೆಯ ಮೇಲೆ ಎತ್ತಿಕೊಳ್ಳಬೇಕಾಗುತ್ತದೆ. ಎಚ್.ಎಸ್.ವಿ.ಯವರ ಈ ಪದ್ಯದ ಅನುಭವ ಎಲ್ಲ ವಿಚಾರಗಳನ್ನು, ತತ್ವಗಳನ್ನು, ಬದಿಸರಿಸಿ, 'ನನ್ನನ್ನು ಸ್ವೀಕರಿಸು' ಎನ್ನುವ ಆಕರ ಕವಿಗೆ ಬೇಡವಾದ ಅನುಭವ. ಆದರೆ ಸ್ವೀಕರಿಸದೆ ಗತಿಯಿಲ್ಲ. ಕವಿ ತನ್ನ ಅನುಭವಕ್ಕೂ ಸುಳ್ಳಾಗದೆ, ವೈಚಾರಿಕತೆಗೂ ಸುಳ್ಳಾಗದೆ ಇಲ್ಲಿ ಹಲವು ವಿಭಿನ್ನ ದಿಕ್ಕಿಗೆ ಮುಖ ಮಾಡಿದ ಪದ್ಯಗಳನ್ನು ನೀಡಿದ್ದಾರೆ. 'ಉತ್ತರಾಯಣ' ಹಾಗೂ 'ಒಂದು ಕಥೆ' ಈ ಪದ್ಯಗಳು ಒಂದು ದಿಕ್ಕಿಗೆ ಮುಖ ಮಾಡಿದರೆ, ಇದೇ ಸಂಕಲನದ ಇನ್ನುಳಿದ ಪದ್ಯಗಳು, 'ಉತ್ತರಾಯಣವನ್ನೇ ಅಪರಿಚಿತ ಮುಖದಂತೆ ನೋಡುತ್ತವೆ.

ಇದಕ್ಕೆ ಮುಖ್ಯ ಕಾರಣವೇನೆಂದರೆ, ಈ ಮೊದಲೇ ಚರ್ಚಿಸಿದಂತೆ ಕವಿಗೆ ೪-೫ ದಶಕಗಳ ಕಾಲ, ಕವಿತೆ ಮತ್ತು ತನ್ನ ದೇಶಕಾಲೋಚಿತ ಚಿಂತನೆಗಳ ಅನ್ಯೋನ್ಯ ದಾಂಪತ್ಯದ ನಡುವೆ ಒಂದು ಸೂಕ್ಷ್ಮ ಬಿರುಕು ಈಗ ಕಂಡಿದೆ. ಆ ಬಿರುಕನ್ನು ಮುಚ್ಚಲು ಅನುಭವಗಳನ್ನು ಹಿಂದಿನಂತೆ ವಿಭಿನ್ನ ರೂಪಕಾರ್ಥಗಳಲ್ಲಿ ಮಣಿಸಲು ಕಷ್ಟವಾಗುತ್ತಿದೆ. ನಾನು ಇಷ್ಟು ದಿನ ನಂಬಿದ್ದ ಸ್ಥಾಪಿಸಿಕೊಂಡಿದ್ದ ವೈಚಾರಿಕ ಆಕೃತಿಗಳನ್ನು-ಸದ್ಯೋಜಾತ ಅನುಭವದ ಸಂದರ್ಭದಲ್ಲಿ-ದಿಢೀರನೆ ನಿರಾಕರಿಸಿ, ಹೊಸಲೋಕದ ತಲ್ಲಣದಲ್ಲಿ ಕರಗುವದು

ಅಷ್ಟು ಸುಲಭವೂ ಅಲ್ಲ. ಕವಿ ತುಂಬ ಇಕ್ಕಟ್ಟಿನಲ್ಲಿ ಸಿಕ್ಕಿದ್ದಂತೂ ನಿಜ. ಆದರೆ ಎಚ್.ಎಸ್.ವ್ಹಿ. ಅವರು ಇಂಥ ದ್ವೈತ್ಯ ಸಂಕಟವನ್ನು ತುಂಬ ನಿಧಾನವಾಗಿ ದಾಟುವ ಮೂಲಕ ತಮ್ಮ ಪೂರ್ವ ಆಲೋಚನಾ ಕ್ರಮವನ್ನೂ ಸಂಭಾಳಿಸುತ್ತ, ಕಾವ್ಯಾನುಭವದ ತುರ್ತಿಗೂ ಒದಗುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವರು ಬಳಸುವ ಛಾಂದೋಗ್ಯೋಪನಿಷತ್ತಿನ ಮಾತು— 'ಸಾವಿನ ಭಯದಿಂದ ಪಾರಾಗಲು ಪೂರ್ವಸೂರಿಗಳು ಛಂದವನ್ನು ತೆರೆಮಾಡಿಕೊಂಡರು...' ಕೂಡ, ತಮ್ಮ ಅನುಭವವನ್ನು ಪೂರ್ವನಿಯೋಜಿತ ಚಿಂತನಾಕ್ರಮಕ್ಕೆ ಕಸಿಮಾಡುವದು. 'ಇಷ್ಟು ಮಾತ್ರ ಸಾಧ್ಯ' ಎಂಬ ಧ್ವನಿಯ ಸೂಚಕವಾಗಿ ಬಳಕೆಯಾಗಿದೆ. ಸಾಮಾಜಿಕಬದ್ಧತೆ, ರಾಜಕೀಯ ಕ್ರೌರ್ಯ, ಸಾಹಿತ್ಯಿಕ ಗುಂಪುಗಾರಿಕೆ, ಕಲಾ-ಮೀಮಾಂಸೆಗಳ ಅನವಸ್ಥಾ ದೋಷ, ಯಾವುದರ ಜೊತೆಗೂ ಕಸಿಯಾಗದ ಒಂದು 'ಅನುಭವ' ಹೇಗೆ ಎಚ್.ಎಸ್.ವ್ಹಿ. ಅವರಲ್ಲಿ – ಅವರ ಸ್ಥಿತಿ ಸ್ಥಾಪಕತೆಯಲ್ಲಿಯೇ– ಅಳವಟ್ಟಿದೆ. ಅದು ಅವರಲ್ಲಿ 'ಸ್ಫೋಟ'ವನ್ನು ಉಂಟುಮಾಡಿಲ್ಲ ಎಂದು ನನಗನ್ನಿಸಿದರೆ, ಅದು ನನ್ನ ಅನುಭವಕ್ಕೆ ಸ್ಪಂದಿಸುವ ಕ್ರಮವನ್ನು ಅವರಲ್ಲಿಯೂ ಹುಡುಕುವ ನನ್ನದೇ ದೋಷವಾದೀತು. ಆದರೂ ಬಾಂಬು ಸಿಡಿದಾಗ ಸುತ್ತ ಹರವಿಕೊಂಡಿದ್ದೆಲ್ಲ ಉಧ್ವಸ್ಥವಾಗಬೇಕಿತ್ತಲ್ಲ ಎಂಬ ಅನಿಸಿಕೆ ಬಂದುಹೋಯಿತು. ಆಧುನಿಕ ಮನುಷ್ಯನ ಸೈದ್ಧಾಂತಿಕ -ಸಂಕೀರ್ಣಗಳಲ್ಲಿ ಅಡಕವಾಗಿರುವ ವೈಚಾರಿಕ ಜೈವಿಕತೆಗಳು ಎಷ್ಟು ಗಟ್ಟಿಯಾಗಿವೆ ಎಂದರೆ ಯಾವ ಅನುಭವಗಳ ಅಣು-ಸ್ಫೋಟಗಳೂ, ಅವುಗಳನ್ನು ಅಲುಗಾಡಿಸುವದಿಲ್ಲವಲ್ಲ' ಎಂಬ ಆಂತಕವುಳ್ಳವನಾದ ನನಗೆ ಹಾಗನಿಸಿದ್ದು ನನ್ನದೇ ಮಿತಿ ಇರಬೇಕು. ಅನುಭವದ ಒತ್ತಡಕ್ಕೆ ಮಣಿಯುವ ಕಾವ್ಯ-ಪ್ರಜ್ಞೆಯ ಕಲೆಗಾರಿಕೆ ಒಂದು ಕಾಲಾವಧಿಯಾದಾದರೆ ಎಂಥ ಒತ್ತಡಕ್ಕೂ ಮಣಿಯುವ ಕಾವ್ಯ ಪ್ರಜ್ಞೆಯ ಕಲೆಗಾರಿಕೆ ಇನ್ನೊಂದು ಕಾಲಾವಧಿಯದಿದ್ದೀತು. ಈ ನಡುವಿನ 'ವರ್ಣಾವಣಾ-ಕಾಲ'ವೂ ಒಂದಿದ್ದೀತು. ಆಯಾ ಕಾಲಾವಧಿಯ ಕಾವ್ಯಕ್ಕೆ ಅದರದೇ ಆದ ಸಾಧ್ಯತೆಗಳೂ ಇವೆ. ಮಿತಿಗಳೂ ಇವೆ. ಎಚ್.ಎಸ್.ವ್ಹಿಯವರ 'ಉತ್ತರಾಯಣ ಮತ್ತು' ಸಂಕಲನದ ಪದ್ಯಗಳು, ಅವರ ಈ ಬಗೆಯ ವರ್ಣಾವಣಾ ಕಾಲದ ಪದ್ಯಗಳೂ ಆಗಿರಬಹುದಾದ ಸಾಧ್ಯತೇ ಇದ್ದೇ ಇದೆ.

ಬಾಳಿನ ಪುನರ್-ನಿರ್ಮಿತಿಗೆ 'ದುಃಖಗಳೂ' ಅನುಭವಗಳಾಗಿ ಉಪಕರಣಗಳಾಗುತ್ತವೆ ಎಂದು ಹೇಳುವ ಕವಿ ಕೀಟ್ಸ್‌ನ ಮಾತು ಸತ್ಯ. ಆದರೆ, ಈ ಉಪಕರಣಗಳ ಸ್ವರೂಪ, ಅವು ಒರಟುವ ಜೀವಗಳ ಸ್ವರೂಪ, ಎರಡೂ ಅನಂತ, ಅನಾದಿ ಅಂತೆಯೇ ಅದರ ಪರಿಣಾಮಗಳೂ ಅನೂಹ್ಯ. ಅದು ಒಂದೇ ಜನ್ಮದಲ್ಲಿ ಆಗುವದಿಲ್ಲ. ಈ ಅರ್ಥದಲ್ಲಿ ಎಚ್.ಎಸ್.ವ್ಹಿ. ಅವರಿಗೆ ಇಲ್ಲಿ ಒಂದು ಅವಕಾಶ ಬಂದಿದೆ. ಅವರ ಕಾವ್ಯ-ಚಿಂತನೆ, ಬಾಳಿನ ಅನುಭವಗಳು ನಿರ್ದೇಶಿಸುವ ದಿಕ್ಕಿನಲ್ಲಿ ಹೊರಳಿ, ನಡೆಯುವವೇ? 'ಭೂಮಿಯೂ ಒಂದು ಆಕಾಶ'ವೆಂಬ ಅವರ ತಾತ್ವಿಕ-ತೀರ್ಮಾನ ಮತ್ತೆ ಪ್ರಶ್ನೆಗೀಡಾಗುವದೇ? ಎಂಬುದನ್ನು ಅವರ ಮುಂದಿನ ಪದ್ಯಗಳೇ ಹೇಳಬೇಕು.

ಸಾವಿನ ಭಯದಿಂದ 'ಛಂದಸ್ಸಿನ' ಹಿಂದೆ ಅಡಗುವದೆಂದರೆ ನಾನು ತಿಳಿದಂತೆ, ಅನುಭವಕ್ಕೆ ಅಭಿವ್ಯಕ್ತಿ ನೀಡುವದಲ್ಲ. ಅಭಿವ್ಯಕ್ತಿಗೆ ನಿಲುಕದ ಅನುಭವಗಳ ಪ್ರಪಂಚದ ಹಿಂದೆ ಕೆಲಸ ಮಾಡುವ ಅನೂಹ್ಯ 'ಛಂದ'ಕ್ಕೆ ತಲೆಬಾಗುವದು ಎಚ್.ಎಸ್.ವ್ಹಿಯವರೊಳಗಿನ ಕವಿ, ಅವರನ್ನು ಆ ದಿಕ್ಕಿನತ್ತ ಹೊರಳಿಸಲಿ. ಅಗಲಿದ ಜೀವಕ್ಕೆ ಶ್ರದ್ಧಾಂಜಲಿ.

''ರುರುದುಃ ಸುಸ್ವರನ್ ರಾಜನ್, ಕೃಷ್ಣದರ್ಶನ ಲಾಲಸಾಃ''

(ಆ ಗೋಪಿಯರು, ರಾಜನೇ, ಕೃಷ್ಣನ ದರ್ಶನ ಲಾಲಸೆಗಾಗಿ ಸುಸ್ವರವಾಗಿ ರೋದಿಸಿದರು.)

– ಭಾಗವತದ ಗೋಪಿಗೀತ.



ತಕರಾರು
ಲೇಖಕ: **ಮೊಗಳ್ಳಿ ಗಣೇಶ್**
ಪ್ರಕಾಶನ:
ಪಲ್ಲವ ಪ್ರಕಾಶನ
ಚನ್ನಪಟ್ಟಣ
ಪ್ರಕಟಣಾ ವರ್ಷ : ೨೦೦೮
ಬೆಲೆ : **ರೂ. ೧೨೦**

ತಕರಾರು:

ಕೆಲವು ಪ್ರತಿಕ್ರಿಯೆಗಳು

ಎನ್. ಸುರೇಶ್ ನಾಗಲಮಡಿಕೆ

ಮೊಗಳ್ಳಿಯವರು ಕನ್ನಡ ಕಥಾ ಸಾಹಿತ್ಯದಲ್ಲಿ ಪ್ರಬುದ್ಧ ಸ್ಥಾನವನ್ನು ದಕ್ಕಿಸಿಕೊಂಡವರು. ಅಲ್ಲದೆ, ಕನ್ನಡ ಕಥನ ಕ್ರಮವನ್ನು ವಿಸ್ತರಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಗದ್ಯದಲ್ಲೂ ಕೂಡ ದೇಸೀ, ಶತಮಾನ, ಸೊಲ್ಲು, ದಲಿತರು ಮತ್ತು ಜಾಗತೀಕರಣ ಮುಂತಾದ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಇವುಗಳ ನಂತರ ಬಂದಿರುವ ತಕರಾರು (ಅಗ್ನಿ ಪತ್ರಿಕೆಯಲ್ಲಿ ಬಂದ ಅಂಕಣ ಬರಹಗಳು) ಸಾಕಷ್ಟು ವಾದವಿವಾದಗಳನ್ನು ಉಂಟುಮಾಡಿದ ಸಂಕಲನವಾಗಿದೆ. ಮೊಗಳ್ಳಿಯವರು ತಕರಾರಿನ ಕೊನೆಯಲ್ಲಿ 'ಭಾರತೀಯ ಕಾವ್ಯ ಮೀಮಾಂಸೆಯ ಯಾವ ಮಾನದಂಡಗಳನ್ನು ನಾನಿಲ್ಲಿ ಅನ್ವಯಿಸಿಲ್ಲ, ಹಾಗೆಯೇ ಪಶ್ಚಿಮದ ಕಾವ್ಯಾರ್ಥ ಚಿಂತನೆಯನ್ನು ಅನುಸರಿಸಿಲ್ಲ' ಎಂದು ಹೇಳಿ ಮಾನವಿಕ ವಿಜ್ಞಾನಗಳ ಮಾನದಂಡಗಳನ್ನು ಅಳವಡಿಸಿಕೊಂಡು ಕನ್ನಡದ ಮುಖ್ಯ ಲೇಖಕರ ಜೊತೆಗೆ ಮುಖಾಮುಖಿ ಆಗಿದ್ದೇನೆ (ಪುಟ ೨೧೧) ಎಂದು ಅಭಿಪ್ರಾಯ ಪಡುತ್ತಾರೆ. ಹೀಗೆ ಹೇಳುವಾಗ ಮೊಗಳ್ಳಿಯವರ ಕೆಲವು ಬರಹಗಳು ತಮಗೆ ಅರಿವಿಲ್ಲದಂತೆಯೇ ಮೇಲೆ ಹೇಳಿರುವ ಮಾನದಂಡಗಳ ಕಡೆ ಕೈಚಾಚುತ್ತವೆ.

ಮೊಗಳ್ಳಿಯವರು ವೈದಿಕ ಮೀಮಾಂಸೆಯನ್ನು ವೈದಿಕತನವನ್ನು ವ್ಯಕ್ತಿನಿಷ್ಠತೆಯನ್ನು ದಲಿತತ್ವದ ಕೆಲವು ಆಯಾಮಗಳನ್ನು ತಕರಾರಿಗೆ ಒಳಪಡಿಸುವುದೇ ಮಾನವಿಕ ಮಾನದಂಡಗಳು ಎಂದು ಭಾವಿಸಿದಂತಿದೆ.

ಅವರ ಪ್ರಾರಂಭದ ಉದ್ದೇಶ ದೇಸೀತನವನ್ನು ಮತ್ತು ಸಂಸ್ಕೃತಿ ಮೀಮಾಂಸೆಯ ನೆಲೆಗಳನ್ನು ಶೋಧಿಸುವುದು. ಆದರೆ, ತಕರಾರಿನ ಅಂತಿಮ ಹಂತಕ್ಕೆ ಇವು ಯಾವುವೂ ಸಮಗ್ರ ಮಟ್ಟದಲ್ಲಿ ಒಗ್ಗೂಡದೇ ಹೋಗುತ್ತವೆ. ಅವರ ಮುಖಾಮುಖಿ ನವೋದಯದ ಕುವೆಂಪು,ಬೇಂದ್ರೆ, ಪು.ತಿ.ನ., ಗುಂಡಪ್ಪ ಕಾರಂತರಿಂದ ಹಿಡಿದು ದಲಿತ-ಬಂಡಾಯದ ಲೇಖಕರ ತನಕ ಆವರಿಸಿಕೊಂಡಿದೆ. ಈ ಲೇಖನದಲ್ಲಿ ಚರ್ಚೆಯ ಅನುಕೂಲಕ್ಕಾಗಿ ಈ ಕೆಳಗಿನಂತೆ ವಿಂಗಡಿಸಿದ್ದೇನೆ.

ನವೋದಯ ಲೇಖಕರನ್ನು ಕುರಿತು ಎತ್ತುವ ತಕರಾರು:

ಕನ್ನಡದ ಮುಖ್ಯ ಕವಿಗಳಲ್ಲಿ ಒಬ್ಬರಾದ ಬೇಂದ್ರೆಯವರನ್ನು ಮೊಗಳ್ಳಿ ಅನೇಕ ರೀತಿಯಲ್ಲಿ ತಕರಾರಿಗೆ ಗುರಿಪಡಿಸುತ್ತಾರೆ.

ಬೇಂದ್ರೆಯವರು ದೇಸೀ ಕ್ರಮವನ್ನು ತಮ್ಮ ಕಾವ್ಯ ಶರೀರಕ್ಕೆ ಬಳಸಿಕೊಂಡಿರುವ ಬಗೆಯನ್ನು ಪ್ರಶ್ನಿಸುತ್ತಾರೆ. ವಾಸ್ತವವಾಗಿ ಈ ಕುರಿತು ಅನೇಕ ಆಳ ಅಧ್ಯಯನಗಳು ನಡೆದಿವೆ. ಡಾ. ಎಚ್.ಎಸ್. ರಾಘವೇಂದ್ರರಾವ್ ಅವರು ಬೇಂದ್ರೆ ಕಾವ್ಯವನ್ನು ಕುರಿತು ಹೀಗೆ ಹೇಳುತ್ತಾರೆ – 'ಅವರದು ದ್ರಾವಿಡ ದೇಹ ಮತ್ತು ಆರ್ಯ ಮನಸ್ಸುಗಳ ಸಂಯೋಜನೆಯಾಗಿತ್ತು.' (ನಮಸ್ಕಾರ, ಪುಟ - ೧೬ ಎಚ್.ಎಸ್.ಆರ್.) ಆದ್ದರಿಂದ ಮೊಗಳ್ಳಿಯವರ ಈ ಅಭಿಪ್ರಾಯವು ರೂಢ ಮೂಲವಾಗಿದೆ. ಅಲ್ಲದೆ ಬೇಂದ್ರೆಯವರ ಯಾವುದೇ ಕವನವನ್ನು ಎತ್ತಿಕೊಂಡರೂ ಅದರಲ್ಲಿ ವೈದಿಕಸ್ಪರ್ಶವನ್ನು ನೋಡಬಹುದು ಎಂದು ಮೊಗಳ್ಳಿ ಅಭಿಪ್ರಾಯ ಪಡುತ್ತಾರೆ. ಪ್ರಾಯಶಃ ಇದು ಸತ್ಯಕ್ಕೆ ದೂರವಾದ ಮಾತು.

ಅಲ್ಲದೆ, 'ಬೇಂದ್ರೆಯವರ ಆತ್ಮ ಅಗ್ರಹಾರದ ಪಡಸಾಲೆಯಾದರೆ ಅವರ ಕಾವ್ಯದ ಬಣ್ಣ ಮಾತ್ರ ದೇಶೀ ಸಂತೆಯ ರಂಗಿನದು' (ಪುಟ ೧೨) ಇಂಥ ವಾಕ್ಯಗಳು ಸಾಕಷ್ಟು ಗೊಂದಲ ಉಂಟುಮಾಡುತ್ತವೆ. ಬ್ರಾಹ್ಮಣ್ಯ ಎಂದು ನೇರವಾಗಿ ಹೇಳದೆ ಅಗ್ರಹಾರ ಎಂದು ಹೇಳುತ್ತಿರಬಹುದೆ?

ಮಾಸ್ತಿ ಕತೆಗಳ ಕುರಿತು ಎತ್ತುವ ಅನೇಕ ತಕರಾರುಗಳು ಒಂದು ರೀತಿಯಲ್ಲಿ ಮೊಗಳ್ಳಿಯವರು ಮಾಸ್ತಿಯವರನ್ನು ಭೈರಪ್ಪನವರ ಮಟ್ಟಕ್ಕೆ ಅನಗತ್ಯವಾಗಿ ಎಳೆಯುತ್ತಾರೆ. ಗಂಭೀರವಾದ ಆಧಾರಗಳಿಲ್ಲದೆ ಮಾಸ್ತಿಯವರ ಕಥನ ಕ್ರಮವನ್ನು ವಿಮರ್ಶಿಸುವುದು ಕಷ್ಟ. ''ಹರಿಕಥೆ ದಾಸರು ಮಾಸ್ತಿಯವರಿಗಿಂತ ಅತ್ಯಂತ ಪರಿಣಾಮಕಾರಿಯಾಗಿ ಕತೆ ಹೇಳಬಲ್ಲರು'' (ಪುಟ -೧೯) ಈ ಮಾತನ್ನು ಮೊಗಳ್ಳಿಯವರು ವಾಸ್ತವ ಎಂದು ಅನುಮೋದಿಸಿದರೆ ಸ್ವತಃ ಅವರಿಗೂ ಅನ್ವಯಿಸುತ್ತದೆ. ಏಕೆಂದರೆ, ಮೌಖಿಕಕ್ಕೂ-ಶಿಷ್ಟಕ್ಕೂ ಇರುವ ವ್ಯತ್ಯಾಸ, ಸಾಮ್ಯಗಳನ್ನು ಮತ್ತು ಅದರ ಕಥನ ಕ್ರಮವನ್ನು ಮೊಗಳ್ಳಿ ಚೆನ್ನಾಗಿ ಬಲ್ಲವರು. ಮಾಸ್ತಿಯವರ ಧರ್ಮದ ಬಗ್ಗೆ ತೆಗೆದುಕೊಳ್ಳುವ ತೀರ್ಮಾನವನ್ನು ಕುರಿತಾಗಿ ನನಗೂ ಕೆಲವು ಸಂಶಯಗಳಿವೆ. ಇದು ಬಾಹ್ಯದ್ದು. ಆದ್ದರಿಂದ ಮಾಸ್ತಿಯವರ ಕಥನ ಕ್ರಮ ಇದಕ್ಕೆ ಹೊರತಾದದ್ದು ಎಂದು ನನ್ನ ಅನಿಸಿಕೆ.

'ಮರಳಿ ಮಣ್ಣಿಗೆ' ಕಾದಂಬರಿಯೊಂದನ್ನೇ ಇಟ್ಟುಕೊಂಡು ಮೊಗಳ್ಳಿಯವರು ಕಾರಂತರು ಅಂತಿಮವಾಗಿ ವೈದಿಕತನಕ್ಕೆ ಮರಳುತ್ತಾರೆ ಎಂಬ ಸರಳ ಅಭಿಪ್ರಾಯಕ್ಕೆ ಬಂದು ತಲುಪುತ್ತಾರೆ.

ಎಲಿಯಟ್ ತನ್ನ ವೇಸ್ಟ್ ಲ್ಯಾಂಡ್ ಕವಿತೆಯನ್ನು ಓಂ ಶಾಂತಿಯಿಂದ ಮುಕ್ತಾಯಗೊಳಿಸುತ್ತಾನೆ. ಅಷ್ಟು ಮಾತ್ರಕ್ಕೆ ಎಲಿಯಟ್ ವೈದಿಕ ಧರ್ಮದ ವಕ್ತಾರನಾಗಿಬಿಡುವುದಿಲ್ಲ. ಹಾಗೆ ನೋಡಿದರೆ ಚಿಗುರಿದ ಕನಸು, ಬೆಟ್ಟದ ಜೀವ, ಮರಳಿ ಮಣ್ಣಿಗೆ ಕಾದಂಬರಿಗಳು ಬೇರೊಂದು ರೀತಿಯ ದೇಸೀತನಕ್ಕೆ ಮರಳುತ್ತವೆ. ದಕ್ಷಿಣ ಕನ್ನಡದ ಅನೇಕ ಉಪಬ್ರಾಹ್ಮಣ ಸಮುದಾಯಗಳನ್ನು ನಾವು ಗಮನಿಸಬೇಕಾಗುತ್ತದೆ. ಆದಾಗ್ಯೂ ಕಾರಂತರ ಸೃಜನಶೀಲತೆ ಅಡಗಿರುವುದು ಪ್ರಕೃತಿ-ಮನುಷ್ಯ ಇವರ ಸಂಬಂಧ, ವೈರುಧ್ಯಗಳಲ್ಲಿ ಅಲ್ಲವೇ?

ನವೋದಯದ ಪ್ರಮುಖ ಲೇಖಕರಲ್ಲಿ ಒಬ್ಬರಾದ ಪು.ತಿ.ನ. ಬಗೆಗೆ ಬರೆಯುತ್ತ ಮೊಗಳ್ಳಿಯವರು 'ಪು.ತಿ.ನ. ಸಾಹಿತ್ಯವೆಲ್ಲವೂ ವೈದಿಕತನದಿಂದ ಅದ್ದಿ ತೆಗೆದಂತೆ ಇದೆ.' ಎನ್ನುವಂತೆ ಚರ್ಚೆ ಮಾಡುತ್ತಾರೆ. ''ಪು.ತಿ.ನ. ತಾರತಮ್ಯ ಜ್ಞಾನದವರಲ್ಲವಾದರೂ ಹಿಂದೂ ಧರ್ಮದ ಸಾರವೇ ಶ್ರೇಷ್ಠ ಎಂದು ಗಂಭೀರವಾಗಿ ನಂಬಿದ್ದವರು(ಪುಟ - ೪೦)'' ಮುಂದುವರೆದು, ''ಧರ್ಮಶ್ರದ್ಧೆಯು ಶಿಸ್ತುಬದ್ಧ ನಕಲಿನಂತೆ ಕಾಣುತ್ತದೆ. ಅವರ ಮೇಲುಕೋಟೆಯ ಪ್ರಸಿದ್ಧ ನಾಮ ಸಂಕೇತವೂ ಅವರ ಧರ್ಮ ಶ್ರದ್ಧೆಯ ಚಹರೆಯಂತಿದೆ.''(ಪುಟ-೪೧) ಮೇಲಿನ ಅಭಿಪ್ರಾಯಗಳಿಗೆ ಮೊಗಳ್ಳಿಯವರು ಪು.ತಿ.ನ. ಸಾಹಿತ್ಯದಿಂದ ಪರಿಪೂರ್ಣ ಆಧಾರಗಳನ್ನು ಒದಗಿಸುವುದಿಲ್ಲ. ಪು.ತಿ.ನ. ಅವರ ಈಚಲು ಮರದ ಕೆಳಗೆ, ನನ್ನ ನಾಯಿ, ರಥ ಸಪ್ತಮಿಯ ಚಲುವ, ಮುಂತಾದ ಉದಾಹರಣೆಗಳನ್ನು ನೋಡಿದರೆ ಪು.ತಿ.ನ. ಹಿಂದೂ ಧರ್ಮವೇ ಶ್ರೇಷ್ಠ ಎಂದು ನಂಬಿದ್ದರೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪು.ತಿ.ನ. ಮೂಲತಃ ಭಾಗವತ ಪರಂಪರೆಯನ್ನು ನಂಬಿಕೊಂಡು ಬಂದ ಭಕ್ತ ಕವಿ. ಸಂಸ್ಕೃತಿ ಪಲ್ಲಟಗಳ ಬಗ್ಗೆ ಅವರಿಗೆ ಕಳವಳವಿತ್ತು ನಿಜ. ಇದಕ್ಕೆ ಅವರ 'ಮೋಟು ಮರದ ಮೇಲೊಂದು ಮುದಿಗಿಳಿ' ಕವಿತೆಯೇ ಬಹುದೊಡ್ಡ ಸಾಕ್ಷಿ. ಅವರದು ವಸಾಹತುಶಾಹಿ ಅನುಭವಗಳಿಂದ ತಲ್ಲಣಗೊಂಡ ಭಕ್ತಿ, ಶ್ರದ್ಧೆ ಎನಿಸುತ್ತದೆ.

ಅಂತಿಮವಾಗಿ ನವೋದಯ ಲೇಖಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಮಾತನ್ನು ಹೇಳಬಹುದು. ಕುವೆಂಪು, ಬೇಂದ್ರೆ, ಪು.ತಿ.ನ., ಕಾರಂತ ಇವರು ಗ್ರಹಿಸಿದ ಹಿಂದೂ ಸಿದ್ಧಾಂತಗಳೇ ಬೇರೆ. ಇವರೆಲ್ಲರೂ ಹಿಂದೂ ಧರ್ಮದ ಒಳಗಡೆ ಇರುವ ಜಡಸ್ಥಿತಿಯನ್ನು, ಮಡಿವಂತಿಕೆಯನ್ನು ವಿರೋಧಿಸಿದವರು. ಆದರೆ ಮೊಗಳ್ಳಿಯವರು ಭೈರಪ್ಪ, ಪೇಜಾವರರು ನಂಬಿರುವ ಹಿಂದೂ ಧರ್ಮದ ಸಿದ್ಧಾಂತಗಳನ್ನು ಅನಗತ್ಯವಾಗಿ ನವೋದಯ ಲೇಖಕರಲ್ಲಿ ತುರುಕುವುದು ಸರಿಯಲ್ಲ.

ನವ್ಯ ಮತ್ತು ದಲಿತ ಬಂಡಾಯದ ಲೇಖಕರನ್ನು ಕುರಿತು ಎತ್ತುವ ತಕರಾರು:

ಮೊಗಳ್ಳಿಯವರು ಲಂಕೇಶರ ಮತ್ತು ತೇಜಸ್ವಿ ಬಗೆಗಿನ ಲೇಖನಗಳು ತಕರಾರಿನಂತೆ ಕಾಣದೆ ವ್ಯಕ್ತಿ ಚಿತ್ರಗಳಂತೆ ಕಾಣುತ್ತವೆ. ಅಲ್ಲದೆ ತೇಜಸ್ವಿ ಕುರಿತು ಮೊಗಳ್ಳಿಯವರ ಕೆಲವು ಅಭಿಪ್ರಾಯಗಳಿಗೆ ನನ್ನ ಸಹಮತವಿದೆ. ಅಡಿಗರ ಭೂಮಿಗೀತವನ್ನು ಗಾಯಗೊಂಡಿದೆ ಎಂದು ಅಭಿಪ್ರಾಯಪಡುತ್ತಾರೆ. ಪ್ರಾಯಶಃ ಮೊಗಳ್ಳಿಯವರ ಮಾನವಿಕ ಮಾನದಂಡಗಳು ಇಂತಹ ಲೇಖನಗಳಲ್ಲಿ ಕೆಲಸ ಮಾಡುವುದಿಲ್ಲ. ಅದು ಮೊಗಳ್ಳಿಯವರಿಗೆ ಚೆನ್ನಾಗಿ ತಿಳಿದಂತಿದೆ. ಭೂಮಿಗೀತ ಕವಿತೆಯನ್ನು ಪ್ರಾಯೋಗಿಕ ನೆಲೆಯ ವಿಶ್ಲೇಷಣೆಯ ಕಡೆಗೆ ಕೈ ಚಾಚುತ್ತಾರೆ. ಈಗಾಗಲೇ ಬಂದಿರುವ ವಿಮರ್ಶೆಗಳ ಹಿನ್ನೆಲೆಯಲ್ಲಿ ಭೂಮಿಗೀತವನ್ನು ಅವಲೋಕಿಸುತ್ತಾರೆ.

ಆದರೆ ಭೂಮಿಗೀತವೊಂದೇ ಅಡಿಗರ ಮಹತ್ವಾಕಾಂಕ್ಷೆಯ ಕವಿತೆಯಲ್ಲ. ಅದೇರೀತಿ

ಅನಂತಮೂರ್ತಿಯವರನ್ನು ಕೂಡ ವೈದಿಕ ಚೌಕಟ್ಟಿನಲ್ಲಿ ತಂದು ನಿಲ್ಲಿಸುತ್ತಾರೆ. ವಾಸ್ತವವಾಗಿ ಕಾರಂತರು ತಮ್ಮ ಕಾದಂಬರಿಗಳಲ್ಲಿ ಬ್ರಾಹ್ಮಣ ಸಮುದಾಯಗಳನ್ನು ತರುವ ಬಗೆಗೂ ಅನಂತಮೂರ್ತಿಯವರು ಪರಿಚಯಿಸುವ ಬಗೆಗೂ ಕೆಲವು ವ್ಯತ್ಯಾಸಗಳಿವೆ. ಕಾರಂತರು ಬರೆಯುತ್ತಿದ್ದ ಸಂದರ್ಭ, ಸುಧಾರಣಾವಾದ ಮತ್ತು ವಸಾಹತುಶಾಹಿ, ವಸಾಹತೋತ್ತರದ ಸಂದರ್ಭಗಳಲ್ಲಿ ಈ ಕಾಲದಲ್ಲಿ ಕಾರಂತರಿಗಿದ್ದ ಸವಾಲುಗಳೇ ಬೇರೆ. ಅನಂತಮೂರ್ತಿಯವರು ಸಂಸ್ಕಾರ ಬರೆದ ಸಂದರ್ಭ ನವ್ಯ ಕಾಲದ ಉತ್ತುಂಗಸ್ಥಿತಿ ಹಾಗೂ ದಲಿತ-ಬಂಡಾಯದ ದನಿಗಳು ಕೇಳಿಬರುತ್ತಿದ್ದ ಕಾಲ. ವಾಸ್ತವವಾಗಿ ಸಂಸ್ಕಾರದಿಂದ ದಿವ್ಯದ ತನಕ ಅನಂತಮೂರ್ತಿಯವರು ವೈದಿಕತನದ ಹುಳುಕುಗಳನ್ನು ತೆಗೆಯುತ್ತಲೇ ಬಂದಿದ್ದಾರೆ. ಒಂದು ರೀತಿಯಲ್ಲಿ ಅವರ ಕಾದಂಬರಿಗಳು ವೈದಿಕತನದ ಪಲ್ಲಟಗಳನ್ನು ಅನಾವರಣಗೊಳಿಸುತ್ತಿರಬಹುದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ನವ್ಯದಲ್ಲಿ ಜಾನಪದ ಸತ್ವವನ್ನು ಮೈಗೂಡಿಸಿಕೊಂಡಿರುವ ಕಂಬಾರರ ಚಕೋರಿಯನ್ನು ಮೊಗಳ್ಳಿಯವರು ತೀವ್ರ ತರಾಟೆಗೆ ತೆಗೆದುಕೊಳ್ಳುತ್ತಾರೆ. ಕಂಬಾರರು ಹುಡುಕುವ ಪ್ರತಿಮೆಗಳು, ರೂಪಕಗಳೆಲ್ಲವೂ ಹೊಸತಲ್ಲ ಎಂಬುದು ಅವರ ನಿಲುವು. ಈ ಬಗ್ಗೆ ಹೆಚ್ಚು ಅಧ್ಯಯನಗಳು ನಡೆಯಬೇಕಾಗಿದೆ. ಕಂಬಾರರನ್ನು ಸೇರಿಸಿಕೊಂಡಂತೆ ಶಾಂತರಸ, ಕುಂವೀ, ಮುಂತಾದವರ ಹಿನ್ನೆಲೆಯಲ್ಲಿ ಲೈಂಗಿಕ ಪ್ರತಿಮೆಗಳನ್ನು ತೀವ್ರವಾಗಿ ವರ್ಣಿಸುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಥನ ಕ್ರಮವನ್ನು ಸಮರ್ಥವಾಗಿ ಶಾಂತರಸರು ಮುಂದುವರೆಸಿದರು. ವಾಸ್ತವವಾಗಿ ಅವರ ಕಥೆಗಳಲ್ಲಿ ಬರುವ ಲೈಂಗಿಕತೆ, ಅನೈತಿಕ ಸಂಬಂಧಗಳೆಲ್ಲವೂ ಗ್ರಾಮೀಣ ಪ್ರಪಂಚದ ಭಾಗವಾಗಿಯೇ ಬರುತ್ತವೆ. ಇದೇ ಭಾಗದ ಮತ್ತೊಬ್ಬ ಕಾದಂಬರಿಕಾರ, ಕವಿಯಾದ ಜಂಬಣ್ಣ ಅವರ 'ಕುರುವಯ್ಯ ಮತ್ತು ಅಂಕುಶ ದೊಡ್ಡಿ' ಇದಕ್ಕೆ ಬಹುದೊಡ್ಡ ನಿದರ್ಶನ. ಇದರಲ್ಲಿ ಬುಡಕಟ್ಟು ಸಂಸ್ಕೃತಿಯೊಂದರ ದರ್ಶನ, ಆ ಜೀವನ ಕ್ರಮದಲ್ಲಿನ ಲೈಂಗಿಕತೆ, ಹಾದರ, ಅದರಲ್ಲೂ ಬುಡ್ಡಮ್ಮಳ ಪಾತ್ರ ಮುಂತಾದವನ್ನು ನೋಡಿದರೆ ನಮಗರಿವಾಗುತ್ತದೆ.

ಮೊಗಳ್ಳಿಯವರು ದಲಿತ-ಬಂಡಾಯದ ಲೇಖಕರಾದ ದೇವನೂರು ಮಹಾದೇವ, ಬರಗೂರು, ಚಂಪಾ ಅವರನ್ನು ತೀವ್ರ ತರಾಟೆಗೆ ಎತ್ತಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅವರು ಬಳಸುವ ಭಾಷೆ ಬೇರೊಂದು ದಿಕ್ಕಿಗೆ ಸಾಗಿದೆ ಎನ್ನಬಹುದು. ಬರಗೂರರದು ಹುಸಿ ಬಂಡಾಯವೆಂದು ಜರೆದು, ಅವರು ಇತರ ಬಂಡಾಯದ ಲೇಖಕರನ್ನು ಹಿಂದೆ ಸರಿಸಿದರು ಎಂದು ಹೇಳುವ ಮೊಗಳ್ಳಿ ಬರಬರುತ್ತಾ ಬರಗೂರರ ಸಾಹಿತ್ಯವನ್ನು ಗೌಣ ಮಾಡಿಕೊಂಡು ವ್ಯಕ್ತಿತ್ವವನ್ನು ಉದ್ದಕ್ಕೂ ಟೀಕಿಸುತ್ತಾರೆ. ಬಂಡಾಯ ಚಳುವಳಿಯನ್ನು ಬರಗೂರು ಒಬ್ಬರೆ ಬೆಳೆಸಿಲ್ಲ ಎಂಬುದು ಅವರಿಗೂ ತಿಳಿದ ವಿಷಯವೇ. ಅನಗತ್ಯವಾಗಿ ಬರಗೂರು ಅವರನ್ನು ದ್ರೋಣಾಚಾರ್ಯರ ಮಟ್ಟಕ್ಕೆ ಏರಿಸುವುದು ಸರಿಯಲ್ಲ. ಏಕೆಂದರೆ, ಬರಗೂರರಷ್ಟೇ ಸಮರ್ಥ ಬಂಡಾಯ ಲೇಖಕರಾದ ಡಿ.ಆರ್. ನಾಗರಾಜ್, ಚಂಪಾ, ರಹಮತ್ ತರೀಕೆರೆ, ಚೆನ್ನಣ್ಣ ವಾಲೀಕರ, ಜಂಜಣ್ಣ ಇವರೆಲ್ಲ ಆ ಮಿತಿಗಳನ್ನು ದಾಟಿ ಬೆಳೆದಿದ್ದಾರೆ.

ಇನ್ನು ದೇವನೂರರನ್ನು ಬೆಳೆಸಿದ್ದೆ ಬ್ರಾಹ್ಮಣ ವಿಮರ್ಶೆ ಎನ್ನುವ ದಾಟಿಯಲ್ಲಿ ಅವರ ಸಾಹಿತ್ಯವನ್ನು ಚರ್ಚಿಸುತ್ತಾರೆ. ವಾಸ್ತವವಾಗಿ ಬ್ರಾಹ್ಮಣ ವಿಮರ್ಶೆ, ದಲಿತ ವಿಮರ್ಶೆ, ಶೂದ್ರ ವಿಮರ್ಶೆ ಎಂಬ ಮಾನದಂಡಗಳು ಕನ್ನಡ ಸಾಹಿತ್ಯ ಚಿಂತನೆಯಲ್ಲಿ ಇವೆಯೆ? ದೇವನೂರರ ಕುಸುಮಬಾಲೆಯನ್ನು ನಿರಚನವಾದ

ಹಿನ್ನೆಲೆಯಲ್ಲಿ ಚರ್ಚಿಸುವ ರಾಜೇಂದ್ರ ಚೆನ್ನಿಯವರನ್ನು ಕನ್ನಡ ವಿಮರ್ಶೆ ಯಾವತ್ತೂ ಮರೆಯುವ ಹಾಗಿಲ್ಲ. ಕುಸುಮಬಾಲೆಯೂ ಸೇರಿದಂತೆ ದೇವನೂರರ ಸಾಹಿತ್ಯ ಅಂದಿನ ಪ್ರಬುದ್ಧ ವಿಮರ್ಶಕರ ಗಮನ ಸೆಳೆದಿದ್ದರೆ ಅದು ಮಹದೇವರ ಸೃಜನಶೀಲತೆಯ ಉತ್ತುಂಗಸ್ಥಿತಿಯೇ ಕಾರಣ. ಈ ಮಾತು ಸಿದ್ಧಲಿಂಗಯ್ಯನವರಿಗೂ ಅನ್ವಯಿಸುತ್ತದೆ. ಇಷ್ಟಕ್ಕೂ ಮೊಗಳ್ಳಿಯವರು ದಲಿತ ಬರಹಗಾರರನ್ನು 'ದರ್ಜೆ'ಗಳ ಹಿನ್ನೆಲೆಯಲ್ಲಿ ಗುರುತಿಸುವುದೇ ತಪ್ಪು ಕಲ್ಪನೆ ಎಂದು ನನ್ನ ಅನಿಸಿಕೆ. ಇವರ ಭರಾಟೆಯಲ್ಲಿ ದೇವನೂರು, ಸಿದ್ಧಲಿಂಗಯ್ಯರಷ್ಟೇ ನೋವಿನ ಅನುಭವಗಳನ್ನು ಕಟ್ಟಿಕೊಡುತ್ತಿರುವ ಟಿ. ಯಲ್ಲಪ್ಪ ಎನ್. ಕೆ. ಹನುಮಂತಯ್ಯ, ಸುಬ್ಬು ಹೊಲೆಯಾರ್, ಮುಂತಾದ ಲೇಖಕರನ್ನು ಮೊಗಳ್ಳಿಯವರು ಉಲ್ಲೇಖಿಸದೇ ಹೋಗುತ್ತಾರೆ. ದಲಿತ ಚಳುವಳಿಗಳ ಬಗ್ಗೆ ಪ್ರಸ್ತಾಪಿಸುವ ಮೊಗಳ್ಳಿ ಇತ್ತೀಚೆಗೆ ಕೆ. ಜಿ. ನಾಗರಾಜಪ್ಪನವರು ಬರೆದಿರುವ ಲೇಖನವನ್ನು ನಾವೆಲ್ಲರೂ ಮತ್ತೆ ಮತ್ತೆ ಓದಬೇಕಾಗುತ್ತದೆ (ಸಂಚಯ – ಸಂಚಿಕೆ ೭೭)

ಬೆಸಗರಹಳ್ಳಿ ರಾಮಣ್ಣ ಅವರು ಕನ್ನಡ ಕಥನ ಕ್ರಮಕ್ಕೆ ನಿಸ್ಸಂದೇಹವಾಗಿ ಜೀವ ತುಂಬಿದವರು. ಆದರೆ ದಲಿತ-ಶೂದ್ರರ ಸಂಬಂಧ, ಘರ್ಷಣೆಗಳನ್ನು ಇವರಷ್ಟು ಸಮರ್ಥವಾಗಿ ಯಾರೂ ಕಟ್ಟಿಕೊಟ್ಟಿಲ್ಲ ಎಂದು ಮೊಗಳ್ಳಿ ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವನ್ನು ಇದೇ ಸೀಮೆಯವರಾದ ಶ್ರೀ ಕೃಷ್ಣ ಆಲನಹಳ್ಳಿ, ಕಾಳೇಗೌಡ ನಾಗವಾರ, ಕಾ. ತ. ಚಿಕ್ಕಣ್ಣ ಮತ್ತು ಕ. ವೆಂ. ರಾಜಗೋಪಾಲ, ಜಂಜಣ್ಣ ಅಮರಚಿಂತ, ಕುಂ. ವೀ., ಬರಗೂರರ ಕೆಲವು ಕತೆಗಳ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶೀಲಿಸುವ ಅಗತ್ಯವಿದೆ. ಇಷ್ಟಕ್ಕೂ ಕಾನೂರು ಹೆಗ್ಗಡಿತಿ, ಮದುಮಗಳು ಕಾದಂಬರಿಗಳಲ್ಲೇ ದಲಿತ-ಶೂದ್ರರ ಸಂಬಂಧಗಳನ್ನು ಕಾಣಬಹುದು.

ಇದೇ ರೀತಿ ನವ್ಯದ ಸಂದರ್ಭದಲ್ಲೂ ಕೂಡ ಮೊಗಳ್ಳಿಯವರು ದೇಸಾಯಿ, ಚಿತ್ತಾಲ, ಅನಂತಮೂರ್ತಿ, ಲಂಕೇಶ್, ತೇಜಸ್ವಿ ಇವರ ನಡುವೆ ಖಾಸನೀಸರಂಥ ಕಥೆಗಾರರನ್ನು ಮರೆತು ಚರ್ಚೆ ಮಾಡುವುದು ಆಶ್ಚರ್ಯ ಉಂಟುಮಾಡುತ್ತದೆ.

ತಕರಾರುವಿನ ಕೊನೆ ಕೊನೆಯ ಹಂತಕ್ಕೆ ಮೊಗಳ್ಳಿಯವರ ಲೇಖನಿ ಪ್ರಬುದ್ಧ ಮಟ್ಟಕ್ಕೆ ತಿರುಗಿದಂತೆ ಕಾಣುತ್ತದೆ. ಬಸವಣ್ಣನವರ ಕುರಿತು ಮತ್ತು ಛಂದಸ್ಸು ಇದರ ಬಗ್ಗೆ ಮೌಲಿಕ ಅಭಿಪ್ರಾಯ ಮಂಡಿಸುತ್ತಾರೆ. ಅದರಲ್ಲೂ ಬಸವಣ್ಣನ ನಾಯಕತ್ವದ ಸಡಿಲತೆಯನ್ನು ಮೊಗಳ್ಳಿಯವರು ಅನುಮಾನದಿಂದ ನೋಡುವುದು ಗಮನಿಸಬೇಕಾದ ಸಂಗತಿ. ಇದನ್ನು ಅವರು ಅನೇಕ ದಲಿತ - ಹಿಂದುಳಿದ ವಚನಕಾರರ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಕೆಲವು ಹೊಸ ಬಗೆಯ ಒಳನೋಟಗಳನ್ನು ಒದಗಿಸುತ್ತಾರೆ. ಯುವ ಬರಹಗಾರರು ಛಂದಸ್ಸನ್ನು ಗ್ರಹಿಸಬೇಕಾದ ನೆಲೆಗಳ ಬಗ್ಗೆ ಮೊಗಳ್ಳಿಯವರು ವಿವರವಾಗಿ ಚರ್ಚಿಸುತ್ತಾರೆ.

ಅಂತಿಮವಾಗಿ ಮೊಗಳ್ಳಿಯವರು ತಕರಾರು ಕೃತಿಯಲ್ಲಿ ಬಳಸಿದ ಭಾಷೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದಾದರೆ, ವಾಗ್ವಾದವನ್ನು ಮತ್ತು ಪ್ರತಿಕ್ರಿಯೆಗಳನ್ನು ವಿಸ್ತರಿಸಲು ಬಳಸುವ ಭಾಷೆ ಎಚ್ಚರಿಕೆಯಿಂದ ಇರುವುದನ್ನು ಕಾಣಬಹುದು. ಶೂದ್ರ ತಪಸ್ವಿಯ ಹಿನ್ನೆಲೆಯಲ್ಲಿ ಮಾಸ್ತಿ, ಕುವೆಂಪು ಬಳಸುವ ಭಾಷೆ, ನವ್ಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ದೇಸಾಯಿ-ಕಾರ್ನಾಡ್ ಉಪಯೋಗಿಸುವ ಭಾಷೆಗೂ, ಈಗ ಮೊಗಳ್ಳಿಯವರು ತಕರಾರುವಿನಲ್ಲಿ ಬಳಸಿದ ಭಾಷೆಗೂ ಸಾಕಷ್ಟು ವ್ಯತ್ಯಾಸಗಳಿವೆ. ಒಂದು ರೀತಿಯಲ್ಲಿ ಅದು 'ಜಗಳ'ದ ಭಾಷೆಯಂತೆ ಕಾಣುತ್ತದೆ. ಏನೇ ಆದರೂ ದೇಸೀ, ದಲಿತರು ಮತ್ತು ಜಾಗತೀಕರಣ, ಈ ಕೃತಿಗಳು ಬೆಳೆಸಿದ ಅರ್ಥಪೂರ್ಣ ಚರ್ಚೆಯನ್ನು 'ತಕರಾರು' ಬೆಳೆಸದೇ ಹೋಗುತ್ತದೆ.

ಕೊನೆ ಮಾತು:

ಲೇಖನದ ಪ್ರಾರಂಭದಲ್ಲಿ ನಾನು ಮಾನವಿಕ ಮಾನದಂಡಗಳ ಕುರಿತು ಪ್ರಸ್ತಾಪಿಸಿದ್ದೆ. ತಕರಾರುವಿನಲ್ಲಿ ಎಲ್ಲ ಲೇಖನಗಳು ಪ್ರಜ್ಞಾಪೂರ್ವಕವಾಗಿಯೇ ಅವುಗಳನ್ನು ವಿರೋಧಿಸಿವೆ. ಅದರಲ್ಲೂ ಇವು ಅತ್ತ ಅಂಕಣ ಬರಹಗಳೂ ಅಲ್ಲ, ಇತ್ತ ಯಾವುದೇ ವಿಮರ್ಶಾ ಮಾನದಂಡಗಳ ಶಿಸ್ತಿಗೂ ಅನ್ವಯಿಸಿಲ್ಲ. ಒಂದು ರೀತಿಯಲ್ಲಿ ಮೊಗಳ್ಳಿಯವರಿಗೆ 'ಜಾತಿ'ಯೊಂದೇ ಮುಖ್ಯ ಮಾನದಂಡವಾಗಿದೆ. ಜಾತಿ, ವರ್ಗ, ಇವುಗಳನ್ನು ಸಂಸ್ಕೃತಿಯ ಪರಿಕಲ್ಪನೆಯ ಚೌಕಟ್ಟಿನಲ್ಲಿ ನೋಡುವ ಬಗೆಯೇ ಬೇರೆಯದಾಗಿದೆ. ಸೃಜನಶೀಲ ಸಾಹಿತ್ಯದಲ್ಲೂ, ಲೇಖಕನ ವೈಯಕ್ತಿಕತೆಯಲ್ಲಿ ವರ್ಗವನ್ನು ಆ ಕಾಲದ ಪಲ್ಲಟಗಳ ದೃಷ್ಟಿಯಿಂದ ನೋಡಬೇಕಾಗಿದೆ. ಗುಂಡಪ್ಪ, ಪು.ತಿ.ನ., ಕಾರಂತ, ಮಾಸ್ತಿ ಮುಂತಾದ ದೊಡ್ಡ ಲೇಖಕರನ್ನು ಮೊಗಳ್ಳಿಯವರು ಜಾತಿಯ ಹಿನ್ನೆಲೆಯಲ್ಲಿ ಟೀಕಿಸುವುದಕ್ಕೆ ಯಾವ ಮುಖ್ಯ ಪುರಾವೆಗಳೂ ಇಲ್ಲ. ಒಂದು ಭಾಷಣದಲ್ಲಿ ಡಾ. ವಿಜಯ ಅವರು ಹೇಳಿದಂತೆ ದೇವನೂರರ ಒಡಲಾಳ ಕತೆಯನ್ನು ಓದಿ ಅವರನ್ನು ತಬ್ಬಿಕೊಂಡಿದ್ದ ಪು.ತಿ.ನ. ಅವರದು ಮಡಿವಂತಿಕೆಯೇ? ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯಲ್ಲಿ ಬರುವ ಮಹದೇವಶಾಸ್ತ್ರಿ ಎಂಬ ಅವಧೂತನ ಬಗ್ಗೆ ಹೇಳುವ ಮಾತುಗಳು ಕುಟುಂಬದ ತಂಗಿಯರ ಬಗೆಗಿನ ಮಾತುಗಳು ಮಡಿವಂತಿಕೆಯ ಲಕ್ಷಣವೇ? ಮೊಗಳ್ಳಿಯವರು ಇವ್ಯಾವುದನ್ನೂ ಗಮನಿಸುವುದೇ ಇಲ್ಲ. ಮೊಗಳ್ಳಿಯವರಿಗೆ ಜಾತಿಯನ್ನು ಸಾಂಸ್ಕೃತಿಕ ಸಮಾನತೆಯ ನೆಲೆಯಲ್ಲಿ ನೆಲೆಗೂಡಿದ ಲೋಹಿಯಾ ಅವರು ನೆನಪಿಗೆ ಬರುವುದೇ ಇಲ್ಲ. ಇವೆಲ್ಲಕ್ಕೂ ಕುರ್ತಕೋಟಿಯವರ ಮಾತುಗಳೇ ಸಾರ್ಥಕವಾಗಿವೆ. ತಕರಾರಿನ ಹಿನ್ನೆಲೆಯಲ್ಲಿ ಮೊಗಳ್ಳಿ ಮುಂದಿನ ಪೀಳಿಗೆಯವರನ್ನು ಕುರಿತು ಮಾತನಾಡುತ್ತಾರೆ. ತಕರಾರು ಆರೋಗ್ಯವಂತ ಸಾಹಿತ್ಯ ವಿದ್ಯಾರ್ಥಿಗಳ ಮನಸ್ಸನ್ನು ಸಂಪೂರ್ಣವಾಗಿ ಕೆಡಿಸುತ್ತದೆ. ಅನೇಕ ದಲಿತ ಬರಹಗಾರರ ಉತ್ತಮ ಕವಿತೆ, ಅನುಭವದ ಕಥನಗಳು ಇಂದು ಪ್ರಕಟವಾಗದೇ ನಾಲ್ಕು ಗೋಡೆಗಳ ಮಧ್ಯೆ ಕೊಳೆಯುತ್ತಿರುವುದು ನೋಡಿದರೆ, ತಕರಾರುವಿನ ಅಪ್ರಸ್ತುತತೆ ಎದ್ದು ಕಾಣುತ್ತದೆ.

■
ನಂ. ೬೩೩, ೭ನೇ 'ಎ' ಕ್ರಾಸ್
ಮುನೇಶ್ವರ ಬಡಾವಣೆ, ಲಗ್ಗೆರೆ
ಬೆಂಗಳೂರು - ೫೬೦ ೦೫೮
ಮೊಬೈಲ್ : ೯೮೮೬೨೭೯೪೪೧

ಪುಸ್ತಕ ಪರಿಚಯ

.... ನೀರಿಗೆ ಬಿಟ್ಟು

ಮೀನಿನ ಹೊಳಪನ್ನು ನೀರಿಗೇ ಬಿಟ್ಟು

ಕವನ ಸಂಕಲನ

ಲೇಖಕ:
ವಸಂತ ಬನ್ನಾಡಿ
ಪ್ರಕಾಶನ:
ತಿಂಗಳು ಬೆಳಕು ಪ್ರಕಾಶನ
ಕುಂದಾಪುರ
ಪ್ರಕಟಣಾ ವರ್ಷ : ೨೦೦೮
ಬೆಲೆ : ರೂ. ೮೦

ಮೀನಿನ ಹೊಳಪನ್ನು ನೀರಿಗೇ ಬಿಟ್ಟು ವಸಂತಬನ್ನಾಡಿ ಅವರ ನಾಲ್ಕನೇ ಕವನ ಸಂಕಲನ. ಈ ಸಂಕಲನದ ಕುರಿತು ಬರೆಯುವ ಹೊತ್ತಿಗೆ ಮುಂಬೈ ತಾಜ್ ಹೋಟೆಲ್‌ನ ಬಾಂಬ್ ಸ್ಫೋಟದಲ್ಲಿ ಸೈನಿಕರು, ಅಮಾಯಕರು ತೀರಿಹೋಗಿರುತ್ತಾರೆ. ಭಾರತ ಮತ್ತು ಪಾಕ್ ನಡುವೆ ಯುದ್ಧ ಸಂಭವಿಸುವ ಸಾಧ್ಯತೆಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ.

ಜೀವ ಹಿಂಡುವ ಇಂತಹ ಸದ್ಯದ ಸಂಕಟವನ್ನು ಇಲ್ಲಿ ಬೇಕಂತಲೇ ಉಲ್ಲೇಖಿಸಿದ್ದೇನೆ. ಇಲ್ಲಿ ಕವಿಗೆ ರೂಪಕಗಳ ಗಂಟಲು ಒತ್ತಿ ಸುಮ್ಮಗಿರಿಸಿ ನಮ್ಮೆಲ್ಲರನ್ನು ಕದಡುತ್ತಿರುವ ಚಿತ್ರಗಳನ್ನು ಸಂಗತಿಗಳನ್ನು ಸಾಧ್ಯವಾದಷ್ಟು ಕಾವ್ಯಾತ್ಮಕವಾಗಿ ಹೇಳುವುದು. ಇಲ್ಲವಾದರೆ ಮಾತಾಡಿಕೊಂಡೆವು ಹಾಗೆ ಎಂಬಂತೆ ಬರೆಯುವುದರಲ್ಲಿ ಇರುವ ಆಸಕ್ತಿಯನ್ನು ಮೀನಿನ ಹೊಳಪನ್ನು ನೀರಿಗೇ ಬಿಟ್ಟು ಸಂಕಲನದ ಕವಿತೆಗಳು ಮನವರಿಕೆ ಮಾಡಿಕೊಡುತ್ತವೆ. ಹೀಗೆ ಮನವರಿಕೆ ಮಾಡಿಕೊಡುವಾಗಲೂ ಕೇಳಿಸುತ್ತಿದೆಯೇನೋ ನನ್ನ ದನಿ ನಿನಗೆ? ಹಾಗೆಂದು ಕವಿ ಪ್ರಶ್ನಿಸುತ್ತಾನೆ.

ಕದಡಿದ ಚಿತ್ರ, ಕವಲೊಡೆದ ದಾರಿ, ಸಾಯುವ ಆಟ, ಒಳ್ಳೆಯವನ ಮೊಗವಾಡ ಪುಸ್ತಕವನ್ನು ಓದಿದ ನಂತರವೂ ಉಳಿದು ಕಾಡುತ್ತವೆ. ಉಳಿದಂತೆ ಕೆಲವು ತುಂಡು ಸಾಲುಗಳು (ಉದಾ: ಜಾರಿಹೋಯಿತು ಕಾಲ ಕೆಳಗಿನ ಹಲಗೆ) ಮಸುಕಾಗಿ ಉಳಿದು ಬಿಡುತ್ತವೆ. ಈ ತೆರನಾದ ಸಾಲುಗಳು ಮತ್ತೊಂದು ಕಲಾಕೃತಿಯಾಗಲು ಹವಣಿಸಿದಂತೆ ತೋರುತ್ತದೆ. (ಉದಾ: ಖಾಲಿಯಾಗು ಮರಳಿ ಬರಲು, ಕ್ರೌರ್ಯಕ್ಕೆ ಹೆಡೆಯಿದೆ, ಕಣ್ಣ ಸಂಜ್ಞೆಗೆ ಕಿವಿ ಮಾರಿಕೊಂಡು).

ಮೌನ ಒಂದು ಮಹಾ ಶಾಪ ಎಂದು ಹೇಳುತ್ತದೆ ವಸಂತ ಬನ್ನಾಡಿರವರ ಕವಿತೆಯೊಂದು. ಆದರೂ ಇಲ್ಲಿ ಸ್ಪಷ್ಟವಾಗುವುದೆಂದರೆ

ಹಲವು ಕವಿತೆಗಳಲ್ಲಿ ಕವಿ ಬೇಜಾನು ಮಾತನಾಡಿ ಆಯಾಸ ಮಾಡಿಕೊಂಡಿದ್ದಾರೆ. ಕದಡಿದ ಚಿತ್ರದಂತಹ ಕವಿತೆಯನ್ನೇ ಗಮನಿಸಿದರೆ ಈ ಕವಿ ನಿವಾರಿಸಿಕೊಳ್ಳಲೇ ಬೇಕಾದ ಶಬ್ದ ದುಂದುಗಾರಿಕೆ ಮತ್ತು ಪಡೆಯಬೇಕಾದ ಶಬ್ದಗುಣ ಮನವರಿಕೆಯಾದೀತು.

ನಮ್ಮ ಕಾಲದಲ್ಲಿ ತಲೆ ಎತ್ತಿರುವ ಹಿಂಸೆಯ ಹಲವು ರೂಪಗಳನ್ನು ಪ್ರತಿಕೃತಿಯಲ್ಲಿ ಹಿಡಿಯಲಷ್ಟೇ ಇಲ್ಲಿ ಕವಿ ಮನಸ್ಸು ಮಾಡುವುದರಿಂದ ಇದೇ ತೊಡಕಾಗಿಬಿಡುವ ಸಾಧ್ಯತೆ ಇಲ್ಲಿ ಕಾಣಿಸುತ್ತದೆ. ಹೀಗಿದ್ದಾಗಲೂ ವಸಂತಬನ್ನಾಡಿಯವರ ಮೀನಿನ ಹೊಳಪನ್ನು ನೀರಿಗೆ ಬಿಟ್ಟು ಸಂಕಲನದ ಕವಿತೆಗಳು ಈ ಎಂದಿನಂತೆಯೇ (ನೀಲಿ ಹೂ, ನಿಜದ ನೆಲೆ) ಇಲ್ಲಿ ಮನುಷ್ಯನಾಗುವ ಕಷ್ಟವನ್ನು ಕಾಣಿಸುತ್ತಲೇ ಮನುಷ್ಯರಂತೆ ಬಾಳುವ ತುಂಬು ಹಂಬಲವನ್ನು ವ್ಯಕ್ತಮಾಡುತ್ತವೆ ಎಂಬುದು ಗಮನಾರ್ಹ.

ಮುಖ್ಯವಾಗಿ ಇಲ್ಲಿ ಈ ಸಂಕಲನದ ಮುನ್ನುಡಿ ಚರ್ಚಾಸ್ಪದವಾಗಿದೆ. ಈ ಮುನ್ನುಡಿಯನ್ನು ಡಿ.ಎಸ್. ನಾಗಭೂಷಣರು ಬರೆದಿದ್ದಾರೆ. ಹಾಗೆ ನೋಡಿದರೆ ಈ ಮುನ್ನುಡಿ ಈ ತನಕದ ಕನ್ನಡ ಕಾವ್ಯ ಸಮೀಕ್ಷೆಯ ನಕ್ಷೆಯಂತಿದೆ. ಎರಡನೇ ಪುಟದ ಎರಡನೇ ಭಾಗದಲ್ಲಿ ಎಚ್.ಎಸ್.ಶಿವಪ್ರಕಾಶ್ ರಿಂದ ಹಿಡಿದು ಎಸ್. ಮಂಜುನಾಥ್ ಕಾವ್ಯದವರೆಗೂ ನಡೆಸಿರುವ ವಿಮರ್ಶೆ ಸದ್ಯಕ್ಕೆ ಕನ್ನಡದ ಕಾವ್ಯ ವಿಮರ್ಶಕರು ಹೇಳಲು ಧೈರ್ಯ ಮಾಡದ ಹಲವು ಸೂಕ್ಷ್ಮ ಒಳನೋಟ, ವಿವೇಚನೆಯಿಂದ ಕೂಡಿದೆ. ಇಲ್ಲಿ ಉಲ್ಲೇಖಿಸಿರುವ ಅಂಶಗಳು ಹೆಚ್ಚು ಪ್ರಸ್ತುತವಾಗಿದೆ. ಆದರೆ ಇದೇ ಭಾಗದಲ್ಲಿ ಅವಶ್ಯವಾಗಿ ಗಮನಿಸಬೇಕಾದ ಚಂದಶೇಖರ ತಾಳ್ಯ, ಸ. ಉಷಾ, ಎಚ್.ಎಸ್.ವೆಂಕಟೇಶಮೂರ್ತಿ, ನಾ.ಮೊಗಸಾಲೆ, ಜಯಂತಕಾಯ್ಕಿಣಿ, ಆನಂದ ಝುಂಜರವಾಡ, ಲಕ್ಷ್ಮೀಪತಿ ಕೋಲಾರ, ಜಿ.ಕೆ. ರವೀಂದ್ರ ಕುಮಾರ್, ಕೆ.ಪಿ. ಮೃತ್ಯುಂಜಯ ಇವರ ಕಾವ್ಯದ ಕುರಿತು ಮಾತನಾಡದೆ ಹಾಗೆ ದಾಟಿಕೊಂಡು ಹೋಗಿಬಿಟ್ಟಿರುವುದನ್ನು ನೋಡಿದರೆ ಮುನ್ನುಡಿಕಾರರಿಗೆ ಅಂತಹ ಅರ್ಜೆಂಟ್ ಏನಿತ್ತು ಅನಿಸುತ್ತದೆ. ಈ ನಂತರ ತಲೆಮಾರಿನ ಕವಿಗಳು ಅಲ್ಪತೃಪ್ತರೆಂದು ಡಿ.ಎಸ್.ಎನ್.ರವರು ಸೂಚಿಸಿರುವ ಹೆಸರುಗಳು ಸಹ ದುಡುಕಿನ ತೀರ್ಮಾನವಾಗಿದೆ. ಇಲ್ಲಿ ಉಲ್ಲೇಖಿಸಿರುವ ಕವಿಗಳು ಸದ್ಯಕ್ಕೆ ಒಂದು ಅಥವಾ ಎರಡು ಕವನ ಸಂಕಲನಗಳನ್ನು ಮಾತ್ರವೇ ಪ್ರಕಟಿಸಿ ಈಗಲೂ ಚೆಂದವಾದ ಕವಿತೆಯನ್ನು ಬರೆಯುತ್ತಿರುವರು. ವಿ.ಎಂ. ಮಂಜುನಾಥ್, ರವಿ ದ್ರಾವಿಡ್, ಎಚ್.ಆರ್. ರಮೇಶ್ ಇವರ ಕಾವ್ಯವನ್ನು ಹಳೇ ನವ್ಯವನ್ನು ಹೊಸ ಬಾಟಲಿಯಲ್ಲಿ ತುಂಬಿಕೊಡುತ್ತಿದ್ದಾರೆ ಎನ್ನುವುದು ಮತ್ತೊಂದು ಅತಿರೇಕದ ಅನಿಸಿಕೆ.

ಸದ್ಯಕ್ಕೆ ಸ್ವಯಂಪ್ರಭಾ ಒಬ್ಬರೇ ನಿಜವಾದ ಹೊಸಧ್ವನಿ ಎಂದು ಡಿ.ಎಸ್.ಎನ್.ರವರು ಹೇಳುವ ಮಾತು ತಮಾಷೆಯಾಗಿ ಕಾಣಿಸುತ್ತದೆ. ಅಂಕುರ್ ಬೆಟಗೇರಿ, ವಿ.ಆರ್. ಕಾರ್ಪೆಂಟರ್, ಮಲ್ಲಿಕಾರ್ಜುನ ಗೌಡ ತೂಲಹಳ್ಳಿ, ವಡ್ಡಗೆರೆ ನಾಗರಾಜಯ್ಯ, ನಾಗಣ್ಣ ಕಿಲಾರಿ, ಮಹದೇವ ಶಂಕನಪುರ... ಇವರೆಲ್ಲರ ಕವಿತೆಗಳು ಹೊಸ ಧ್ವನಿಯೊಂದಕ್ಕೆ ತಡಕಾಡುವ ಪ್ರಯತ್ನದಲ್ಲಿ ಉತ್ತಮ ಕವಿತೆಗಳನ್ನು ಬರೆಯುತ್ತಿರುವುದನ್ನು ಮರೆಯಬಾರದು ಅನಿಸುತ್ತದೆ.

ಡಿ.ಎಸ್.ನಾಗಭೂಷಣರವರು ವಿಸ್ತಾರವಾದ ಕನ್ನಡ ಕಾವ್ಯದ ಆವರಣದೊಳಗೆ ನಿಂತು ಎಲ್ಲವೂ ಈಗಾಗಲೇ ಇತ್ಯರ್ಥವಾಗಬೇಕಿತ್ತು ಅಥವಾ ಎಲ್ಲವೂ ಈಗಲೇ ಇತ್ಯರ್ಥವಾಗಬೇಕು ಎಂಬಂತೆ ಹಠಕ್ಕೆ ಬಿದ್ದು ತೀರ್ಮಾನ ಕೈಗೊಳ್ಳುತ್ತಾರೆ. ಹೀಗೆ ತೀರ್ಮಾನ ಕೊಡುವಾಗಲೂ ಸಹ ಅವಶ್ಯಕವಾಗಿ ಗಮನಿಸಬೇಕಾದ ಕವಿಗಳನೇಕರನ್ನು ಬಿಟ್ಟಿದ್ದಾರೆ. ಹೀಗೆ ಬಿಟ್ಟಿರುವುದರ ಹಿಂದೆ ಇಲ್ಲಿ ಇಡಿಯಾದ ಕಾವ್ಯದ ಓದು ಆಗಿಯೇ ಇಲ್ಲವೇನೋ ಎಂಬ ಸಂದೇಹವೂ ಮೂಡುತ್ತದೆ. ಹಾಗಾಗಿ ಮುನ್ನುಡಿ ಕಾರ್ಯವನ್ನು ಮುನ್ನುಡಿಕಾರರು ಜವಾಬ್ದಾರಿಯಿಂದ ನಿರ್ವಹಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

■ ಆರ್. ಸುಧೀಂದ್ರಕುಮಾರ್

ಈಗೇನ್ ಮಾಡೀರಿ ಹಾಗೂ ಕಿಚ್ಚಿಲ್ಲದ ಬೇಗೆ – ಒಂದು ಓದು

ಬದುಕು ರಚಿಸುತ್ತಾ ಸಾಗಿರುವ ಕತೆಯಲ್ಲಿ ಪಾತ್ರಗಳಾಗಿ ಬಿಟ್ಟಿರುವ ನಾವುಗಳು ನಮ್ಮ ಪಾಲಿನ ಬದುಕನ್ನು ಬಾಳುತ್ತ ಸಾಗುತ್ತಿರುತ್ತೇವೆ. ಬಾಳುವ ಪ್ರಕ್ರಿಯೆಯಲ್ಲೇ ಪ್ರತಿಯೊಂದು ಜೀವವೂ ಕತೆಯನ್ನು ಕಟ್ಟುತ್ತಿರುತ್ತದೆ. ಚರಿತ್ರೆಯನ್ನು ಕಟ್ಟುತ್ತಿರುತ್ತದೆ. ಬಾಳಿದ ಬದುಕಿನ ನೆನಪುಗಳ ಗಣಿಯೇ ಆತ್ಮಕತೆಯ ಮೂಲದ್ರವ್ಯ. ತನ್ನ ಬಗ್ಗೆ ತನ್ನ ಕಾಲದ ಬಗ್ಗೆ ತನ್ನವರ ಬಗ್ಗೆ ಹೇಳಬೇಕೆಂಬ ತುಡಿತವೇ ಆತ್ಮಕತೆಗಳ ಹುಟ್ಟಿಗೆ ಮೂಲ ಪ್ರೇರಣೆಯಾಗುತ್ತದೆ. ವ್ಯಕ್ತಿಗಳು ಯಾವ ಕಾರಣಕ್ಕಾಗಿ ಮತ್ತು ಯಾವ ಬಗೆಯಲ್ಲಿ ತಮ್ಮ ಜೀವನದ ಕತೆಯನ್ನು ನಿರೂಪಿಸುತ್ತಾರೆ ಎಂಬುದು ಕುತೂಹಲಕಾರಿಯಾದುದು. ಮತ್ತೊಬ್ಬರ ಬದುಕಿನ ಬಗೆಗಿನ ಕುತೂಹಲ ಇವುಗಳ ಓದಿಗೆ ಮೂಲ ಪ್ರೇರಣೆ.

ನಮ್ಮಲ್ಲಿ ಆತ್ಮಕತೆಗಳನ್ನು ಪ್ರತ್ಯೇಕವಾಗಿ ಸೃಜಿಸುವ ಪರಂಪರೆ ಇರಲಿಲ್ಲ. ಬದಲಿಗೆ ತಮ್ಮ ಕೃತಿಗಳಲ್ಲೇ ಅಂತರ್ಗತವಾಗುವಂತೆ ಸ್ವವಿವರಗಳನ್ನು ನೀಡುವ ಪರಿಪಾಠವಿತ್ತು. ಆತ್ಮಕತೆಗಳ ಸ್ವತಂತ್ರ ಬರವಣಿಗೆ ಆರಂಭವಾದದ್ದು ಆಧುನಿಕ ಕಾಲದಲ್ಲೇ. ಆತ್ಮಕತೆಗಳ ಅಧ್ಯಯನ ಅವು ರಚಿತವಾದ ಕಾಲದ ಬಗೆಗೆ ಕುತೂಹಲಕಾರಿಯಾದ ಹೊಳಹುಗಳನ್ನು ನೀಡಬಲ್ಲುದು. ಇತಿಹಾಸ ನೀಡಬಹುದಾದ ಚಿತ್ರಕ್ಕಿಂತ ಭಿನ್ನವಾದದ್ದನ್ನು ಆತ್ಮಕತೆಗಳು ಕಟ್ಟಿಕೊಡುತ್ತವೆ. ಒಂದೇ ಗಿಡದ ಟೊಂಗೆಗಳಾದ ಆತ್ಮಕತೆ, ಜೀವನಚರಿತ್ರೆ ಹಾಗೂ ಪ್ರವಾಸ ಕಥನಗಳ ಅಧ್ಯಯನ ಈ ಹಿನ್ನೆಲೆಯಲ್ಲಿ ಇತಿಹಾಸದ ಬಗೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಆಧುನಿಕ ಕಾಲದಲ್ಲಿ ಅಕ್ಷರ ಜಗತ್ತಿಗೆ ತೆರೆದುಕೊಂಡ ಅವಕಾಶವಂಚಿತ ಸಮುದಾಯಗಳು ಹೊಸದೊಂದು ಅನುಭವ ಲೋಕವನ್ನೇ ತೆರೆದಿಟ್ಟವು. ಈ ನಿಟ್ಟಿನಲ್ಲಿ ದಲಿತರ ಹಾಗೂ ಮಹಿಳೆಯರ ಆತ್ಮಕತೆಗಳು ಓದುಗರಿಗೆ ಅನಾವರಣ ಗೊಳಿಸಿದ

ಈಗೇನ್ ಮಾಡೀರಿ

ಅನುಭವ ಕಥನ

ಲೇಖಕ:
ದು. ಸರಸ್ವತಿ
ಪ್ರಕಾಶನ:
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ ಅಂಚೆ
ಬೆಂಗಳೂರು - ೫೬೦ ೦೬೭
ಪುಟಗಳು : ೭೬
ಪ್ರಕಟಣಾ ವರ್ಷ : ೨೦೦೧
ಬೆಲೆ : ರೂ. ೫೦

ಲೋಕ ವಿಸ್ಮಯಕಾರಿಯಾದುದು ಹಾಗೂ ಬೆಚ್ಚಿಬೀಳಿಸುವಂಥದ್ದು. ಉಚಲ್ಯಾ, ಹೋರಾಟ, ಊರುಕೇರಿ, ಗೌರ್ಮೆಂಟ್ ಬ್ರಾಹ್ಮಣದಂತಹ ಕೃತಿಗಳು ಹೇಳಿದ ಬದುಕಿನ ಕತೆಗಳು ಇದುವರೆಗೂ ಪರಿಚಿತವಿಲ್ಲದೆ ಅಜ್ಞಾತವಾಗಿದ್ದ ಲೋಕವೊಂದನ್ನು ತೆರೆದಿಟ್ಟವು. ಹಾಗೆಯೇ ಕುಣಿಯೇ ಘುಮಾ, ರಸೀದಿ ತಿಕೇಟು, ಟೈಂಪಾಸ್, ಈಗೇನ್ ಮಾಡೀರಿಯಂತಹ ಮಹಿಳೆಯರ ಆತ್ಮಕತೆಗಳು ಮೌನವಾಗಿದ್ದ ನದಿಯೊಂದು ಮಾತಾಡಿದಾಗ ನೀಡುವ ಅನುಭವ ಹೇಗಿರುತ್ತದೆ ಎಂಬುದನ್ನು ತೋರಿಸಿಕೊಟ್ಟವು. ಇವು ಕೇವಲ ನೆನಪಿನ ದಾಖಲೆಗಳಾಗದೆ ಅವರು ಬಾಳುತ್ತಿದ್ದ ಬದುಕಿಗೆ ಹಿಡಿದ ಕನ್ನಡಿಯಾಗಿತ್ತು. ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ – ಈ ಕಥಾನಕಗಳು ಮುಸ್ಸಂಜೆಯಲ್ಲಿ ಮೂಡಿಬಂದ ಬಾಳಿನ ಹಿನ್ನೋಟದ ಕತೆಗಳಲ್ಲ. ಬದಲಿಗೆ ತಮ್ಮ ಅಸ್ತಿತ್ವವನ್ನು ತೋರಿಸುವ ಅಸ್ಮಿತೆಯನ್ನು ಸಾರುವ ಸಲುವಾಗಿ ಬಾಳಿನ ಏರು ದಿನಗಳಲ್ಲೇ ರಚಿತಗೊಂಡಂತಹವು.

ಕನ್ನಡದಲ್ಲಿ ಸ್ವತಂತ್ರ ಆತ್ಮಕತೆಗಳು ಹಾಗೂ ಅನುವಾದಿತ ಆತ್ಮಕತೆಗಳ ಪರಂಪರೆಯಿದೆ. ಸ್ವತಃ ಬರೆದ ಆತ್ಮಕತೆಗಳಲ್ಲದೆ ಮತ್ತೊಬ್ಬರಿಂದ ನಿರೂಪಿತಗೊಂಡ ಆತ್ಮಕತೆಗಳೂ ಇವೆ. ಆತ್ಮಕತೆಗಳು ಪುಸ್ತಕ ರೂಪದಲ್ಲಿ ಮಾತ್ರವಲ್ಲದೆ ಲೇಖನಗಳ ಮಾದರಿಯಲ್ಲಿ ಕೂಡ ಪ್ರಕಟವಾಗಿವೆ. ಇವುಗಳಲ್ಲದೆ ಸಂದರ್ಶನ, ವ್ಯಕ್ತಿಚಿತ್ರಗಳಲ್ಲಿ ಕೂಡ ಇದರ ಹೊಳಹುಗಳನ್ನು ಕಾಣಬಹುದಾಗಿದೆ. ಮಹಿಳಾ ಆತ್ಮಕಥಾನಕಗಳ ವಿಷಯಕ್ಕೆ ಬಂದಾಗ ಕೃತಿಗಳ ರೂಪದಲ್ಲಿ ಹೊರಬಂದಿರುವುದಕ್ಕಿಂತ ಹೆಚ್ಚಾಗಿ ಮೇಲೆ ಹೇಳಿದ ಮಾದರಿಯಲ್ಲಿ ಸಿಗುವ ಆಕರಗಳೇ ಹೆಚ್ಚು.

ಸರಸ್ವತಿ ಬಾಯಿ ರಾಜವಾಡೆ, ತಿರುಮಲಾಂಬ, ಕೊಡಗಿನ ಗೌರಮ್ಮ, ಎಂ.ಕೆ. ಇಂದಿರಾ ಮೊದಲಾದ ಹಿರಿಯ ತಲೆಮಾರಿನ ಲೇಖಕಿಯರ ವ್ಯಕ್ತಿಚಿತ್ರಗಳಲ್ಲಿ ಈ ಬಗೆಯ ಆತ್ಮಕಥನದ ಮಾದರಿಗಳನ್ನು ಕಾಣಬಹುದು. ಅದೇ ರೀತಿ ಹಲವು ರಂಗಕಲಾವಿದೆಯರ ಬದುಕಿನ ಚರಿತ್ರೆಗಳು ಕೂಡ ಪ್ರಕಟವಾಗಿವೆ. ಕನ್ನಡದಲ್ಲಿ ಪ್ರಕಟವಾದ ಮೊದಲ ಮಹಿಳಾ ಆತ್ಮಕತೆ ರಂಗಭೂಮಿ ಕಲಾವಿದೆಯಾದ ಮಳವಳ್ಳಿ ಸುಂದರಮ್ಮನವರ 'ಅಭಿನಯ ಶಾರದೆ'. ಕುತೂಹಲದ ಸಂಗತಿಯೆಂದರೆ, ಲೇಖಕಿಯರ ಆತ್ಮಕತೆಗಳಿಗಿಂತ ರಂಗಭೂಮಿ ಕಲಾವಿದೆಯರ ಆತ್ಮಕತೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಂಡಿವೆ. ಅನುಪಮಾ ನಿರಂಜನರ 'ನೆನಪು ಸಿಹಿ-ಕಹಿ', 'ಬರಹಗಾರ್ತಿಯ ಬದುಕು', ಲೇಖ-ಲೋಕದಲ್ಲಿನ ಹಲವು ಲೇಖಕಿಯರ ಆತ್ಮಕಥಾನಾತ್ಮಕ ಲೇಖನಗಳು, ದು.ಸರಸ್ವತಿಯವರ 'ಈಗೇನ್ ಮಾಡಿರೀ?' ಶೈಲಜ ನಾಗರಘಟ್ಟರವರ 'ಕಿಚ್ಚಿಲ್ಲದ ಬೇಗೆ' ಮೊದಲಾದವು ಕನ್ನಡ ಮಹಿಳಾ ಆತ್ಮಕಥಾನಕದ ಭಿನ್ನ ಮಾದರಿಗಳು.

ದು.ಸರಸ್ವತಿಯವರ 'ಈಗೇನ್ ಮಾಡಿರಿ?' ಕೃತಿಯ ನಿರೂಪಣೆಯ ರೀತಿಯಿಂದಲೇ ಗಮನಾರ್ಹವಾದುದು. ಲೇಖಕಿ ತನ್ನ ಬದುಕನ್ನು ಮತ್ತೊಂದು ಪಾತ್ರದ ಬದುಕೆಂಬಂತೆ ನಿರೂಪಿಸುತ್ತಾರೆ. ಬಾಲ್ಯದ ಸೊಗಸು, ಹರೆಯದ ತಲ್ಲಣ, ಕೀಳರಿಮೆ, ನೋವು ಅಪಮಾನಗಳನ್ನು ಗೆಲ್ಲಲು ತಹತಹಿಸಿದ್ದು, ತನ್ನ ಮುಗ್ಧತೆಯ ಕಾರಣದಿಂದಲೇ ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾದದ್ದು... ಇವುಗಳನ್ನು ಅತ್ಯಂತ ನಿರುದ್ವಿಗ್ನ ಶೈಲಿಯಲ್ಲಿ ನಿರೂಪಿಸುತ್ತಾರೆ. ಅನಿರೀಕ್ಷಿತವಾಗಿ ಎದುರಾದ ಕಠಿಣ ಸಂದರ್ಭದಲ್ಲಿ ಸಿಕ್ಕಿಕೊಂಡ ವ್ಯಕ್ತಿ ತನ್ನವರಿಂದ ದೂರವಾಗಿ ಒಂಟಿಯಾಗಿ ನಿಂತು ನೋವಿನಲ್ಲಿ ಹೋರಾಡುತ್ತಲೇ ಮತ್ತೆ ಬದುಕನ್ನು ಕಟ್ಟಿಕೊಳ್ಳುವ ಛಲವನ್ನು ತೋರಿದ ರೀತಿ ಅನನ್ಯವಾದುದು.

ಸರಸ್ವತಿಯವರು ಕೃತಿಯ ಆರಂಭದಲ್ಲಿ ತಮ್ಮ 'ಲೇಖಕಿಯ ಮಾತಿ'ನಲ್ಲಿ "... ಎಲ್ಲೋ ಇವೆ ಎಂದುಕೊಳ್ಳುವ ಕೋರ್ಟು, ಪೊಲೀಸ್, ಸರ್ಕಾರಗಳು ಯಾವಾಗ ಬೇಕಾದರೂ ನಮ್ಮ ಬದುಕೊಳಗೆ

ನುಗ್ಗಿ ತಲ್ಲಣಗೊಳಿಸಿಬಿಡಬಹುದು. ತಲ್ಲಣಗೊಂಡ ಬದುಕು ಮತ್ತೆ ಬದುಕಾಗಬೇಕಾದರೆ ಮಣ್ಣೊಳಗೆ ಹೂತು ಮರು ಮೊಳಕೆಯೊಡೆದಂತೆ. ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ! ವಾದ, ಸಾಕ್ಷಿಗಳ ಲೋಕ ಒಂದು ಕಡೆ, ನಂಬಿಕೆ, ವಿಶ್ವಾಸಗಳ ಲೋಕ ಒಂದು ಕಡೆ ನಡುವೆ ತಲ್ಲಣಿಸುವ ಬದುಕುಗಳೆಷ್ಟೋ? ಬದುಕು ತಲ್ಲಣಗೊಳ್ಳುತ್ತದೆಯೇ ಹೊರತು, ನಿರ್ನಾಮವಾಗುವುದಿಲ್ಲ. ಕಟ್ಟಲು ಬರದ ದೊಣ್ಣೆ ಮಡಿಕೆಯನ್ನು ಚೂರು ಮಾಡಬಹುದಷ್ಟೇ ಮತ್ತೆ ಕಟ್ಟುವ ಯೋಗ್ಯತೆ ಅದಕ್ಕಿಲ್ಲ. ತಲ್ಲಣಗೊಂಡರೂ ಸಡ್ಡು ಹೊಡೆದು ನಿಲ್ಲಬೇಕೆಂಬ ಚೈತನ್ಯ ಯಾರ ಸ್ವತ್ತೂ ಅಲ್ಲ. ಬದುಕು ಕಾನೂನು ಕಟ್ಟಲೆ, ನೀತಿ-ನಿಯಮ, ವೃತ್ತಿ... ಇತ್ಯಾದಿಗಳ ಮೀರಿದ್ದು'' ಎಂದು ಹೇಳಿರುವಲ್ಲಿ ಕೃತಿಯ ಸಾರ ಅಡಗಿದೆ. ಸಮಾಜವು ರೂಪಿಸಿರುವ ಕಾನೂನು, ಶಿಕ್ಷೆಯಂತಹ ವ್ಯವಸ್ಥೆಗಳು ಯಾವ ಸ್ವರೂಪದ್ದು ಎಂಬುದರ ಬಗೆಗೆ ಯೋಚಿಸುವಂತಾಗುತ್ತದೆ. ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ನಿರೂಪಣೆಯಲ್ಲಿ ಪಾತ್ರದ ಛಲ ಮತ್ತು ಅಸಹಾಯಕತೆಗಳು ವ್ಯಕ್ತವಾಗುತ್ತದೆಯಾದರೂ ಎಲ್ಲೂ ಅದು ಕರುಣೆಯನ್ನು ಬೇಡುವುದಿಲ್ಲ. ಕೃತಿಯ ಅಂತ್ಯ ಕೂಡ ವಿಶಿಷ್ಟವಾದದ್ದು. ಆರಂಭದಿಂದಲೂ ಅವ್ವನ ಪ್ರಭಾವವನ್ನು ಮಗಳಲ್ಲಿ ಕಾಣಬಹುದು. ಕೃತಿಯು ಅವ್ವ-ಮಗಳು ಇಬ್ಬರೂ ಬಂಧಿಸಿದ ಸಮಾಜದಿಂದ ತಪ್ಪಿಸಿಕೊಂಡು ಹಾರುತ್ತಿರುವ ದೃಶ್ಯದೊಂದಿಗೆ ಮುಗಿಯುತ್ತದೆ. ಬದುಕಿನ ಕಷ್ಟ ಪರಂಪರೆಗಳಿಂದ ಮಗಳನ್ನು ಪಾರು ಮಾಡಲು ಬಂದ ತಾಯಿ ಮಗಳೊಂದಿಗೆ ಹಾರಿಬಿಡುವ ಕ್ರಿಯೆ 'ಕಣ್ಮುಚ್ಚಿ ಹಾರುದ್ರು. ಹಾರಿದಂಗೆ ಹಗುರಾದ್ರು. ಹರ್ತ ಹರ್ತ ದೊಡ್ಡ ಗೋಡೆಗಳು ಗೋಟು, ಕೋರ್ಟು, ಪೊಲೀಸ್ ಸ್ಟೇಷನ್ ಹಿಂದೆ ಹಿಂದೆ ಬೀಳ್ತಾ ಇದ್ವು. ಯಪ್ಪಾ ಸಿಕ್ದೆ ಅಂತ ಎಷ್ಟು ಕಾಡ್ಬುಟ್ರ ನನ್ನ. ಈಗೇನ್ ಮಾಡೀರಿ?' ಎಂದು ಕೇಳುವುದು ಅಡೆತಡೆಗಳನ್ನು ಮೀರುವ ವ್ಯಕ್ತಿ ಚೈತನ್ಯ ಕಂಡುಕೊಳ್ಳುವ ಸ್ವಾತಂತ್ರ್ಯವನ್ನು ಅನುಭವಕ್ಕೆ ತಂದುಕೊಡುತ್ತದೆ.

★

ಶೈಲಜ ನಾಗರಘಟ್ಟರವರ 'ಕಿಚ್ಚಿಲ್ಲದ ಬೇಗೆ' ಸಮಾಜ ನೀತಿ-ನೇಮಗಳನ್ನು ಮೀರಿ ಅಂತರ್ಜಾತಿ ವಿವಾಹವಾಗಿ ಬದುಕನ್ನು ರೂಪಿಸಿಕೊಂಡವರ ಕಥನ. ಬಾಲ್ಯದ ನೆನಪುಗಳೇ ಇಲ್ಲಿ ಮೇಲುಗೈ ಪಡೆದಿವೆ. ಪುಟ್ಟ ಪುಟ್ಟ ನೆನಪುಗಳನ್ನು ಸೇರಿಸಿ ಮಾಡಿದ ಗುಚ್ಛ ಈ ಕಥನ. ತನ್ನೂರು, ತಾನು ಕಂಡ ಜನ,

ಕಿಚ್ಚಿಲ್ಲದ ಬೇಗೆ

ಕವನ ಸಂಕಲನ

ಲೇಖಕ:
ಶೈಲಜ ನಾಗರಘಟ್ಟ
ಪ್ರಕಾಶನ:
ಊರುಕೇರಿ ಪ್ರಕಾಶನ
ಕುಂದಾಪುರ
ಪ್ರಕಟಣಾ ವರ್ಷ : ೨೦೦೫
ಪುಟಗಳು : ೧೪+೯೮
ಬೆಲೆ : ರೂ. ೬೦

ತನ್ನ ಓದು, ಪರಿಸರದ ಬಗೆಗೆ ಆಪ್ತವಾಗಿ ಭಾವುಕವಾಗಿ ಬರೆಯುತ್ತಾರೆ. ತನ್ನ ಸುತ್ತಲ ಹೆಣ್ಣುಗಳ ಬದುಕಿನ ಬಗೆಗೆ ಬರೆಯುವಾಗ ಬರವಣಿಗೆ ಹೆಚ್ಚು ಸೂಕ್ಷ್ಮವಾಗುತ್ತದೆ. ನೆನಪುಗಳನ್ನು ಓದುತ್ತಾ ಹೋದಂತೆ ಲೇಖಕಿಯ ಸ್ವತಂತ್ರ ವ್ಯಕ್ತಿತ್ವದ ಅಭಿಲಾಷೆ ಅರಿವಾಗುತ್ತ ಸಾಗುತ್ತದೆ. ತಾನು ಬಯಸಿದ ಹುಡುಗನೊಂದಿಗೆ ಬದುಕನ್ನು ಕಟ್ಟಿಕೊಳ್ಳುವಲ್ಲಿ ಆಕೆ ತೋರುವ ಧೈರ್ಯ ಮತ್ತು ಛಲ ಇದನ್ನೇ ಎತ್ತಿ ತೋರಿಸುತ್ತದೆ. ಬದುಕಿನಲ್ಲಿನ ಆಯ್ಕೆಯ ಸ್ವಾತಂತ್ರ್ಯವನ್ನು ಬಳಸಿಕೊಂಡ ವ್ಯಕ್ತಿ ತನ್ನ ಬದುಕನ್ನು ಕಟ್ಟಿಕೊಳ್ಳುವ ವಿಧಾನವನ್ನು ಇದು ಹೇಳುತ್ತದೆ. ಸಮಾಜದ ವ್ಯವಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿರುವ 'ಜಾತಿ'ಯನ್ನು ಮೀರುವುದರ ಮೂಲಕ ಸಮಾಜದ ಕಟ್ಟಲೆಗಳನ್ನು ಮುರಿಯುತ್ತಾನೆ. ಆ ಮೂಲಕವೇ ತನ್ನತನವನ್ನು ಕಂಡುಕೊಳ್ಳುತ್ತಾನೆ.

ಲೇಖಕಿಯೇ ಹೇಳುವಂತೆ 'ಜಾತಿ ಎಂಬ ಮಾಯಾ ಸೌಂದರ್ಯದ ಬಲೆಯಲ್ಲಿ ಸಿಕ್ಕಿರುವ ಸಮಾಜ ನನ್ನನ್ನು ಕುಲಗೆಟ್ಟವಳೆಂದು ನಿಂದಿಸಬಹುದು. ಆದರೆ ಕುಲಗೆಡುವುದರಲ್ಲಿ ವ್ಯಕ್ತಿವಿಕಾಸವಿದೆ. ಹಾಗೂ ಸ್ವಾತಂತ್ರ್ಯವಿದೆ ಎಂದು ನಂಬಿದ್ದೇನೆ.' ಬದುಕಿನ ಅನಿವಾರ್ಯತೆಗಳಿಗೆ ತುತ್ತಾಗಿ ಕೈಹಿಡಿದಾತ 'ಅಂತರ್ಜಾತಿ ವಿವಾಹಿತರಿಗೆ ನೀಡುವ ಧನಸಹಾಯದ ಅರ್ಜಿಗೆ ಸಹಿ ಕೇಳಿದಾಗ ಅದನ್ನು ತಿರಸ್ಕರಿಸುವ ಧೈರ್ಯವನ್ನು ಹಂಗಿನ ಬದುಕನ್ನು ಒಲ್ಲೆ' ಎಂಬ ಸ್ವಾಭಿಮಾನವನ್ನು ಪ್ರಕಟಿಸುತ್ತಾಳೆ. ಇದು ನಿಜವಾಗಿ ಕಷ್ಟಗಳನ್ನು ತಾಳಿಯೂ ಬದುಕಬಲ್ಲ ವ್ಯಕ್ತಿ ಚೈತನ್ಯವನ್ನು ಪ್ರಕಟಿಸುತ್ತದೆ.

'ಈಗೇನ್ ಮಾಡೀರಿ?' ಹಾಗೂ 'ಕಿಚ್ಚಿಲ್ಲದ ಬೇಗೆ' ಎರಡೂ ಕೂಡ ಗಮನಿಸಬೇಕಾದ ಎರಡು ಅನುಭವ ಕಥನಗಳು. ಮಹಿಳಾ ಆತ್ಮಕಥನಗಳು ಎಂದು ನೋಡುವುದಕ್ಕಿಂತ ಸಮಾಜ ವ್ಯವಸ್ಥೆಯ ವಿರುದ್ಧ ಬಂಡೆದ್ದು ತಮ್ಮ ಬದುಕನ್ನು ರೂಪಿಸಿಕೊಂಡ ವ್ಯಕ್ತಿಗಳ ಕಥನ ಎಂದು ನೋಡುವುದು ಹೆಚ್ಚು ಸೂಕ್ತವಾಗುತ್ತದೆ. ಇವುಗಳನ್ನು ಲೇಖ-ಲೋಕದಲ್ಲಿನ ವೈದೇಹಿ, ನೇಮಿಚಂದ್ರ, ಶಶಿಕಲಾ ವೀರಯ್ಯ ಸ್ವಾಮಿಯವರ ಲೇಖನಗಳ ಜೊತೆಯಿರಿಸಿ ನೋಡಿದಾಗ ಸಮಾಜದ ವಿವಿಧ ಹಿನ್ನೆಲೆಗಳಿಂದ ಬಂದ ಈ ಲೇಖಕಿಯರು ಹೆಣ್ಣಾಗಿ ಪಡೆದ ಅನುಭವಗಳ ಸ್ವರೂಪ ಹಾಗೂ ಸಮಾಜದ ಕಡೆಗಿನ ಇವರ ನೋಟ ಯಾವ ಪರಿಯದು ಎಂಬುದು ಸ್ಪಷ್ಟವಾಗುತ್ತದೆ.

■ **ಹೇಮ ಎಸ್.**

ಪ್ರತಿಕ್ರಿಯೆ

ಸಂಚಯ ೭೬-೭೭ ಒಟ್ಟಿಗೆ ಸಿಕ್ತು. ಓದಿದೆ. ಎಂದೋ ಕಳೆದ್ಹೋದ ಹಾಡು ಬಾಯಿಗೆ ಬಂದ್ಹಂಗಾಯ್ತು. ಕನ್ನಡ ಸಾಹಿತ್ಯದ ನೈಜ ಪರಿಚಾರಿಕೆ ಹೊತ್ತಂತೆ ಕೆಲ್ಸ ಮಾಡ್ತಿರೋ ನಿಮ್ಮ ಪರಿಶ್ರಮ ಅನನ್ಯವಾದದ್ದು! ಎಕ್ಕುಂಡಿ ಕುರಿತ ಲೇಖನ, ವ್ಯಾಸ ಸ್ಮರಣೆಯ ಬರಹ ಇಷ್ಟವಾದ್ವು. ಅದರಲ್ಲೂ ಪೀರ್‌ಬಾಷರ ಕವಿತೆ ಬಹಳಷ್ಟು ಮುಸ್ಲೀಮರ (ನನ್ನೂ ಸೇರಿ) ಸತ್ವ ಪರೀಕ್ಷೆಗೆ ಹಿಡಿದ ಕನ್ನಡಿಯೇ ಸೈ! ಇನ್ನು ಏನೇನು ಮಾಡಬೇಕೋ ನಾವು ದೇಶ ಪ್ರೇಮ ಸಾಬೀತು ಪಡಿಸಲು!?

ಸಂಚಿಕೆ ೭೭ ಅನೇಕ ಕಾರಣಗಳಿಗೆ ಬಹಳ ಬಹಳ ಇಷ್ಟವಾಯ್ತು. ಚಾಪ್ಲಿನ್‌ನ ಮುಖಪುಟ, ಹುಬ್ಳೀಕರ್‌ರ ರೇಖಾಚಿತ್ರಗಳು ನವಭಾವ ಬಿಂಬಿತದಂತಿದೆ. ವ್ಯಾಸ ಸ್ಮರಣೆಯಲ್ಲಿನ ಅವರ ಬರಹ, ಪತ್ರಶೈಲಿ ಅಮೋಘ! ೭೫ರ ಸಂಚಯದಲ್ಲಿನ ನನ್ನ ಕವಿತೆಯನ್ನು ಮೆಚ್ಚಿ ಅವರು ಎಸ್ಸೆಮ್ಮೆಸ್ ಕಳಿಸಿದಾಗ ದಿಗ್ಭ್ರಾಂತನಾಗಿದ್ದೆ! ನನ್ನಂಥ ಕಿರಿಯನ ಕವಿತೆ ಸೆಳೆದ ಪರಿ ಸಂಕ್ಷಿಪ್ತವಾಗಿ ತಿಳಿಸಿದ್ರು! ಇವುಗಳಲ್ಲಿ ಹೈಲೈಟ್ ತಾವು ಕಿರುಪತ್ರಿಕೆಗಳ ಕುರಿತು ನೀಡಿದ ಪರಿಚಯಾತ್ಮಕ ಬರಹ ಮಾಹಿತಿದಾಯಕ. ನಮ್ಮಲ್ಲಿ ಇಷ್ಟೊಂದು ಕಿರುಪತ್ರಿಕೆಗಳಿರುವುದು ನೋಡಿ ಹೆಮ್ಮೆ ಹಾಗೇ, ಅವುಗಳಲ್ಲಿ ಕೆಲವು ಕುಂಟ್ತಾ ಇರೋದು ಖೇದಕರ! ಸಂಚಯ ಸಮೃದ್ಧತೆಯಿಂದ ಚಿಂತನೆಗೆ ಗ್ರಾಸ ನೀಡುತ್ತಿದೆ. ಧನ್ಯವಾದಗಳು.

ಸಂತೇಬೆನ್ನೂರು ಫೈಜ್ನಟ್ರಾಜ್, ಕಣಿವೆಬಿಳಚಿ,
ಚಿತ್ರದುರ್ಗ ಜಿಲ್ಲೆ



*

'ಸಂಚಯ'ದ ಸಂಚಿಕೆಗಳು ನಿಯಮಿತವಾಗಿ ತಲುಪುತ್ತಿವೆ. ಸಂಚಿಕೆಯಿಂದ ಸಂಚಿಕೆಗೆ ವೈವಿಧ್ಯತೆಯನ್ನು ಕಾಪಾಡಿಕೊಂಡು ಬರುತ್ತಿರುವುದು ನಿಮ್ಮ ಶ್ರಮ ಮತ್ತು ಕಾಳಜಿಯನ್ನು ತೋರಿಸುತ್ತದೆ. ಪ್ರತಿ ಸಂಚಿಕೆಯ ಮುಖಪುಟ, ಬೆನ್ನುಪುಟಗಳಲ್ಲಿನ ವಿನ್ಯಾಸಗಳನ್ನು ಆಯ್ಕೆ ಮಾಡಿ ರೂಪಿಸುವಲ್ಲಿ ನೀವು ವಹಿಸುವ ಶ್ರದ್ಧೆಗೆ ಹ್ಯಾಟ್ಸಾಫ್. ಇಲ್ಲಿಯವರೆಗಿನ ಎಲ್ಲ ಸಂಚಿಕೆಗಳನ್ನಂತೂ ನಾನು ಜೋಪಾನವಾಗಿ ಕಾಯ್ದಿರಿಸಿದ್ದೇನೆ. ಕಾವ್ಯದ ತಾಜಾತನ, ಉತ್ತಮ ಲೇಖನಗಳಿಗೆ ಸಂಚಯ ಸೂಕ್ತ ವೇದಿಕೆಯಾಗಿದೆ.

ವೈ.ಬಿ. ಹಾಲಬಾವಿ, ಶಕ್ತಿನಗರ - ೫೮೪ ೧೭೦,
ರಾಯಚೂರು ಜಿಲ್ಲೆ

*

ನಿಮ್ಮ ಸಂಚಯದಲ್ಲಿ ಬಂದ ಡಾ. ಜಿ.ಬಿ. ಹರೀಶರ ಲೇಖನ 'ಸಾಹಿತ್ಯ ಮತ್ತು ಸಮಯಸಾಧಕತನ' ಓದಿದೆ. ಸಧ್ಯದ ಸಂದರ್ಭದಲ್ಲಿ ಇಡೀ ಕನ್ನಡ ಬರಹಗಾರರ ಲೋಕವನ್ನೇ ಆಕ್ರಮಿಸಿದ ಒಂದು ಬಗೆಯ ನಿರ್ಲಜ್ಜತೆಯ ಪರಿಸರವು, ಉಂಟುಮಾಡಿರುವ ಹಲವು ಸಾಹಿತ್ಯಕ ಚಿತ್ರಗಳನ್ನು ಹರೀಶ್ ತುಂಬ ಚೆನ್ನಾಗಿ ಚಿತ್ರಿಸಿದ್ದಾರೆ. ಅದು ಸತ್ಯವೂ ಆಗಿದೆ. ಪ್ರತಿಯಾಗಿ ಒಂದು ಕಾಲದಲ್ಲಿ ಕನ್ನಡದಲ್ಲಿದ್ದ ಧೀಮಂತ ಚಿಂತಕರ ಚಿತ್ರಗಳನ್ನೂ ಅವರು ಸರಿಯಾಗಿ ನೆನಪಿಸಿದ್ದಾರೆ. ಸಾಹಿತ್ಯ ಮತ್ತು ಬದುಕು, ಎರಡನ್ನೂ ಅವಿನಾಭಾವದಿಂದ ಒಳಗೆಳೆದುಕೊಂಡ ಲೇಖಕರನ್ನು ಅವರು ನಮ್ಮೆದುರು ಹಿಡಿದು ನಿಲ್ಲಿಸಿದುದೂ ಸರಿಯಾಗಿಯೇ ಇದೆ.

ಆದರೆ ನನ್ನ ಒಂದು ಪೂರಕ ಚಿಂತನೆ ಹೀಗಿದೆ. ಹರೀಶ ಅವರು ಚಿತ್ರಿಸಿದ ಎಲ್ಲ ಚಿತ್ರಗಳನ್ನೂ ಒಟ್ಟಾರೆಯಾಗಿ ಗ್ರಹಿಸಿದರೆ, ಅದನ್ನು ಒಂದು ಬಗೆಯ ಆಧುನಿಕ ಮನೋರುಗ್ಣ ಸಾರಸ್ವತ ಜಗತ್ತಿನ ಚಿತ್ರ-ಸಂಕಲನವೆನ್ನಬಹುದು. ಹುಚ್ಚರ ಜಗತ್ತಿಗೆ ಹುಚ್ಚರನ್ನೇ ವೈದ್ಯರೆಂದು ನೇಮಿಸಿದರೆ ಆ ಆಸ್ಪತ್ರೆಯ ವಾತಾವರಣ ಹೇಗಿರಬೇಕೋ ಹಾಗೆ ಇದೆ ಇಂದಿನ ಕನ್ನಡ ಸಾರಸ್ವತ ವಲಯ. ಆದರೆ ಹೀಗೇಕಾಯಿತು? ಎಂಬುದು ಇನ್ನು ಮುಂದಿನ ಚಿಂತನೆ.

ಸಾಹಿತ್ಯ ಜಗತ್ತಿನಲ್ಲಿ ಸಾಹಿತ್ಯದ ಗುಣಮಟ್ಟ ಕಡಿಮೆಯಾಗುವದು ಒಂದು ಕಾಲೋಚಿತ ಪ್ರತಿಕ್ರಿಯೆಯೇ ಆಗಿದೆ. ಒಂದು ಕಾಲದ ಸಾಹಿತ್ಯ-ಸೃಷ್ಟಿಯ ಕಾಲದಲ್ಲಿ, ಅತ್ಯಂತ ಶ್ರೇಷ್ಠ ಸಾಹಿತ್ಯ ರಚನೆಯಾಗುತ್ತಿದ್ದ ಕಾಲದಲ್ಲೂ, ಅತ್ಯುತ್ತಮವಾದ ಎರಡನೇ ಸ್ತರದ (ದರ್ಜೆಯ ಅಲ್ಲ) ಸಾಹಿತ್ಯ ಸೃಷ್ಟಿ ಕನ್ನಡದಲ್ಲಿ ಆಗುತ್ತಲೇ ಇತ್ತು. ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಇಂಥ ಸಾಹಿತ್ಯದ ಉಪಯೋಗ ಬಹಳವಿದೆ ಎಂಬುದನ್ನು ಶಂಕರ ಮೊಕಾಶಿ ಪುಣೇಕರರಂಥವರು ಬಹಳ ಹಿಂದೆಯೇ ಗುರುತಿಸಿದ್ದರು. ನಮ್ಮ ಇಂದಿನ ಸಮಸ್ಯೆ, ಸೃಷ್ಟಿಯಾಗುತ್ತಿರುವ ಸಾಹಿತ್ಯದ ಗುಣಮಟ್ಟದ್ದು ಅಲ್ಲವೇ ಅಲ್ಲ. ಇಂದಿನ ಸಮಸ್ಯೆ ಸುಳ್ಳು ಸಾಹಿತ್ಯ ಸೃಷ್ಟಿಯ ಸಮಸ್ಯೆ. ಮತ್ತು ಸುಳ್ಳನ್ನು ಸತ್ಯವೆಂದು ನಂಬಿಸುವ 'ಸಿದ್ಧಾಂತ-ಮಠ'ಗಳ ಹಟಮಾರಿತನದ ಪ್ರಶ್ನೆ. ಮನುಷ್ಯನನ್ನು ಸಮೂಹದ ಒಂದು ಭಾಗವನ್ನಾಗಿ ಕಾಣಲೇಬೇಕೆಂಬ ಒತ್ತಾಯವನ್ನು ಹಗಲು-ರಾತ್ರಿ ಬಹಿರಂಗದಲ್ಲಿ ಜಪಿಸುತ್ತ, ಸದಾ ತನ್ನ ವ್ಯಕ್ತಿಗತ ಭೋಗ ಮತ್ತು ಅಹಂಗಳ ತೃಪ್ತಿಗಾಗಿಯೇ ಒಳಗೊಳಗೆ ದುಡಿಯುವ ಸುಳ್ಳು ವ್ಯಕ್ತಿತ್ವಗಳಿಂದ ಗಟ್ಟಿಯಾದ ಅಸಲೀ ಕಾವ್ಯ ಹೇಗೆ ಹುಟ್ಟಬೇಕು? ಕನಿಷ್ಠ ಪಕ್ಷದ ಸ್ವಪ್ರಜ್ಞೆ, ಸ್ವವಿಮರ್ಶೆ, ಸ್ವ-ತಪ್ಪೊಪ್ಪಿಗೆ, ಇದಾವದೂ ಇಲ್ಲದ್ದು, ಸಮಸ್ಯೆಯ ಮೂಲವನ್ನು ಇನ್ನಷ್ಟು ಗಡಚು ಮಾಡುತ್ತಿದೆ. ಇದರ ಜೊತೆಗೆ ಈ ಬಗೆಯ ಮಾನಸಿಕ ಸ್ಥಿತಿಯ ಒತ್ತಡ, ಸ್ಥಿತಿಯ ವಾಸ್ತವವನ್ನು ಇನ್ನೂ ಹೆಚ್ಚು ದಟ್ಟವಾಗಿಸುತ್ತಿರುವ ಆಧುನಿಕ ಕಾಲದ ತಂತ್ರಜ್ಞಾನ, ಮನುಷ್ಯನಿಗೆ ಯಾವುದೂ ಒಂದು 'ಅನುಭವ'ವಾಗಿ ಹರಳುಗಟ್ಟದಂತೆ ತಡೆಯುತ್ತಿದೆ. ಇದು 'ಸಾವಿ'ನಂಥ ಘನವಾದ ಅನುಭವಕ್ಕೂ ಸಲ್ಲುವ ಮಾತಾಗಿದೆ. ಮಾಹಿತಿ ಇಲ್ಲವೆ ಸಂದೇಶ ಮಾತ್ರವಾಗಿ ತಟ್ಟಿ, ತಟ್ಟಿದ್ದನ್ನು ಹಿಡಿಯಬೇಕೆನ್ನುವಷ್ಟರಲ್ಲೇ, ವಿಸ್ಮೃತಿಗೆ ಸಂದುಹೋಗುವಷ್ಟು, ಮನುಷ್ಯನ ಭಾವ-ಜಗತ್ತು, ಚಿತ್ರ-ಲೋಕಗಳು, ಅಸ್ಥಿರವಾದ ಅರಿಕೆಗಳಿಂದ ತುಂಬಿ ಹೋದರೆ 'ಸೃಜನಶೀಲತೆ'ಗೆ ಬೇಕಾದ ಧ್ಯಾನ-ಸಂಪನ್ಮೂಲವಾದರೂ ಎಲ್ಲಿದೆ?

ಹೀಗಾಗಿ ನಮ್ಮ ಇಡೀ ಕನ್ನಡ ಸಾಹಿತ್ಯ ಲೋಕ ಘಟೋತ್ಕಜನ 'ಮಾಯಾ ಬಜಾರ್' ಆಗಿದೆ. ಯಾರು ಯಾವಾಗ ಏನು ಉಡುತ್ತಾರೋ? ಬೆತ್ತಲಾಗುತ್ತಾರೋ? ಏನೂ ತಿಳಿಯದು.

'ಅನುಭವ'ವೆಂಬ ಘಟಕದ ಮೂರ್ತ ಆವಿಷ್ಕಾರಕ್ಕಾಗಿ, ಮನುಷ್ಯನ ದೇಹ-ಮನಸ್ಸು-ಬುದ್ಧಿಗಳನ್ನು ಹದಗೊಳಿಸುವ ಒಂದು ಅವ್ಯಕ್ತ ಕೆಲಸವನ್ನು ನಮ್ಮ 'ಧರ್ಮ' ಮಾಡುತ್ತಿತ್ತು. ನಮ್ಮ

ಹುಟ್ಟು, ಸಂಸ್ಕಾರ, ಸ್ಥಿತಿ-ಗತಿಗಳು, ಸ್ವಭಾವದ ರೀತಿಗಳು, ಸಾಧ್ಯತೆಗಳು, ಮಿತಿಗಳು, ಇವೆಲ್ಲವುಗಳ ಮೇಲೆ ವ್ಯಕ್ತಿಗೆ ಅರಿವಾಗದಂತೆಯೇ – ಅವನ ಅನನ್ಯತೆಗೆ ತಕ್ಕಂತೆ – ಪರಿಣಾಮ ಬೀರುತ್ತಿದ್ದ ಒಂದು ಜೀವನ ಕ್ರಮಕ್ಕೆ ಕವಿಯೂ ಹೊರತಾಗಿರಲಿಲ್ಲ. ಇದರಿಂದಾಗಿ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿ ಯಾವ ಕಾಲಕ್ಕೂ ಕನ್ನಡದಲ್ಲಿ ಆಗುತ್ತಲೇ ಇತ್ತು. ಬೆಟಗೇರಿ, ಬೇಂದ್ರೆ, ಮಧುರಚೆನ್ನ, ಸಿಂಪಿ, ಈಶ್ವರ ಸಣಕಲ್ಲ, ಬಿ.ಗಿ. ಯಲ್ಲಟ್ಟಿ, ಬಸುಪಟ್ಟಾದ, ಇವರೆಲ್ಲ ಉತ್ತರ ಕರ್ನಾಟಕದಲ್ಲಿ ಒಂದೇ ಕಾಲದಲ್ಲಿ ಕಾವ್ಯ ಸೃಷ್ಟಿ ಮಾಡುತ್ತಿದ್ದರೆಂಬುದನ್ನು ನಾನಂತೂ ಮರೆತಿಲ್ಲ.

ನನ್ನ ಈ ಮಾತುಗಳನ್ನು ನಾನೊಬ್ಬ 'ಮತೀಯ ಧರ್ಮ ಪ್ರಚಾರಕ' ಎಂಬರ್ಥದಲ್ಲಿ ಪರಿಭಾವಿಸಿ, ದೂರ ಸರಿಸುವದು ಬಹಳ ಸುಲಭ ಕೆಲಸ. ಆದರೆ ಸೃಜನಶೀಲತೆಯ ರುಗ್ಣತೆಯ ಬಗೆಗೆ ಆತಂಕಿತರಾದ ಅಲ್ಪಸಂಖ್ಯಾತರಾದರೂ, ನಾವು ಒಂದೆಡೆ ಕುಳಿತು, ನಮ್ಮ ನಮ್ಮ ನೋವುಗಳನ್ನು ನಿಜವಾದ ಆರ್ತತೆಯಿಂದ ಹಂಚಿಕೊಳ್ಳಬೇಕೆಂಬ ಆಶೆ ನನಗಿದೆ. ಏಕೆಂದರೆ, ಕನ್ನಡದಲ್ಲಿ ಎಲ್ಲವೂ ಕೆಟ್ಟಿದೆ ಎಂದು ಕಾಣಿಸುವಂತೆ ಚಿತ್ರವಿದ್ದರೂ, ಕೆಲವರಾದರೂ ನಿಜವಾದ ಶುದ್ಧಾಂತಃಕರಣ ಉಳ್ಳವರು ಇದ್ದಾರೆ. ಅವರು, ನಾವೂ ಕೂಡಿ ಮಾತನಾಡಬೇಕು, ಏನು ಮಾತಾಡಬೇಕು ಎಂಬುದರ ಬಗೆಗೆ ಮಾರ್ಗದರ್ಶನವನ್ನು ನಾವು ನಮ್ಮೊಡನೆಯೇ ಮಾತಾಡಿಕೊಂಡು ಪಡೆಯಬೇಕು. ಅಸಲೀ ಅರಳುವಿಕೆಗೆ 'ವಾಸನೆ' ಇದ್ದೇ ಇರುತ್ತದೆ. ಅದು ಪ್ರಕೃತಿ ನಿಯಮ.

ಆನಂದ ಝುಂಜರವಾಡ, ಮುಧೋಳ, ಬಾಗಲಕೋಟೆ ಜಿಲ್ಲೆ, ದೂ: ೯೦೦೮೨೭೪೩೬೩

*

'ಸಂಚಯ ೭೭', ಅಕ್ಟೋಬರ್ ಸಂಚಿಕೆ ಸುಂದರವಾಗಿದೆ. ಮುಖಪುಟದಲ್ಲಿ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ ಎಂದಿರುವುದು ಸಮಂಜಸ ಎನ್ನುವಂತೆ, ಸಾಂಸ್ಕೃತಿಕ ಪತ್ರಿಕೆಯಾಗಿ ಕೆಲವು ಅರ್ಥಪೂರ್ಣ ಲೇಖನಗಳೂ, ಕವಿತೆಗಳೂ ಎಂದಿನಂತೆ ಪ್ರಕಟವಾಗಿವೆ. ಕವಿತೆಗಳಿಗೇ ಹೆಚ್ಚು ಪ್ರಾಧಾನ್ಯ. ಒಂದಕ್ಕಿಂತ ಮತ್ತೊಂದು ಕವಿತೆ ಧ್ವನಿಪೂರ್ಣವಾಗಿದೆ. ತಮಿಳಿನ ಖ್ಯಾತ ಕವಿ ವೈರಮುತ್ತುವಿನ 'ಮುದಿಕನ್ಯೆ'ಯನ್ನು ಮಲರ್‌ವಿಳಿ ತಮಿಳಿನಿಂದ ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ. 'ಕೆನ್ನೆಯಲ್ಲಿ ಬಿದ್ದ ಸಣ್ಣ ಗುಳಿಗಳಲ್ಲಿ ನನ್ನ ಕನಸಿನ ಸಮಾಧಿಗಳು' ಮುಂತಾದ ಕವಿಯ ಅನಿಸಿಕೆಗಳು ಎಷ್ಟು ಅರ್ಥಗರ್ಭಿತವಾಗಿವೆ! ಎಂ.ವ್ಯಾಸರ ಒಂದು ಕಥೆ ಯಾವಾಗಲೋ ಹಿಂದೆ ಓದಿದ್ದು ನೆನಪನ್ನು ಮರುಕಳಿಸಿದೆ. ಬಿ.ವಿ. ರಾಧಾಕೃಷ್ಣರ 'ನನ್ನ ತಂದೆ' ಹಾಗೆಯೇ ರಾಜರತ್ನಂರವರ ಬಗ್ಗೆ ಸಮಗ್ರ ಕಾವ್ಯ ಬಿಡುಗಡೆಯ ಸಂದರ್ಭದಲ್ಲಿ ಸು.ರಂ. ಎಕ್ಕುಂಡಿಯವರನ್ನು ಕುರಿತು ಆನಂದ ಝುಂಜರವಾಡರು ಮಾಡಿದ ಭಾಷಣದ ಸಾರಾಂಶ, ರಾಜರತ್ನಂರವರ ಬಗ್ಗೆ ಜಿ.ಬಿ. ಹರೀಶರ ಅನಿಸಿಕೆಗಳು ಮತ್ತೆ ಮತ್ತೆ ಓದುವಂತಿವೆ. ಎಲ್ಲಕ್ಕಿಂತ ಮುಖ್ಯವಾದದ್ದು ಸಣ್ಣ ಪತ್ರಿಕೆಗಳು ಮಾಡುತ್ತಿರುವ ನುಡಿ ಸೇವೆ, ಸದ್ದಿಲ್ಲದೆ ಪ್ರಚಾರವನ್ನು ಬಯಸದ ಈಗಿನ ಆರ್ಥಿಕ ಬಿಕ್ಕಟ್ಟಿನಲ್ಲಿ ಅನೇಕ ಕಿರುಪತ್ರಿಕೆಗಳು ಉಳಿದುಬಂದಿವೆ. ಅವು ಮಾಡುತ್ತಿರುವ ಕೆಲಸ ಸ್ತುತ್ಯಾರ್ಹವಾದುದು. ಅಂಥ ಪತ್ರಿಕೆಗಳ ಒಂದು ನೋಟವನ್ನು ಡಿ.ವಿ. ಪ್ರಹ್ಲಾದ್‌ರವರು ಓದುಗರಿಗೆ ಪರಿಚಯಿಸಿಕೊಟ್ಟಿದ್ದಾರೆ. ಇನ್ನಷ್ಟು ಶ್ರಮ ವಹಿಸಿದರೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕನ್ನಡ ಮುಂತಾದ ಕಡೆ ಮೇಲೂ ಕೆಲವು ಪತ್ರಿಕೆಗಳು ಸಿಗುತ್ತಿತ್ತೇನೋ! ಇರಲಿ. ಇಂದಿನ ಮಾರುಕಟ್ಟೆಯ ಪೈಪೋಟಿಯಲ್ಲಿ ಇವು ಹೇಗೆ ಉಳಿದು ಮುಂದುವರಿಯುತ್ತಲೇ ಇವೆ ಎನ್ನುವಾಗ, ಅವುಗಳ ಸಾಹಸವನ್ನೂ ನಾವು ಮೆಚ್ಚಲೇಬೇಕಾಗುತ್ತದೆ.

ಶೇಷನಾರಾಯಣ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು -೫೬೦ ೦೯೭

ಹೊಸ ಯುಗದ ಅನ್ವೇಷಣೆಗೆ ಬದುಕು ಪಕ್ಕಾಗುತ್ತಿರುವಾಗ ಸಾಹಿತಿಯೂ ಹಿಂದೆ ಬಿದ್ದಿಲ್ಲ; ದುರಂತವೆಂದರೆ ಅವನೊಳಗಿನ ಸಾಹಿತಿಯೂ ಜೀವಂತವುಳಿದಿಲ್ಲ. ವೇಷಕ್ಕೆ ತಕ್ಕ ಬೈರೂಪ ಮಾಡುವ ರಾಜಕಾರಣಿಗೂ, ಇಂದು ಎಲ್ಲೆಂದರಲ್ಲಿ ಮೂಗು ತೂರಿಸುವ ಉದ್ದಾಮ ಸಾಹಿತಿಗೂ ನಡುವೆ ಅಂತರದ ಗೆರೆಗಳೇ ಇಲ್ಲ! ಇಂದಿನ ವಾಸ್ತವದ ಬದುಕನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಸುತ್ತಲಿನ ಸಾಮಾಜಿಕ ವಾತಾವರಣದಲ್ಲಿ ಬದ್ಧತೆಯನ್ನು ಎತ್ತಿ ಹಿಡಿಯಬೇಕಿದ್ದ ಸಾಹಿತಿಗಳು ಚಳವಳಿಗಳ ಹೆಸರಿನಲ್ಲಿ ತಮ್ಮ ಸುತ್ತ ಬೇಲಿ ಹಾಕಿಕೊಳ್ಳುತ್ತಿರುವುದು ಹೊಸ ಸಂಗತಿಯೇನೂ ಅಲ್ಲ. ಡಾ. ಜಿ.ಬಿ. ಹರೀಶ್‌ರ ಸಾಹಿತ್ಯ ಮತ್ತು ಸಮಯ ಸಾಧಕತನ ಲೇಖನಕ್ಕೆ ಪೂರಕ ಅನಿಸಿಕೆ ಇದು.

'ತನ್ನ ಒಳಗನ್ನು ಬರೆಯುವ ಛಾತಿ ಹೊಸ ತಲೆಮಾರಿನ ಲೇಖಕನಿಗೆ ಇಲ್ಲ ಎಂಬ ಮಾತು ನೂರಕ್ಕೆ ನೂರು ಸತ್ಯ. ಇಂದು ಬರವಣಿಗೆಗೂ ಆಮಿಷಗಳು ಬರುತ್ತಿರುವಾಗ ಯಾರು ತಾನೇ ಜಿಲೇಬಿಗೆ ರಂಗು ಹಾಕಿ ಸೆಳೆಯಲು ಪ್ರಯತ್ನಿಸುವುದಿಲ್ಲ ಹೇಳಿ! ಸಿಹಿಯ ಸಲುವಾಗಿ ಜಿಲೇಬಿ ಕೊಳ್ಳಬೇಕಾದವನು ಬಣ್ಣಕ್ಕೆ ಮರುಳಾಗುವಷ್ಟು ತನ್ನ ಉದ್ದೇಶಗಳನ್ನು ತಿರುಚಿಕೊಂಡಿರುವಾಗ ಸಾಹಿತಿ ತನ್ನ ಕೃತಿಗೆ ಬಣ್ಣ ಹಾಕದೇ ಇರುತ್ತಾನೆಯೆ? ಈ ಪ್ರಶ್ನೆಯ ಮೂಲ ಇರುವುದು ಇಂದಿನ ವ್ಯಾಪಾರೀಕರಣದ ಯುಗದಲ್ಲಿ, ಪ್ರತಿಯೊಂದನ್ನೂ ವಾಣಿಜ್ಯದ ಪರಿಭಾಷೆಯಾಗಿ ನೋಡುತ್ತಿರುವಾಗ ಸಾಹಿತಿ ತನ್ನ ಬದುಕಿನ ಬಗ್ಗೆ, ಒಪ್ಪೊತ್ತಿನ ತುತ್ತಿನ ಅನಿವಾರ್ಯತೆಯ ಬಗ್ಗೆ ವಿಚಾರ ಮಾಡುತ್ತಾನೆ... ಸಾಮಾಜಿಕ ಜವಾಬ್ದಾರಿಗೆ ಬೆನ್ನು ಹಾಕಿದ ಲೇಖಕರು ಕಾಲವನ್ನು ಕೆಡಿಸಿದ್ದಾರೆ... ಎಂಬ ಹರೀಶ್‌ರ ಮಾತಿಗೆ ತಕರಾರಿದೆ. ಕೇವಲ ಸಾಹಿತಿ ಸಾಮಾಜಿಕ ಜವಾಬ್ದಾರಿಯ ತೇರನ್ನೇ ಎಳೆಯುತ್ತಿರಬೇಕಾ? ಹೊಸ ಪ್ರಯೋಗಗಳ ಬೆನ್ನು ಬೀಳುವುದು, ಅದನ್ನು ಜಯಿಸುವುದು ಸಾಹಿತ್ಯದ ಬೆಳವಣಿಗೆಯಲ್ಲವಾ? ಪ್ರಶ್ನೆಗಳು ಬೆಳೆಯುತ್ತದೆ. ಆದರೆ ಒಂದಂತೂ ದಿಟ. ಸಮಕಾಲೀನ ರಾಜಕೀಯದೊಂದಿಗೆ ನೆಂಟಸ್ತನ ಬೆಳೆಸಲು ಮುಂದಾಗಿರುವ ಸಾಹಿತಿಗಳು ಆ ಪರಿಧಿಯಿಂದ ಕೊಂಚ ಹೊರಬಂದರೆ, ತನ್ನಿಂತಾನೇ ಇವರು ಜವಾಬ್ದಾರಿಗಳನ್ನು ಹೊರಲು ಸಿದ್ಧವಾಗುತ್ತಿದ್ದರು! ಅಂತರಂಗದಿಂದ ಪ್ರಾಮಾಣಿಕತೆಯೆಂಬುದು ಚಿಲುಮೆ ಚಿಲುಮೆಯಾಗಿ ಹೊರಹೊಮ್ಮುತ್ತಿತ್ತು. ಆದರೆ ಆ ದಿನಗಳು ಕೈಮೀರಿಹೋಗಿದೆ. ಇದು ಸಾಹಿತಿಯೊಬ್ಬನ ತಪ್ಪಲ್ಲ.

'ಸಂಚಯ'ದ ಎಲ್ಲ ಪ್ರಯತ್ನಗಳ ಬಗ್ಗೆ ಖುಷಿಯಾಗುತ್ತಿದೆ. ಈ ಬಾರಿಯ ಸಂಚಿಕೆಯಲ್ಲಿ ಈಚಿನ ಕಿರುಪತ್ರಿಕೆಗಳನ್ನು ಕುರಿತು... ಬರೆದ ಲೇಖನದ ಉದ್ದೇಶ ಅರ್ಥಪೂರ್ಣವಾದದ್ದು. 'ಸಂಚಯ'ದ ಕೆಲವು ಸಂಚಿಕೆಗಳನ್ನಷ್ಟೇ ನೋಡಿದೆ. ಹೊಸಬರಿಗೆ ವೇದಿಕೆ ಒದಗಿಸುತ್ತ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾರ್ಗದರ್ಶನವನ್ನೂ ಮಾಡಿಕೊಡುತ್ತ ಗಟ್ಟಿ ಹೆಜ್ಜೆ ಊರುತ್ತಿರುವ ಪತ್ರಿಕೆ ಇದು. ನಿಜಕ್ಕೂ ಖುಷಿಯಾಗುತ್ತದೆ. ಕಾವ್ಯ ಸಂಚಯ ಇಷ್ಟವಾಯಿತು. ಸಂಚಯವನ್ನು ನಿರಂತರವಾಗಿ ಹೊತ್ತು ತರುತ್ತಿರುವ ಡಿ.ವಿ. ಪ್ರಹ್ಲಾದ್‌ರವರಿಗೆ ಧನ್ಯವಾದಗಳು.

ಎನ್ವೀ. ವೈದ್ಯ ಹೆಗ್ಗಾರ್, ಯಲ್ಲಾಪುರ ರಸ್ತೆ, ಶಿರಸಿ (ಉಕ) - ೫೮೧ ೪೦೧
ಮೊಬೈಲ್: ೯೪೪೯೯೮೭೨೫೦

ಸಂಚಿಕೆಯ ಗ್ಯಾಲರಿ

ಗುಲ್ಬರ್ಗ ಜಿಲ್ಲೆಯಲ್ಲಿರುವ
ಸನ್ನತಿಯ ಶಿಲಾಫಲಕ

ಸನ್ನತಿಯ ಶಿಲ್ಪ

ಸನ್ನತಿಯ ಆಯುಕ್ತಸಂಭ
ಕುಟುಂಬ ದೃಶ್ಯ

SANCHAYA (BI-MONTHLY)
Mag (2) PRB-DECL : 309/94-95

೧೦ನೇ ಶತಮಾನದ
ಅವಲೋಕಿತೇಶ್ವರನ ಕಂಚಿನ ವಿಗ್ರಹ
ಕದ್ರಿ, ದಕ್ಷಿಣ ಕನ್ನಡ ಜಿಲ್ಲೆ



Edited, Printed & Published by D.V. Prahlad, No. 100, 2nd Main, 6th Block
3rd Stage, 3rd Phase, Banashankari, Bangalore - 560 085 Ph : 080-2679 1925